ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

"ಕುಂವೀ ಅವರ ಆಯ್ದ ಕಥೆಗಳು–ಒಂದು ಅಧ್ಯಯನ"

೨೦೦೭-೦೮ನೇ ಸಾಲಿನ ಎಂ.ಫಿಲ್ ಪದವಿ ಭಾಗವಾಗಿ ಸಾದರಪಡಿಸಿದ ನಿಬಂಧ

ಮಾರ್ಗದರ್ಶಕರು
ಡಾ॥ ವಿಜಯ ಕುಮಾರ್ ಅವರೇಕಾಡು,
ಭಾಷಾಂತರಕಾರರು, ಭಾಷಾಂತರ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಸಂಶೋಧಕ
ಎಚ್.ಎಂ.ನಾಗಭೂಷಣ
ಎಂ.ಫಿಲ್ ವಿದ್ಯಾರ್ಥಿ

೨೦೦೭-೦೮
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

[illegible]

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

"ಕುಂವೀ ಅವರ ಆಯ್ದ ಕಥೆಗಳು–ಒಂದು ಅಧ್ಯಯನ"

೨೦೦೭–೦೮ನೇ ಸಾಲಿನ ಎಂ.ಫಿಲ್ ಪದವಿ ಭಾಗವಾಗಿ ಸಾದರಪಡಿಸಿದ ನಿಬಂಧ

ಮಾರ್ಗದರ್ಶಕರು

ಡಾ॥ ವಿಜಯ ಕುಮಾರ್ ಅವರೇಕಾಡು,

ಭಾಷಾಂತರಕಾರರು, ಭಾಷಾಂತರ ವಿಭಾಗ,

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,

ಮೈಸೂರು.

ಸಂಶೋಧಕ

ಎಚ್.ಎಂ.ನಾಗಭೂಷಣ

ಎಂ.ಫಿಲ್ ವಿದ್ಯಾರ್ಥಿ

೨೦೦೭–೦೮

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

<u>ದೃಢೀಕರಣ ಪತ್ರ</u>

೨೦೦೭-೦೮ನೇ ಸಾಲಿನಲ್ಲಿ ನೋಂದಣಿ ಸಂಖ್ಯೆ : **ಕೆ.ವಿ.ಟಿ.ಎಂ/೦೦೧೭೦೮** ವಿದ್ಯಾರ್ಥಿಯಾದ ಎಚ್.ಎಂ.ನಾಗಭೂಷಣ ಎಂ.ಫಿಲ್ ಪರೀಕ್ಷೆಯ ಅಂಗವಾಗಿ **'ಕುಂವೀ ಅವರ ಆಯ್ದ ಕಥೆಗಳು- ಒಂದು ಅಧ್ಯಯನ'** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬೇರೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಮೈಸೂರು

ದಿನಾಂಕ: 13-09-2008

[signature]

[ಡಾ॥ ವಿಜಯಕುಮಾರ್ ಅವರೇಕಾಡು]

ಭಾಷಾಂತರ ವಿಭಾಗ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ, ಮೈಸೂರು – ೫೭೦ ೦೦೬

ಪ್ರಮಾಣ ಪತ್ರ

'ಕುಂವೀ ಅವರ ಆಯ್ದ ಕಥೆಗಳು– ಒಂದು ಅಧ್ಯಯನ' ಎಂಬ ವಿಷಯದ ಸಂಶೋಧನಾ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ನೋಂದಣಿ ಸಂಖ್ಯೆ : ಕೆ.ವಿ.ಟಿ.ಎಂ/೦೦೧೭೦ರ ವಿದ್ಯಾರ್ಥಿಯಾದ ನಾನು ೨೦೦೭–೦೮ನೇ ಸಾಲಿನ ಪರೀಕ್ಷೆಯ ಭಾಗವಾಗಿ ಡಾ॥ವಿಜಯಕುಮಾರ್ ಅವರೇಕಾಡು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ನಿಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಮೈಸೂರು

ದಿನಾಂಕ : ೧೩/೦೯/೨೦೦೮

[ಎಚ್.ಎಂ.ನಾಗಭೂಷಣ]
೨೦೦೭–೦೮ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ,
ಕುವೆಂಪು ವಿದ್ಯಾವರ್ಧಕ ಟ್ರಸ್ಟ್,
ಜಯಲಕ್ಷ್ಮಿಪುರಂ, ಮೈಸೂರು – ೫೭೦ ೦೦೬

ಪರಿವಿಡಿ

ಕುಂವೀ ಅವರ ಆಯ್ದ ಕಥೆಗಳು – ಒಂದು ಅಧ್ಯಯನ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಬೆಳೆದು ಹೆಮ್ಮರವಾಗಿನಿಂತಿದೆ. ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಪ್ರಕಾರಗಳಲ್ಲಿ ಸಣ್ಣ ಕಥೆಯು ಒಂದು. ಕನ್ನಡದಲ್ಲಿ ಕಥನ ಪರಂಪರೆಯು ಜೀವಂತವಾಗಿದ್ದ ಆಧುನಿಕ ರೂಪವನ್ನು ಪಡೆದದ್ದು ಮಾತ್ರ ಪಾಶ್ಚಾತ್ಯ ಮಾದರಿಗಳ ಪ್ರಭಾವದಿಂದ ಸಣ್ಣಕಥೆಗಳು ಅರಂಭಕಾಲದಲ್ಲಿ ಪತ್ರಿಕೆಗಳ ಮೂಲಕವೇ ಬೆಳಕು ಕಂಡಿದ್ದು ಹಾಗೂ ಪಾಶ್ಚಾತ್ಯರಲ್ಲೂ ಹಾಗೇ ಆಗಿದ್ದು ಕಾಕತಾಳಿಯವಿರಬೇಕು. ಈ ಕಥಾಪರಂಪರೆ ಕನ್ನಡದಲ್ಲಿ ಅನೇಕ ಸಾಹಿತ್ಯ ಪ್ರವೃತ್ತಿಗಳಾದ ನವೋದಯ, ಪ್ರಗತಿಶೀಲ, ನವ್ಯ ಹಾಗೂ ಸಾಹಿತ್ಯ ಚಳುವಳಿಯಾದ ದಲಿತ ಬಂಡಾಯದ ಘಟ್ಟಗಳನ್ನು ದಾಟಿ ಬಂದಿದೆ. ಇಲ್ಲಿ ನಾನು ಪ್ರವೃತ್ತಿ ಮತ್ತು ಚಳುವಳಿ ಎಂಬ ಎರಡು ಪದಗಳನ್ನು ಪ್ರತ್ಯೇಕವಾಗಿ ಬಳಸಿದ್ದೇನೆ. ಇದು ಸಾಹಿತ್ಯ ಮತ್ತು ಸಾಹಿತಿಗೆ ಇರುವ ಬದ್ಧತೆಯ ಹಿನ್ನೆಲೆಯಲ್ಲಿ ರೂಪಿಸಿಕೊಂಡ ಪದಗಳು. ಹಾಗೆಂದ ಮಾತ್ರಕ್ಕೆ ನವೋದಯ, ಪ್ರಗತಿಶೀಲ, ನವ್ಯರಿಗೆ ಬದ್ದತೆಯಿರಲಿಲ್ಲವೆಂದಲ್ಲ, ಅದರ ತೀವ್ರತೆ ಕಡಿಮೆ ಎಂದಷ್ಟೆ ಭಾವಿಸಬೇಕು.

ನವೋದಯ ಲೇಖಕರು, ಇರುವ ಸಮಾಜದ ಲೋಪದೋಷಗಳನ್ನೂ ಅದರೊಳಗೆ ಇರುವ ಮಾನವೀಯ ಮುಖಗಳನ್ನು ಒಂದು ವ್ಯವಸ್ಥಿತವಾದ ಸಮಾಜದ ಮಾನವನ ಸುಖ-ದುಃಖ, ದೌರ್ಬಲ್ಯ ಹಾಗೂ ಅವನ ಆಂತರಿಕ ಸಾಮರ್ಥ್ಯ, ಪ್ರಕೃತಿ ಮುಂತಾದ ವಿಷಯಗಳನ್ನು ಪ್ರಧಾನವಾಗಿ ತಮ್ಮ ಕೃತಿಯಲ್ಲಿ ಪ್ರತಿಪಾದಿಸುತ್ತಿದ್ದರು. ಈ ಎಲ್ಲಾ ಲೇಖಕರಿಗೆ ರಾಷ್ಟ್ರೀಯ ಪರಿಕಲ್ಪನೆಯೊಂದು ಜಾಗೃತವಾಗಿಯೇ ಇತ್ತು. ರಾಷ್ಟ್ರೀಕರಣ, ಕರ್ನಾಟಕ ಏಕೀಕರಣ ಅವರ ಬಹು ದೊಡ್ಡ ಕನಸಾಗಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ನವೋದಯದ ಲೇಖಕರು ಎಲ್ಲವನ್ನು ಕುರಿತು ಆಸ್ಥೆಯಿಂದಲೇ ಬರೆದರು. ಅವರು ಪಶ್ಚಿಮ ಸಂಸ್ಕೃತಿಯನ್ನು ಅನುಮಾನದಿಂದಲೇ ನೋಡುತ್ತಿದ್ದರು. ಈ ಜಿಜ್ಞಾಸೆಯು ಅವರ ಕಥೆಗಳ ಜಾಗೃತಸ್ಥಿತಿಗೆ ಕಾರಣವಾಯಿತು.

ನವ್ಯ ಲೇಖಕರಿಗೆ ಸಮಾಜಕ್ಕಿಂತ ವ್ಯಕ್ತಿಯ ವೈಯಕ್ತಿಕ ಸಮಸ್ಯೆಗಳು ದೊಡ್ಡದಾಗಿ ಕಂಡವು. ಈ ಎಲ್ಲಾ ಲೇಖಕರ ಸಾಹಿತ್ಯದ ವಸ್ತು, ಭಾಷೆ, ತಂತ್ರವೆಲ್ಲವು ಪಶ್ಚಿಮದ ಮೂಲದಿಂದಲೇ ರೂಪಿತವಾಗತೊಡಗಿದ್ದವು. ನವ್ಯದ ಬಹುತೇಕ ಲೇಖಕರು ಇಂಗ್ಲಿಷ್ ಅಧ್ಯಾಪಕರಾಗಿದ್ದುದು ಗಮನಿಸಬೇಕಾದ ಅಂಶ. ಒಟ್ಟು ಒಂದು ವ್ಯವಸ್ಥೆಯನ್ನು ವಿರೋಧಿಸುವ ಮಟ್ಟಿಗೆ ಈ ಪ್ರವೃತ್ತಿ ಮುಂದುವರೆಯಿತು. ಈ ಲೇಖಕರಿಗೆ ಧೋರಣೆಗಿಂತ ಸಾಹಿತ್ಯದ ಅಭಿವ್ಯಕ್ತಿವಿಧಾನ ಪ್ರಮುಖವಾಗಿ ಕಾಣತೊಡಗಿತ್ತು. ಸಾಹಿತ್ಯದ ಮೂಲ ಆಶಯಕ್ಕೆ ಧಕ್ಕೆತರುವ ಮಟ್ಟಿಗೆ ಇದು ಮುಂದುವರೆಯಿತು. ಶೋಷಣೆಯಂತಹ ವಸ್ತುವನ್ನು, ಬಡತನ, ಜಾತಿಯಂತಹ ವಸ್ತುವನ್ನು ಹೇಗೆ ಗಟ್ಟಿಗೊಳಿಸಬಹುದು ಎಂಬುದು ಇವರ ನಿಲುವಾಗಿತ್ತು.

ಆದರೆ ಮುಂದೆ ಬಂದ ದಲಿತ ಬಂಡಾಯ ಚಳುವಳಿಗೆ ಮಾತ್ರ ಈ ಮಣ್ಣಿನ ವಾಸನೆ ಮುಖ್ಯವಾಯಿತು. ನಿಂತ ನೆಲದಲ್ಲೇ, ನಿಂತನೆಲೆಯನ್ನು ನೋಡತೋಡಗಿದರು. ಈ ಮಣ್ಣಿನಲ್ಲಿರುವ ಎಲ್ಲಾ ಶೋಷಣೆಯನ್ನು ಅದರ ಒಟ್ಟು ಚರಿತ್ರೆಯೊಡನೆ ಕಟ್ಟಿಕೊಡುವ ಕೆಲಸಮಾಡಿದರು. ಈ ಎಲ್ಲಾ ಲೇಖಕರಿಗೆ ವಿದೇಶದ ಯಾವುದೇ ತತ್ವ ಪರಿಹಾರವಾಗಿ ಕಾಣಲಿಲ್ಲ. ಬದಲಿಗೆ ತತ್ವ ಪ್ರಣಾಳಿಕೆಯನ್ನು ರೂಪಿಸುವ ಅದರ ಮೂಲಕ ಪರಿಹಾರ ಕಂಡುಕೊಳ್ಳುವ ನಿರ್ಧಾರಕ್ಕೆ ಬಂದರು. ಆ ಕಾರಣದಿಂದಲೇ ಏಕಕಾಲದಲ್ಲಿ ವಿದೇಶಿಮೂಲ ಹಾಗೂ ರಾಷ್ಟ್ರೀಯತೆಯ ಕಲ್ಪನೆಗಳನ್ನು ಆರೋಗ್ಯಕರವಾಗಿಯೇ ಮೀರುವ ಕೆಲಸಮಾಡಿದರು.

ಇಂತಹ ಬಂಡಾಯ ಕಥೆಗಾರರಲ್ಲಿ ತುಂಬಾ ಪ್ರಮುಖರಾದ ಲೇಖಕರೆಂದರೆ ಕುಂ.ವೀರಭದ್ರಪ್ಪನವರು. ಸಮಾಜದ ನಿರ್ಲಕ್ಷಿತ ಜನರ ಜೀವನವನ್ನು ಅವರಷ್ಟು ಸಮೀಪದಿಂದ ಹಾಗೂ ಆಳವಾಗಿ ನೋಡಿದವರು ಕನ್ನಡ ಸಮಕಾಲೀನ ಸಾಹಿತ್ಯದಲ್ಲಿ ವಿರಳವೆಂದೇ ಹೇಳಬಹುದು. ದಟ್ಟವಾದ ಅನುಭವ, ಸೂಕ್ಷ್ಮ ವಿವರಗಳಿಂದ ಕೂಡಿದ ನಿರೂಪಣೆ, ಭಾಷೆಯ ಮೂಲಕವಾಗಿಯೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಕುಂ.ವೀರಭದ್ರಪ್ಪ ಅವರನ್ನು ಉಳಿದೆಲ್ಲ ಕಥೆಗಾರರಿಗಿಂತ ವಿಶಿಷ್ಟವಾಗಿರಿಸಿದೆ. ಕುಂವೀ ನಮಗೆ ಪರಿಚಯದ ನೆಲೆಯಲ್ಲಷ್ಟೇ ಅಲ್ಲದೆ, ಪರಿಚಿತವಾದ ನೆಲೆಗಿಂತ ಭಿನ್ನವಾದ ನೆಲೆಯಲ್ಲಿ

ಕತೆಕಟ್ಟುತ್ತಾರೆ. ಕಿವುಡ ನಾಯಿಯಾದ ಪ್ರಸಂಗ ಎಂಬ ಕತೆ ಮೇಲುನೋಟಕ್ಕೆ ಒಂದು ವೈನೋದಿಕ ಕತೆಯಂತೆ ತೋರಿದರೂ ಅದರ ಅಂತರಾಳದ ಒಳಗೆ ನಮ್ಮನ್ನು ಬೆಚ್ಚಿಬೀಳಿಸುವ ಕ್ರೌರ್ಯ, ಶೋಷಣೆ ಎದ್ದು ಕಾಣುತ್ತದೆ, ಕಥೆಯೊಂದಕ್ಕೆ ಇರಬಹುದಾದ ಎಲ್ಲ ಆಯಾಮಗಳನ್ನು ಅವರ, ತೆರೆದಿಡುವ ಪ್ರಯತ್ನ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದದ್ದು. ಅವರ ಅನೇಕ ಕಥೆಗಳ ಶೀರ್ಷಿಕೆಗಳನ್ನು ಗಮನಿಸಿದರೆ ವಿನೋದದಿಂದ ಕೂಡಿದ ಹಾಗೆ ಕಾಣಿಸುತ್ತವೆ. ಅದು ಬಂಡಾಯದ ಕೆಲವು ಹಾಗೂ ದಲಿತದ ಹಲವು ಲೇಖಕರ ವಸ್ತುವನ್ನು ನಿರ್ವಹಿಸಿದ ಅದ್ಭುತ ರೀತಿಯಾಗಿದೆ. ಕಥೆಯನ್ನು ಅದರ ಶೋಷಣೆ, ಆಕ್ರೋಶ, ವರ್ಣನೆಯಲ್ಲಿ ಕಳೆದುಹೋಗದಂತೆ ಎಚ್ಚರಿಕೆ ವಹಿಸುವ ಕ್ರಮವದು. ಕುಂವೀ ಇಂತಹ ಮಹತ್ವದ ಕಥೆಗಾರರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕುಂವೀ ಅವರ ಕೆಲವು ಆಯ್ದ ಕಥೆಗಳನ್ನು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

ಪ್ರಸ್ತುತ ಜಾತಿಪರಿಕಲ್ಪನೆ ಶಿಥಿಲಗೊಂಡಂತೆ ತೋರುತ್ತಿದ್ದರೂ ಅದು ವರ್ಗಪರಿಕಲ್ಪನೆಗೆ ವರ್ಗಗೊಂಡಿದೆ, ವರ್ಗ ಸಂಘರ್ಷ ತನ್ನ ಆದ್ಯಂತಿಕ ಸ್ಥಿತಿಯನ್ನು ಕಂಡು ಕೊಳ್ಳಲಿಕ್ಕೆ ಆಗುವಂತೆ ಜಾತಿಯ ಪರಿಕಲ್ಪನೆ ಅದನ್ನು ಅಂತರ್ಗತದಲ್ಲಿ ಮಂದಗೊಳಿಸುತ್ತಲೂ ಇದೆ. ಇದು ಈಗಿನ ಸನ್ನಿವೇಶದಲ್ಲಿ ಮುಖ್ಯ ಸಂಗತಿಯಾಗಿದೆ. ವರ್ಗ ಪರಿಕಲ್ಪನೆ ಜಾಗೃತಗೊಂಡಂದಿನಿಂದ "ನಕ್ಸಲಿಸಂ" ನಂತಹ ಸಮಸ್ಯೆಗಳು ತಲೆದೋರಿವೆ. ನಕ್ಸಲನಾಡಿನಿಂದ ಕಥೆಬರೆಯುವ ಕುಂ. ವೀರಭದ್ರಪ್ಪ 'ನಕ್ಸಲಿಸಂ' ನ ವಿವಿಧ ಆಯಾಮಗಳನ್ನು ತೆರೆದು ತೋರಿಸುತ್ತಾರೆ. ಊಳೀಗಮಾನ್ಯ ವ್ಯವಸ್ಥೆಯಲ್ಲಿ ಹೇಗೆ ಇಂತಹ ನಕ್ಸಲಿಸಂ ವಿಷಯದಲ್ಲಿ ಕೆಲಸಮಾಡಿದೆ ಎಂಬುದನ್ನು ತೋರಿಸುತ್ತಾರೆ. ಆದರೆ ಕುಂವೀ ಹಿಂಸೆಯ ಪರವಾಗಿ ಇಲ್ಲ ಎಂಬುದು ಮುಖ್ಯ. ಅವರ ಶುಲ್ಕ ಕಥೆಯಲ್ಲಿ ಈ ಉದ್ದೇಶದ ಹಿನ್ನೆಲೆಯನ್ನು ಅಧ್ಯಯನಮಾಡಲು ಪ್ರಯತ್ನಿಸಲಾಗಿದೆ.

ಕುಂ. ವೀರಭದ್ರಪ್ಪ ಅವರ ಬಹುತೇಕ ಕಥೆಯ ನಾಯಕರು ಶೋಷಿತರು. ಅವರನ್ನು ಕುರಿತು ಬರೆಯುವಾಗ ಅವರ ಧೋರಣೆ ಮತ್ತು ಬರವಣಿಯಲ್ಲಿ ಅಂತಹ ಭಿನ್ನತೆಯನ್ನು

ರೂಪಿಸುವುದಿಲ್ಲ. ಕಾರಣ ಪ್ರಾದೇಶಿಕ ಹಿನ್ನೆಲೆಯು ಅಲ್ಲಿನ ಜನಸಾಮಾನ್ಯರ ಅಸಲಿ ಜೀವನವನ್ನು ದಾಖಲಿಸುತ್ತಾರೆ. ಸ್ವಾಂತತ್ರ್ಯ ಬಂದ ನಂತರವೂ ಬದಲಾಗದ ಗ್ರಾಮ ಭಾರತ ಕುರಿತ ಚಿಂತನೆ ಕುಂವೀ ಅವರದು [ಭಾರತದ ಗ್ರಾಮಗಳ ಚಿಂತನೆಯಲ್ಲ] ಈ ದೃಷ್ಟಿಯಿಂದ ಕುಂವೀ ಕಥೆಗಳನ್ನು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

ಕುಂವೀ ಅವರ ಅಭಿವ್ಯಕ್ತಿ ವಿಧಾನ ವಿಶಿಷ್ಟವಾದುದಾಗಿದೆ. ಇವರಷ್ಟು ಸಮರ್ಥವಾಗಿ ಭಾಷೆಯನ್ನು ದುಡಿಸಿಕೊಂಡವರು ಕನ್ನಡ ಭಾಷಾಸಾಹಿತ್ಯದಲ್ಲಿ ಕೆಲವರನ್ನು ಮಾತ್ರ ಕಾಣಬಹುದು. ಭಾಷೆ ಕೇವಲ ತಾಂತ್ರಿಕ ಕೌಶಲ್ಯವಾಗಿಬಿಡುವ ಅಪಾಯವನ್ನು ಮೀರಿ ಅವು ತಳವರ್ಗದವರ ಶೋಷಿತ ಸ್ಥಿತಿಯ ಅನಂತ ತೆರೆದು ತೋರಿಸುವಂತೆ ಮಾಡಿದ ಕೀರ್ತಿ ಕುಂವೀ ಅವರದು. ಆ ಕಾರಣದಿಂದಲೇ ಕುಂವೀರಭದ್ರಪ್ಪ ಪ್ರಾದೇಶಿಕ ಭಾಷೆಯನ್ನು ತಮ್ಮ ಕಥೆಗಳಲ್ಲಿ ಬಳಸುತ್ತಾರೆ. ಈ ಭಾಷೆಯ ಆಯಾಮಗಳನ್ನು ಕುರಿತು ಚಿಂತಿಸುವುದು ನನ್ನ ಮತ್ತೊಂದು ಉದ್ದೇಶವಾಗಿದೆ.

ಈ ಮೇಲಿನ ಉದ್ದೇಶಗಳಿಂದ ನಿಬಂಧದಲ್ಲಿ ಕೆಲವು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಲೇಖಕರ ಕೃತಿಯನ್ನು ಅಧ್ಯಯನಮಾಡುವಾಗ ಅವರ ವೈಯಕ್ತಿಕ ವಿಚಾರವನ್ನು ತಿಳಿದುಕೊಳ್ಳಬೇಕಾಗಿರುವುದು ಅವಶ್ಯ. ಆದುದರಿಂದ ಎರಡನೇ ಅಧ್ಯಾಯದಲ್ಲಿ ಲೇಖಕರ ಬದುಕು ಮತ್ತು ಬರಹದ ಪರಿಚಯವನ್ನು ಮಾಡಿಕೊಡಲಾಗಿದೆ.

ಒಟ್ಟು ಕನ್ನಡ ಕಥಾ ಸಾಹಿತ್ಯ ನಡೆದು ಬಂದ ಮಾರ್ಗವನ್ನು ಗುರುತಿಸುವುದರಿಂದ ಆರಂಭದಿಂದ ಇಲ್ಲಿಯವರೆಗೆ ಕಥಾಸಾಹಿತ್ಯದ ವಿವಿಧ ಹಂತಗಳನ್ನು ತಿಳಿಸಲಾಗಿದೆ. ಮೂರನೆ ಅಧ್ಯಾಯದಲ್ಲಿ ಕುಂವೀ ಹಾಗೂ ವಿವಿಧ ಲೇಖಕರ ಕಥೆಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಬಂಡಾಯ ಚಳುವಳಿಗೆ ಕಾರಣಗಳನ್ನು ವಿವಿಧ ಆಯಾಮದಿಂದ ನೋಡುವ ಪ್ರಯತ್ನವನ್ನು ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ – ಉದ್ದೇಶಗಳ ಅಧ್ಯಯನದ ಸ್ವರೂಪಕ್ಕೆ ಪೂರಕವಾದ ಕಥಾವಸ್ತುವುಳ್ಳ ಕೆಲವು ಆಯ್ದ ಕಥೆಗಳನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಗಿದೆ. ಇದರಲ್ಲಿ ಒಟ್ಟು ಕಥಾಸಾರಾಂಶ ತಿಳಿಯುವ ರೀತಿಯಲ್ಲಿ ಚಿತ್ರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಆಯ್ದ ಕಥೆಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷ ಹಾಗೂ ಆಧುನಿಕತೆ ಹಾಗೂ ಸಂಪ್ರದಾಯಗಳ ನಡುವಿನ ಸಂಘರ್ಷದ ಹಿನ್ನೆಲೆಯಲ್ಲಿ ಉಂಟಾಗುವ ಅನಾಹುತಗಳ ಸ್ವರೂಪವನ್ನು ಅಧ್ಯಯನಮಾಡಲಾಗಿದೆ.

ಆರನೇ ಅಧ್ಯಾಯದಲ್ಲಿ ಕಥೆಗಳ ಭಾಷಾತಂತ್ರ ಮುಂತಾದ ಎಲ್ಲಾ ಅಭಿವ್ಯಕ್ತಿಯ ರೀತಿಯನ್ನು ಅಧ್ಯಯನಮಾಡಲಾಗಿದೆ. ಒಂದು ವಸ್ತು ಭಿನ್ನಬಿನ್ನ ನೆಲೆಗಳಲ್ಲಿ ಭಿನ್ನಭಿನ್ನ ರೀತಿಯಲ್ಲಿ ವಿಶ್ಲೇಷಣೆಗೆ ಒಳಗಾಗುವುದರಿಂದ ಹಾಗೂ ಅಭಿವ್ಯಕ್ತಿಯಾಗುವುದರಿಂದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಕಾಳಜಿಗಳು ನಮ್ಮ ಅರಿವಿಗೆ ಬರುತ್ತವೆ. ಕುಂವೀ ಅವರು ತಮ್ಮ ಕಥೆಗಳಲ್ಲಿ ಪ್ರಮುಖ ಅಂಶಗಳನ್ನು ಅಭಿವ್ಯಕ್ತಿಸುವಾಗ ತಮ್ಮದೇ ಆದ ಪಾತ್ರ, ಭಾಷೆ, ಸನ್ನಿವೇಶಗಳನ್ನು ಸೃಜಿಸುವುದರ ಮೂಲಕ ಕಥೆಯ ಮೂಲ ಆಶಯ ಓದುಗನನ್ನು ಮುಟ್ಟುವ ಹಾಗೆ ಅಭಿವ್ಯಕ್ತಿಸಿದ್ದಾರೆ. ಕುಂವೀ ಅವರು ಏಕೆ ಗ್ರಾಂಥಿಕ ಭಾಷೆಯನ್ನು ಬಳಸದೆ ಪ್ರಾದೇಶಿಕ ಭಾಷೆಯನ್ನು ಕಥೆಗಳಲ್ಲಿ ಬಳಸಿಕೊಂಡಿರಬಹುದು ಎಂದರೆ ಪಾತ್ರಗಳು ಅಥವಾ ಕಥಾನಾಯಕ ತಳವರ್ಗದವನಾಗಿದ್ದಾಗ ಪ್ರಾದೇಶಿಕ ಭಾಷೆಯೇ ಸಮರ್ಥ ಅಭಿವ್ಯಕ್ತಿ ಸಾಧನ ಎಂಬುದನ್ನು ಅರಿವಿಗೆ ತಂದು ಕೊಂಡಿದ್ದರು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಅಧ್ಯಾಯ ಏಳರಲ್ಲಿ ಕಥೆಗಳ ಹಿನ್ನೆಲೆಯಲ್ಲಿ ಲೇಖಕರ ಧೋರಣೆಯೇನು? ಕುಂವೀ ಅವರು ಹೊಂದಿರುವ ಧೋರಣೆಗಳು ವಾಸ್ತವಿಕವಾಗಿವೆಯೇ? ಲೇಖಕರ ಧೋರಣೆ ವಾಸ್ತವಿಕ ನೆಲೆಗಟ್ಟಿನಲ್ಲಿ ಅಭಿವ್ಯಕ್ತಿಯಾಗಿದೆಯೇ? ಮೊದಲಾದ ಸಂಗತಿಗಳನ್ನು ಚರ್ಚಿಸಲಾಗಿದೆ. ಓ.ಎಲ್.ನಾಗಭೂಷಣ ಸ್ವಾಮಿ ಅವರು ಹೇಳುವಂತೆ "ಕಥೆಯ ವಾಕ್ಯವೊಂದರ ನಾಮಪದ ಮತ್ತು ಕ್ರಿಯಾಪದಗಳ ನಡುವೆ ಪುಂಖಾನುಪುಂಖವಾಗಿ ಬರುವ ವಿಶೇಷಣಗಳು, ಪಾತ್ರಗಳನ್ನು,

ಮನಸ್ಥಿತಿಗಳನ್ನು, ಲೇಖಕರ ಧೋರಣೆಗಳನ್ನು ಢಾಳಾಗಿ ಪ್ರದರ್ಶಿಸುತ್ತವೆ. ಇದು ಕುಂವೀ ಅವರ ಶಕ್ತಿಯಾಗಿರುವಂತಯೇ ಕೆಲವು ಎಡೆಗಳಲ್ಲಿ ಅವರ ದೌರ್ಬಲ್ಯವೂ ಆದೀತು''[೧] ಎಂಬುದು ಸತ್ಯವೆಂಬಂತೆ ತೋರುತ್ತದೆ.

ಒಟ್ಟಾರೆ ಈ ಮೇಲೆ ಹೇಳಲಾದ ಎಲ್ಲ ಅಂಶಗಳನ್ನು ಕುರಿತು ಕುಂ.ವೀರಭದ್ರಪ್ಪ ಅವರ ಕೆಲವು ಆಯ್ದ ಕಥೆಗಳನ್ನು ಅಧ್ಯಯನಮಾಡಿ, ಅಲ್ಲಿ ಕಂಡುಬರುವ ವೈಶಿಷ್ಟ್ಯಗಳನ್ನು ಈ ನಿಬಂಧದಲ್ಲಿ ಪ್ರಮುಖವಾಗಿ ಅಧ್ಯಯನಮಾಡಲಾಗಿದೆ.

ಅಡಿಟಿಪ್ಪಣಿ:

೧. .... ಮಣ್ಣೇ ಮೊದಲು– ಕುಂ.ವೀರಭದ್ರಪ್ಪ, [ಮುನ್ನುಡಿ, ಓ.ಎಲ್.ನಾಗಭೂಷಣಸ್ವಾಮಿ] (ಪ್ರ)ಕ್ರೈಸ್ತ ಕಾಲೇಜು, ಕನ್ನಡ ಸಂಘ, [೨೦೦೭]

ಅಧ್ಯಾಯ ೨

ಕುಂವೀ ಅವರ ಬದುಕು ಮತ್ತು ಬರಹ

ಕುಂವೀ ಅವರ ಬದುಕು ಮತ್ತು ಬರಹ

ಕನ್ನಡ ಸಾಹಿತ್ಯ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ತನ್ನದೇ ಆದ ಭಾಷೆ, ಶೈಲಿ, ವಸ್ತು ಹಾಗೂ ಅನುಭವಗಳ ಹಿನ್ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಕುಂಬಾರ ವೀರಭದ್ರಪ್ಪ ಅವರು ಕುಂವೀ ಎಂದೇ ಪರಿಚಿತರು. ಎಪ್ಪತ್ತರ ದಶಕದಲ್ಲಿ ಉಂಟಾದ ಸಾಹಿತ್ಯಕ, ರಾಜಕೀಯ, ಸಾಂಸ್ಕೃತಿಕ ಸ್ಥಿತ್ಯಂತರಗಳ ಸಂದರ್ಭದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರೊಡನೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡರು.

ಕುಂವೀ ಅವರು ಹಾಲಪ್ಪ ಹಾಗೂ ಕೊಟ್ರಮ್ಮ ದಂಪತಿಗಳಿಗೆ ಮಗನಾಗಿ ಅಕ್ಟೋಬರ್ ೧, ೧೯೫೩ರಂದು ತಾಯಿಯ ತವರೂರಾದ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಬಳಿಯ ಕೋಡಿಹಳ್ಳಿಯಲ್ಲಿ ಜನಿಸಿದರು. ತಂದೆ ಹಾಲಪ್ಪ ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯವರು. ಇವರಿಗೆ ಒಟ್ಟು ಆರು ಜನಮಕ್ಕಳು ನಾಲ್ಕು ಗಂಡು–ವೀರಣ್ಣ, ಕುಂ.ವೀರಭದ್ರಪ್ಪ, ಶರಭಣ್ಣ, ಶಿವಮೂರ್ತಿ ಹಾಗೂ ಎರಡು ಹೆಣ್ಣು– ರುದ್ರಮ್ಮ, ಮಹಾದೇವಿ. ಇವರಲ್ಲಿ ವೀರಣ್ಣ ಕುಡಿತದ ಕಾರಣದಿಂದ ತೀರಿಕೊಂಡರು. ಶರಭಣ್ಣ ಲಾರಿಡ್ರೈವರ್ ಆಗಿದ್ದರೆ, ಶಿವಮೂರ್ತಿ ಕೃಷಿಕರಾಗಿ ಬದುಕು ನಡೆಸುತ್ತಿದ್ದಾರೆ. ಇಬ್ಬರು ಸಹೋದರಿಯರು ಗೃಹಿಣಿಯರಾಗಿದ್ದಾರೆ.

ಕುಂ.ವೀ ಅವರ ಕುಟುಂಬದ ಪ್ರಮುಖ ವೃತ್ತಿ ಕುಂಬಾರಿಕೆಯಾಗಿತ್ತು. "ಸ್ವಾತಂತ್ರ್ಯ ಲಭಿಸೋ ಎಡಬಲ ತುಡುಗು ಕಾರಣಕ್ಕಾಗಿ ಹಗರಿಸೀಮೆಯ ತೆಕ್ಕಲಕೋಟೆಯಿಂದ ಗುಳೇಹೊರಟ ನಮ್ಮ ತಂದೆ [ಕುಂಬಾರ ಹಳ್ಳೆಪ್ಪ, ವಿವಾಹದ ನಂತರ ಹಾಲಪ್ಪನಾಗಿದ್ದನು] ದಾವಣಗೆರೆ, ಭೀಮಸಮುದ್ರ, ನೀರ್ಥಡಿ ಪ್ರದೇಶಗಳಲ್ಲಿ ಕುಂಬಾರಿಕೆಮಾಡಿ ಮಾಡೀ ಕೊಟ್ಟೂರು ಸಮೀಪದ ಕೋಡಿಹಳ್ಳಿಯಲ್ಲಿ ಕುಂಬಾರ ನಿಂಗವ್ವಎಂಬ ಲೇಡಿಡಾನ್ ಬಳಿ ನೆಲೆ ನಿಂತಿದ್ದ. ಎತ್ತರಕ್ಕೆ ಬಲುಚಂದ ಇದ್ದ. ಆತನಿಗೆ ಮಗಳನ್ನು ಕೊಟ್ಟು ಮನೆಯಾಳ್ತನಕ್ಕೆ

ಇಟ್ಟುಕೊಂಡಿದ್ದಳು ನನ್ನಜ್ಜಿ."[೧] ಎಂದು ಕುಂಬಾರ ವೀರಭದ್ರಪ್ಪ ತಮ್ಮ ಕೃತಿಯಲ್ಲಿ ನೆನಪಿಸಿಕೊಂಡಿದ್ದಾರೆ.

ಕುಂ.ವೀರಭದ್ರಪ್ಪ ಅವರ ಮೊದಲ ಹೆಸರು ಕೆ.ಸೋಮಶೇಖರ ಅನಂತರ ಅವರ ತಂದೆ ಎರಡನೇ ತರಗತಿಗೆ ಸೇರಿಸುವಾಗ ವೀರಭದ್ರಪ್ಪ ಎಂದು ಶಾಲೆಗೆ ದಾಖಲಿಸಿದರು. ಬಡತನದ ಕಾರಣದಿಂದಾಗಿ ಕುಂವೀ ಅವರು ಹತ್ತನೇ ತರಗತಿಯವರೆಗೆ ಮಾತ್ರ ಓದಲು ಸಾಧ್ಯವಾಯಿತು. ವಿಧ್ಯಾಭ್ಯಾಸದ ಸಂದರ್ಭದಲ್ಲಿ ಚುರುಕಿನ ವಿದ್ಯಾರ್ಥಿಯಾಗಿದ್ದರು. ಅದಾಗಲೇ ಕಥೆಗಳನ್ನು ಹೇಳುವ ಹವ್ಯಾಸ ಹೊಂದಿದ್ದುದರಿಂದ ಸಾಹಿತ್ಯದ ಮೇಲಿನ ಆಸಕ್ತಿ ಹೆಚ್ಚಾಗಿ ಹೆಚ್ಚು-ಹೆಚ್ಚು ಕಥೆ, ಕಾದಂಬರಿಗಳನ್ನು ಓದತೊಡಗಿದರು. ಹೀಗಾಗಿ ಸಾಹಿತ್ಯದ ಮೇಲಿನ ಆಸಕ್ತಿ ಕುಂವೀ ಅವರಿಗೆ ಕಾಲೇಜಿನ ದಿನಗಳಲ್ಲಿ ಇನ್ನೂ ಅಧಿಕವಾಯಿತು.

ಕುಂವೀರಭದ್ರರಪ್ಪ ಅವರು ಪ್ರಾಥಮಿಕ ವಿಧ್ಯಾಭ್ಯಾಸವನ್ನು ೧೯೫೯ರಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ೧೯೬೪ರಲ್ಲಿ, ಹಾಗೂ ಪ್ರೌಢಶಾಲೆ ಶಿಕ್ಷಣವನ್ನು ೧೯೬೮ರಲ್ಲಿ ಕೊಟ್ಟೂರಿನಲ್ಲಿ ಮುಗಿಸಿದರು. ಶಾಲಾ ಓದಿನ ದಿನಗಳಲ್ಲಿ ತುಂಬಾ ಚುರುಕಾಗಿದ್ದ ಕುಂ.ವೀರಭದ್ರಪ್ಪ ಅವರನ್ನು ಬಾಲ್ಯದ ದಿನಗಳಲ್ಲಿ ಹಸಿವು ಹೆಚ್ಚು ಕಾಡತೊಡಗಿತು ಅವರೇ ಸ್ಮರಿಸಿಕೊಳ್ಳುವಂತೆ "ಶಾಲೆಯ ದಿನಗಳಲ್ಲೇ ಖಾಲಿ ಹೊಟ್ಟೆಯಲ್ಲಿರುತ್ತಿದ್ದ ನಾನು, ಸದ್ಯದ ಕ್ಷಣ ಬದುಕಿದ್ದರೆ ಸಾಕೆಂದು ಹಪಹಪಿಸುತ್ತಿದ್ದ ನಾನು, ತರಗತಿಗಳಿಗೆ ಚಕ್ಕರ್ ಹಾಕಿ ಸವತೇಕಾಯಿ, ಕಬ್ಬು ಹುಡುಕಿಕೊಂಡು ಹೋಲಗದ್ದೆ ಅಲೆಯತೊಡಗಿದೆ, ತಲೆ ಚಿಟ್ ಹಿಡಿಯುತ್ತಿದ್ದ ಪಠ್ಯಪುಸ್ತಕಗಳ ಬದಲಿಗೆ ಕಥೆ, ಕಾದಂಬರಿಗಳ ಆಸರೆ ಪಡೆಯಲಾರಂಬಿಸಿದೆ. ಮುಜುಗರ ಸಂಕೋಚ, ನಾಚಿಕೆಗಳ ತವರಾದೆ, ಎಸ್ಸೆಸ್ಸೆಲ್ಸಿಯನ್ನು ಪಾಸುಮಾಡಿದ್ದೆ ದೊಡ್ಡ ಪವಾಡ"[೨] ಎಂದು ಬರೆಯುತ್ತಾರೆ.

ಕುಂವೀ ಏಳನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಾಗ ಅವರ ತಂದೆ ಹಾಲಪ್ಪ ಸಂತೋಷವನ್ನು ಹಂಚಿಕೊಳ್ಳಲು ಕೇರಿಯ ಜನರಿಗೆಲ್ಲಾ ಹೋಳಿಗೆ ಊಟಹಾಕಿಸಿದ್ದರು. ಆದರೆ ಕುಂವೀ ಎಸ್ಸೆಸ್ಸೆಲ್ಸಿ ಓದುವ ಸಮಯಕ್ಕೆ

ಒಂದು ಹೊತ್ತಿನ ಊಟಕ್ಕೂ ಒದ್ದಾಡಬೇಕಾದ ಪರಿಸ್ಥಿತಿಗೆ ತಲುಪಿದ್ದರು. ಇಂತಹ ಕಷ್ಟದ ನಡುವೆ ಕುಂವೀ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ನಂತರ ಮನೆಯನ್ನು ನಿಭಾಯಿಸಲಿಕ್ಕಾಗಿ ಉದ್ಯೋಗವನ್ನು ಅರಸುವುದು ಅನಿವಾರ್ಯವಾಯಿತು. "ನಾನು ಕಾಲೇಜು ಕಟ್ಟೆ ಹತ್ತುವುದಂತು ಸಾಧ್ಯವಿರಲಿಲ್ಲ. ನನ್ನ ದೇಹವನ್ನು ನಾನು ಬದುಕಿಸಿಕೊಳ್ಳಬೇಕಾಗಿತ್ತಲ್ಲದೆ, ಮನೆಗೂ ಆಸರೆಯಾಗಬೇಕಿತ್ತು, ಕೆಲ ತಿಂಗಳು ಬಲವಂತಕ್ಕೆ ಮೆಡಿಕಲ್ ಶಾಪು, ಕಿರಾಣಿ ದುಕಾನು, ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಕೆಲಸಮಾಡಿದೆ. ತದನಂತರ ಯಾರನ್ನೋ ಹಿಡಕೊಂಡು ರೈಲ್ವೆ ಇಲಾಖೆಯಲ್ಲಿ ದಿನಗೂಲಿ ಕೆಲಸಕ್ಕೆ ಸೇರಿಕೊಂಡೇ .... ಕೆಲಸದ ಮೇಲೆ ಹುಬ್ಬಳ್ಳಿ, ಸಿಕಂದರಬಾದು, ಆರ್ಕೋಣಂ, ಮದ್ರಾಸು ಹೀಗೆ ಎಲ್ಲೆಂದರಲ್ಲಿ ಸುತ್ತಾಡಿದೆ"[೩]. ಎಂಬುದಾಗಿ ಕುಂವೀ ಅವರು ತಮ್ಮ ಬದುಕಿನ ಬಡತನವನ್ನು ಎದುರಿಸುವ ಸಲುವಾಗಿ ಉದ್ಯೋಗದ ಬೆನ್ನತ್ತಿಹೋದ ಬಗೆಯನ್ನು ವಿವರಿಸಿದ್ದಾರೆ. ಜೊತೆಗೆ ಹೀಗೆ ಸುತ್ತಾಡಿದ ಕಾರಣವಾಗಿ ಕುಂವೀ ಅವರಿಗೆ ಜನರ ಸಂಪರ್ಕ ಹಾಗೂ ತೆಲುಗು ಭಾಷೆಯನ್ನು ಕಲಿಯಲು ಸಾಧ್ಯವಾಯಿತು.

ಸ್ವಾಭಿಮಾನಿಯಾಗಿದ್ದ ಕುಂವೀ ಅವರು ಎಷ್ಟೋಬಾರಿ ನೀರು ಕುಡಿದೇ ಹೊಟ್ಟೆ ತುಂಬಿಸಿಕೊಂಡು ಕಾಲ ದೂಡಿದ್ದುಂಟು. ಒಮ್ಮೆ ಸುಮಾರು ಮೂವತ್ತಾರು ಗಂಟೆಗಳ ಕಾಲ ಬಳ್ಳಾರಿಯ ರೈಲ್ವೆ ನಿಲ್ದಾಣದಲ್ಲಿ ಉಪವಾಸವಿರಬೇಕಾದ ಅನಿವಾರ್ಯತೆ ಉಂಟಾಗಿದ್ದುದನ್ನು ನೆನಪಿಸಿಕೊಳ್ಳುತ್ತಾರೆ. ಇಷ್ಟೆಲ್ಲ ಬಡತನದ ನಡುವೆ ಕುಂವೀ ಅವರ ತಂದೆಯವರಿಗೆ ಮಗನನ್ನು ಓದಿಸಬೇಕೆಂಬ ಹಂಬಲ. ಕುಲಕಸುಬಾದ ಕುಂಬಾರಿಕೆಯನ್ನು ಕಲಿಸಬಯಸಿದರು. ಆದರೆ ತುಂಬಾ ಬಡಕಲಾಗಿದ್ದ ಕುಂವೀ ಅವರಿಗೆ ತಿಗರಿ ತಿರುವಲು ಸಾಧ್ಯವಾಗದ [ಸಾಮರ್ಥವಿಲ್ಲದ] ಕಾರಣದಿಂದ ನೆರೆಹೊರೆಯವರ, ಹಿತೈಷಿಗಳ ಸಲಹೆಯಂತೆ ಸಿದ್ದಗಂಗಾ ಮಠದಲ್ಲಿ ಶಿಕ್ಷಕ ಪ್ರಶಿಕ್ಷಣಕ್ಕಾಗಿ [ಟಿ.ಸಿಎಚ್] ೧೯೭೧ರಲ್ಲಿ ಸೇರಿದರು. ಮಠದ ವಾತಾವರಣ ಕುಂವೀ ಅವರ ಮೇಲೆ ಸಾಕಷ್ಟು ಪ್ರಭಾವಬೀರಿತು. ಅವರು ಸಾಹಿತ್ಯಕವಾಗಿ ತೊಡಗಿಕೊಳ್ಳಲು ಅಲ್ಲಿಯ ವಾತಾವರಣ ಪೂರಕವಾಗಿತ್ತು. "ಎಲ್ಲಿ ನೋಡಿದರೂ ಪಂಡಿತರೇ ಪಂಡಿತರು, ಎಲ್ಲಿ ನೋಡಿದರೂ ಖ್ಯಾತ ಕರ್ಣಾಟಕಂಗಳ್, ವಾರ್ಧಕ, ಭಾಮಿನಿ ಷಟ್ಪದಿಗಳು, ಎಲ್ಲರ

ಬಾಯಲ್ಲೂ ದಂಡಿ, ಭಾಮಹ, ಕುಂತಕ, ಪಂಪ, ರನ್ನ, ಮೊದಲಾದವರು. ಆ ವಾತಾವರಣ ನನ್ನ ಮೇಲೂ ಪ್ರಭಾವ ಬೀರದೆ ಇರಲಿಲ್ಲ. ನಾನು ಪಂಡಿತನೆಂದೆನಿಸಿಕೊಳ್ಳಲೋಸುಗ ಶ್ರೀ ಶಿವಕುಮಾರಸ್ವಾಮಿ ಅವರನ್ನು ಕುರಿತು ಭಾಮಿನಿ ಷಟ್ಪದಿಯಲ್ಲಿ ಸುಮಾರು ಐವತ್ತು ಪಧ್ಯಗಳನ್ನು ರಚಿಸದೆ ಇರಲಿಲ್ಲ. ಬ್ರಾಹ್ಮಣ ಪೋಷಾಕಿನಲ್ಲಿದ್ದ ಮಲ್ಲೇಪುರಂ ಜಿ.ವೆಂಕಟೇಶ್‌ಅವರಿಗೂ ತೋರಿಸಿದೆ. ಪಾಂಡಿತ್ಯವೆಂಬ ಮೈಲುಗಲ್ಲಿಗೆ ಡಿಕ್ಕಿ ಹೊಡೆಯುವ ಹುಮ್ಮಸ್ಸಿನಲ್ಲಿ ಶ್ರೀಗಳೆದುರೂ ವಾಚನಮಾಡಿದೆ. ಅವರು ಬೆನ್ನು ತಟ್ಟಿ ಆಶೀರ್ವದಿಸಿದುದು ಸುಯೋಗ"[೬] ಎಂದು ಮನಬಿಚ್ಚಿ ತಾವೆ ಹೇಳಿಕೊಂಡಿದ್ದಾರೆ. ವ್ಯಾಸಂಗಮುಗಿದ ನಂತರ ಉದ್ಯೋಗಕ್ಕಾಗಿ ಅಲೆದಾಡಿ ಸಿಕ್ಕ ಉದ್ಯೋಗಗಳನ್ನು ನಿರ್ವಹಿಸಿದ ಕುಂವೀ ಅವರಿಗೆ ೧೯೭೫ರಲ್ಲಿ ಆಂಧ್ರದ ಕರ್ನೂಲು ಜಿಲ್ಲೆಗೆ ಸೇರಿದ 'ವರದವಾಗಿಲಿ' ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ ಸಿಕ್ಕಿತು. ಆ ಗ್ರಾಮದಲ್ಲಿ ೧೯೮೮ರ ತನಕ ತಮ್ಮ ವೃತ್ತಿಯನ್ನು ನಿರ್ವಹಿಸಿದರು. ಆ ಊರಿನ ಜನಜೀವನದ ಪರಿಸರ ಕುಂವೀ ಅವರ ಬದುಕು ಮತ್ತು ಸಾಹಿತ್ಯದ ಮೇಲೆ ಗಾಢಪ್ರಭಾವವನ್ನು ಬೀರಿದೆ ಎಂಬುದು ಅವರ ಸಾಹಿತ್ಯದ ಓದಿನಿಂದ ತಿಳಿಯಬಹುದಾಗಿದೆ. ಅಲ್ಲಿನ ಅನೇಕ ಘಟನೆಗಳು, ವ್ಯಕ್ತಿಗಳ ಬದುಕು ಅವರ ಕಥೆ-ಕಾದಂಬರಿಗಳಲ್ಲಿ ವಸ್ತುಗಳಾಗಿವೆ. ಅವೆಲ್ಲವು ಕುಂವೀ ಅವರ ಸೃಜನ ಶೀಲಸಾಹಿತ್ಯದ ಮೈಲುಗಲ್ಲುಗಳಾಗಿವೆ.

ವಾದವಾಗಿಲಿಯಲ್ಲಿ ಕೆಲಸನಿರ್ವಹಿಸುವಾಗ ಸಾಮಾಜಿಕ ಅಸಮಾನತೆಯ ವಿರುದ್ಧ ಕ್ರಿಯಾಶೀಲರಾದ ಕುಂವೀ ಅವರು ಶೂದ್ರರು ಹಾಗೂ ದಲಿತರನ್ನು ಶಾಲೆಗೆ ಸೇರಿಸಿಕೊಳ್ಳಲು ದೊಡ್ಡ ಹೋರಾಟವನ್ನು ಮಾಡಿ ಜಮೀನ್ದಾರರ ವಿರೋದವನ್ನು ಕಟ್ಟಿಕೊಳ್ಳಬೇಕಾಯಿತು. ಸ್ವತಃ ಕುಂವೀ ಅವರೇ ಜಾತಿನಿಂದನೆಗೆ ಒಳಗಾಗಿ ಅವಮಾನಪಡಬೇಕಾಯಿತು. ಅಲ್ಲಿನ ಜಾತಿವ್ಯವಸ್ಥೆಯ ಬಗೆಗೆ ಅವರು ಈ ರೀತಿ ಹೇಳುತ್ತಾರೆ "ಅಲ್ಲಿ ಜಾತಿ ವ್ಯವಸ್ಥೆ ಎಷ್ಟು ಅಮಾನವೀಯವಾಗಿತ್ತೆಂದರೆ, ಅಲ್ಲಿ ನನ್ನನ್ನು ಕುಂಬಾರಯ್ಯವಾರು ಎಂದು ಗುರುತಿಸುತ್ತಿದ್ದರು. ಒಂದೆರಡು ವರ್ಷಗಳ ನಂತರವೇ ಕೆಲವರು ಮಾತ್ರ ನನ್ನನ್ನು ವೀರಭದ್ರಯ್ಯವಾರು ಎಂದು ಕರೆಯತೊಡಗಿದ್ದು, ಓಣಿಗೊಬ್ಬರಂತೆ ಕೊಲೆಗಡುಕರಿದ್ದರು. ಊಟೋಪಚಾರ ಮತ್ತು

ಮಲವಿಸರ್ಜನೆ ನಡುವಿನ ವ್ಯತ್ಯಾಸವೇ ತಿಳಿದಿರದಿದ್ದ ಆ ಪಳ್ಳಿಯಲ್ಲಿ ವಾಸಿಸುವುದೂ ಒಂದೇ, ಒರಳಿನಲ್ಲಿ ತಳೆ ಇಟ್ಟು ಬದುಕುವುದೂ ಒಂದೇ ಎಂದು ಅನೇಕ ನೌಕರರು ಭಾವಿಸಿದ್ದರು"[೫] ಇಂಥ ಗ್ರಾಮದಲ್ಲಿ ಜೀವನ ನಿರ್ವಹಿಸುತ್ತಿದ್ದ ಕುಂವೀ ಅವರು ಭಾರತದ ಸಾಮಾಜಿಕ, ಆರ್ಥಿಕ ಅಸಮಾನತೆ ಹಾಗೂ ಜಾತಿಭೇದ, ಲಿಂಗಭೇದ, ಇವೆಲ್ಲವನ್ನು ತಮ್ಮ ಅರಿವಿಗೆ ತಂದುಕೊಂಡರು. ಜಮೀನ್ದಾರರ ವಿರೋಧಕಟ್ಟಿಕೊಂಡು, ಅಸಮಾನತೆಯ ವಿರುದ್ಧ ದಿಟ್ಟಹೆಜ್ಜೆ ಇಟ್ಟು ಶಾಲೆಗೆ ಶೂದ್ರ ಹಾಗೂ ದಲಿತ ಮಕ್ಕಳನ್ನು ಸೇರಿಸಿಕೊಳ್ಳುವ ಹೋರಾಟದಲ್ಲಿ ಯಶಸ್ವಿಯಾದರು.

ಹೀಗೆ ಕುಂವೀ ವೃತ್ತಿಯನ್ನು ಕೈಗೊಂಡ ಸ್ಥಳಗಳಲ್ಲಿನ ಜನರ ಬದುಕನ್ನು ಹಸನುಗೊಳಿಸುವ ಪ್ರಯತ್ನದಲ್ಲಿ ಪ್ರಾಮಾಣಿಕತೆ ಮೆರೆದಿದ್ದಾರೆ. ೧೯೭೪ರಿಂದ ೧೯೮೮ರವರೆಗೆ ಕರ್ನೂಲು ಜಿಲ್ಲೆಯ 'ಗೂಳ್ಯಂ' ಎಂಬ ಗ್ರಾಮದಲ್ಲಿ ಸೇವೆ ಸಲ್ಲಿಸಿ ನಂತರ ೧೯೮೮ರಿಂದ ಆಂಧ್ರದ ಅನಂತಪುರ ಜಿಲ್ಲೆಗೆ ಸೇರಿದ 'ದಂಡಿನ ಹಿರೇಹಾಳಿನಲ್ಲಿ' ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಪರಿಸರದ ಚೆಲುವು ಅವರಿಗೆ ಇಷ್ಟವಾಗಿರುವುದರ ಜೊತೆಗೆ ವೃತ್ತಿಯನ್ನು ಅತಿಯಾಗಿ ಗೌರವಿಸುತ್ತಿದ್ದರು. ಹಾಗಾಗಿಯೇ ಅವರು ಹಂಪಿ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿ ಹೆಚ್ಚುಕಾಲ ಉಳಿಯದೆ ಮತ್ತೆ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿಯೇ ಮುಂದುವರೆಯಲು ಇಚ್ಛಿಸಿದರು.

ಕುಂ.ವೀರಭದ್ರಪ್ಪನವರು ಹಾಸನ ಜಿಲ್ಲೆಯ ಸುಂದರ ಕಲೆಗಳ ತವರೂರಾದ ಪ್ರಪಂಚ ಪ್ರಖ್ಯಾತ ಬೇಲೂರು ತಾಲ್ಲೂಕಿನ 'ಯಮಸಂಧಿ' ಗ್ರಾಮದ ಅನ್ನಪೂರ್ಣ ಅವರನ್ನು ೧೯೮೩ರಲ್ಲಿ ಸಾಂಪ್ರದಾಯಿಕವಾಗಿ ಲಗ್ನವಾದರು. ಈ ದಂಪತಿಗಳಿಗೆ ಮೂವರು ಮಕ್ಕಳಿದ್ದಾರೆ. ಅವರೆಂದರೆ, ಪುರೂರವ, ಶಾಲಿವಾಹನ, ಹಾಗೂ ಪ್ರವರ.

ಕುಂವೀ ಅವರು ತಮ್ಮ ಆರಂಭಿಕ ಸಾಹಿತ್ಯವನ್ನು ಬದುಕಿನ ಅನುಭವದ ಹಿನ್ನೆಲೆಯ ಜೊತೆಗೆ ತಾವು ಬದುಕುವ ಸುತ್ತಮುತ್ತಲ ನೈಜಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಸೃಷ್ಟಿಸಿದರು.

ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಸಂದರ್ಭದಲ್ಲಿಯೇ ಸಹಪಾಟಿಗಳು ಹಾಗೂ ಆ ಶಾಲೆಯ ಶಿಕ್ಷಕರೆಲ್ಲರೂ ಕುಂವೀ ಅವರ ಕಾಲ್ಪನಿಕ ಕಥೆಕೇಳಲು ತವಕಿಸುತ್ತಿದ್ದರು. ಅದನ್ನು ಕುಂವೀ ಅವರು ಹೀಗೆ ತಿಳಿಸುತ್ತಾರೆ. "ಬಾಲ್ಯದ ದಿನಗಳಲ್ಲೆ ನಾನು ಮೃದ್ವಂಗಿಯಾಗಿಬಿಟ್ಟೆ. ಕಾಂಪ್ಲೆಕ್ಸ್‌ಗಳಿಂದಾಗಿ ಕಥೆಗಳನ್ನು ಸರಾಗವಾಗಿ ಹೇಳತೊಡಗಿದೆ. ಸಹಪಾಠಿಗಳಷ್ಟೇ ಏಕೆ ಶಿಕ್ಷಕರೂ ಮುಂದೇನಾಯ್ತು, ಮುಂದೇನಾಯ್ತು ಎಂದು ಪೀಡಿಸುತ್ತಿದ್ದರು. ಒಂದೇ ಕಥೆಯನ್ನು ನಾನು ವಾರಗಟ್ಟಲೇ ಹೇಳುತಲಿದ್ದುದೇ ಅದಕ್ಕೆ ಕಾರಣ. ಅವರೆಲ್ಲರ ಕುತೂಹಲ ತಣಿಸಲಿಕ್ಕೆಂದೋ, ನನ್ನನ್ನು ನಾನು ಸಂತೈಸಿಕೊಳ್ಳಲಿಕ್ಕೆಂದೋ, ನನ್ನದೆಯೊಳಗಿನ ಪೂರ್ಣಕಥೆಗಳ ದಾಹ ತೀರಿಸಲಿಕ್ಕೆಂದೋ, ನಾನು ಕಥೆ, ಕಾದಂಬರಿಗಳ ಮೊರೆ ಹೊಕ್ಕೆ".[1]

ಬಹಳ ಚಿಕ್ಕ ವಯಸ್ಸಿಗೆ ಸಾಹಿತ್ಯದ ಕಡೆ ಒಲವು ಬೆಳೆಸಿಕೊಂಡ ಕುಂವೀ ಅವರಿಗೆ ಸಂಗೀತ, ಹಾಗೂ ವ್ಯಂಗ್ಯಚಿತ್ರ ಬರೆಯುವ ಹವ್ಯಾಸವೂ ಇದೆ. ಅವರ ಕೆಲವು ವ್ಯಂಗ್ಯಚಿತ್ರಗಳು ಮಯೂರ, ಸುಧಾ ಪತ್ರಿಕೆಗಳಲ್ಲಿ ಬಹಳ ಹಿಂದೆ ಪ್ರಕಟವಾಗಿದ್ದವು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಸೃಜನಶೀಲತೆಯ ಛಾಪನ್ನು ಮೂಡಿಸಿದರು. ಮೊದಮೊದಲು ತಾವು ಬರೆಯಲು ಆರಂಭಿಸಿದ್ದು "ಅವಮಾನ ಮತ್ತು ಹಸಿವೆಯ ವಿರುದ್ಧ ಪ್ರತಿಭಟಿಸಬೇಕೆಂದೇ ನಾನು ಕವಿತೆಗಳನ್ನು, ಕಥೆಗಳನ್ನು ಬರೆಯತೊಡಗಿದ್ದು. ಬರೆಯದೇ ಇದ್ದರೆಲ್ಲಿ ನನ್ನ ಮಾನಸಿಕ ಕ್ರಿಯೆ ಅಸ್ತವ್ಯಸ್ತಗೊಂಡುಬಿಡುವುದೋ ಎಂಬ ತಲ್ಲಣವೇ ನನ್ನನ್ನು ನಿರಂತರವಾಗಿ ಬರೆಯಲು ಇಟ್ಟದ್ದು. ಬರೆಯುತ್ತಹೋದೆ, ಜನ ಮೆಚ್ಚಿಕೊಳ್ಳುತ್ತಾ ಹೋದರು".[2] ಎಂದು ಹೇಳಿದ್ದಾರೆ.

ಹೀಗೆ ಬರವಣಿಗೆಯನ್ನು ರೂಢಿಸಿಕೊಂಡ ಕುಂವೀ ಅವರಿಗೆ ತಾವು ಕಾರ್ಯನಿರ್ವಹಿಸುತ್ತಿದ್ದ ಗ್ರಾಮಗಳು, ಅಲ್ಲಿನ ಜನರ ಭಾಷೆ ಹಾಗೂ ನಡೆವಳಿಕೆಗಳು ಆಸಕ್ತಿಯನ್ನು ಕೆರಳಿಸಿ ಸಾಹಿತ್ಯದ ರಚನೆಯತ್ತ ಪ್ರೇರೇಪಿಸಿದವು. ಕನ್ನಡ ಸಾಹಿತ್ಯದ ಹಲವು ಪ್ರಮುಖರ ಸಾಹಿತ್ಯದ ಪ್ರಭಾವ ಕುಂವೀ ಅವರ ಮೇಲೆ ಆಗಿದೆ. ಅಲ್ಲದೆ ಕರ್ನಾಟಕದ ಗಡಿ ಪ್ರದೇಶವಾದ ಆಂಧ್ರದ ಹಳ್ಳಿಗಳಲ್ಲಿ ವೃತ್ತಿ ನಿರ್ವಹಿಸಿದ ಕಾರಣದಿಂದ ತೆಲುಗು ಭಾಷೆಯ ದಟ್ಟಪ್ರಭಾವವನ್ನು ಕುಂವೀ ಅವರ ಸಾಹಿತ್ಯದಲ್ಲಿ ಕಾಣಬಹುದು. ತೆಲುಗು ಸಾಹಿತ್ಯ ಹಾಗೂ

ಸಾಹಿತಿಗಳ ಬಗೆಗೆ ಕುಂವೀ ಅವರು "ನನ್ನ ಮೇಲೆ ದಟ್ಟಪ್ರಭಾವ ಬೀರಿದ ಮತ್ತೊಂದು ಸಂಗತಿ ಎಂದರೆ ತೆಲುಗು ಭಾಷೆಯ ಸಾಹಿತ್ಯ .... ತೆಲುಗಿನವರು ಚಳುವಳಿಗಳಿಂದ, ಹೋರಾಟಗಳಿಂದ, ಬಲಿದಾನಗಳಿಂದ ಪ್ರೇರಣೆಪಡೆದವರು. ತೆಲಂಗಾಣ, ಶ್ರೀ ಕಾಕುಳಂ ಪ್ರದೇಶಗಳಲ್ಲಿ ಜಮೀನ್ದಾರಿ ವ್ಯವಸ್ಥೆ ವಿರುದ್ಧ ಧನಿ ಎತ್ತಿದ ರೈತರಿಗೆ ತೆಲುಗು ಸಾಹಿತ್ಯ ಹೆಗಲುಕೊಟ್ಟಿದೆ. ಲೇಖಕರಿಗೆ ತಮ್ಮ ಕೈಯಲ್ಲಿರುವುದು ಪೆನ್ನಲ್ಲ, ಅದು ಗನ್ನು, ಪದ್ಯಗಳು ಕೃಷಿಕಾರ್ಮಿಕರಲ್ಲಿ ಪ್ರತಿಭಟನಾ ಭಾವನೆಯನ್ನು ಪ್ರಜ್ವಲಿಸಿದರೆ, ಜಮೀನ್ದಾರರೆದೆಯಲ್ಲಿ ಕಂಪನ ಹುಟ್ಟಿಸುತ್ತವೆ. .... ನಿಜವಾದ ಬಂಡಾಯ ಲೇಖಕರೆಂದರೆ ಅಲ್ಲಿಯವರು. ಅಲ್ಲಿನ ಬಂಡಾಯ ಲೇಖಕರು ಸರಕಾರದಿಂದ ಅದು ಬೇಕು, ಇದು ಬೇಕು ಎಂದು ಆಸೆಪಡುವವನಲ್ಲ. ಸರ್ಕಾರ ಅವಾರ್ಡುಗಿವಾರ್ಡು ಕೊಟ್ರೆ ತನ್ನ ಎಡಗಾಲಿನಿಂದಲೇ ತಳ್ಳುತ್ತಾನೆ. ಆ ಲೇಖಕರು ನನಗೆ ಇಷ್ಟ. ಅವರ ಸಾಹಿತ್ಯ ನನಗೆ ಇಷ್ಟ .... ಒಂದು ಸಾಹಿತ್ಯದ ಗ್ರೇಟ್‌ನೆಸ್ ಇರುವುದು ಇಲ್ಲಿಯೇ ನಾನು ಕಥೆಬರೆದಾಗೆಲ್ಲ ಅದನ್ನು ಪುಲಿಕಂಟಿ ಕೃಷ್ಣರೆಡ್ಡಿಯವರ ಕತೆಯೊಂದಿಗಾಗಲಿ; ಕಾಶಿಪಟ್ನಂ ರಾಮರಾವ್ ಕತೆಯೊಂದಿಗಾಗಲಿ ಹೋಲಿಸಿನೋಡೋ ಪರಿಪಾಟ ಇಟ್ಟುಕೊಂಡಿದ್ದೀನಿ. ಅವರ ಮಟ್ಟಕ್ಕೆ ತಲುಪಲು ನಾನಿನ್ನು ಎಷ್ಟು ಬರೆಯಬೇಕಿದೆಯೋ!"[೮] ಎಂಬ ಅವರ ಮಾತು ಗಳಲ್ಲಿ ಗುರಿಯ ವಿಸ್ತಾರ ಎಷ್ಟು ಎಂಬುದರ ಅರಿವುಂಟಾಗುತ್ತದೆ.

೧೯೭೯ರಲ್ಲಿ ತಮ್ಮ ಪ್ರಥಮ ಕವನ ಸಂಕಲನ "ದಿವೀ ಸೀಮೆಯ ಹಾಡು" ಪ್ರಕಟಿಸುವ ಮೂಲಕ ಕುಂವೀ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡರು. ಅನಂತರ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿದರು. ಅವುಗಳೆಂದರೆ,

<u>ಕಥಾಸಂಕಲನಗಳು</u> :– 'ಇನ್ನಾದರೂ ಸಾಯಬೇಕು' [೧೯೮೧] 'ಡೋಮ ಮತ್ತಿತರ ಕಥೆಗಳು' [೧೯೮೬] 'ಭಗವತಿ ಕಾಡು' [೧೯೯೦] 'ನಿಜಲಿಂಗ' [೧೯೯೩] 'ಅಪೂರ್ವ ಚಿಂತಾಮಣಿ' [೧೯೯೫] 'ಸುಶೀಲ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ' [೧೯೯೫] 'ಭಳಾರೆ ವಿಚಿತ್ರಂ' [೨೦೦೨] 'ಮಣ್ಣೇ ಮೊದಲು' [೨೦೦೭] 'ಕೂಳೆ' [೨೦೦೭] ಪ್ರಕಟವಾಗಿವೆ.

ಕಾದಂಬರಿಗಳು :– 'ದ್ಯಾವಲಪುರ' [೧೯೮೦] 'ಕಪ್ಪು' [೧೯೮೧] 'ಬೇಲಿ ಮತ್ತು ಹೊಲ' [೧೯೮೨] 'ಆಸ್ತಿ' [೧೯೮೪] 'ಹನುಮ' [೧೯೮೬] 'ಕೆಂಡದಮಳೆ' [೧೯೮೮] 'ಬೇಟೆ' [೧೯೮೮] 'ಪ್ರತಿದ್ವಂದ್ವಿ' [೧೯೮೭] 'ಪಕ್ಷಿಗಳು' [೧೯೮೯] 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' [೧೯೯೪] 'ಶಾಮಣ್ಣ' [೧೯೯೮] 'ಯಾಪಿಲ್ಲು' [೨೦೦೧] 'ಅರಮನೆ' [೨೦೦೫] ಕೃತಿಗಳು ಪ್ರಕಟವಾಗಿವೆ.

ಜೀವನ ಚರಿತ್ರೆ :– 'ರಾಹುಲ ಸಾಂಕೃತ್ಯಾಯನ' [೧೯೯೪] 'ಚಾರ್ಲಿಚಾಪ್ಲಿನ್' [೨೦೦೦] 'ಸುಭದ್ರಮ್ಮ ಮನ್ಸೂರ' [೨೦೦೦]

ಇತರೆ ಕೃತಿಗಳು :– ಸಂಪಾದನೆ – 'ಕಥಾಸಂಕಲನ' [೧೯೯೦] ವಿಮರ್ಶೆ – 'ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ'

ಕುಂವೀ ಅವರು ಅನೇಕ ತೆಲುಗು ಕಥೆಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಯಶಸ್ವಿ ಅನುವಾದಕರೆನಿಸಿದ್ದಾರೆ. ಇವರು ಅನುವಾದಿಸಿದ ಮೂವತ್ತು ಕಥೆಗಳ 'ತೆಲುಗು ಕತೆ' ಎಂಬ ಕೃತಿಯನ್ನು ಅವರ ಸಂಪಾದಕತ್ವದಲ್ಲೇ ೧೯೯೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ. ತೆಲುಗಿನ 'ಒಕತರಂ' ಕಥಾಸಂಕಲನದ ಮೂವತ್ತಾರು ಕಥೆಗಳನ್ನು ಕುಂವೀ ಅವರಿಂದಲೇ ಅನುವಾದಿಸಿ 'ಒಂದು ಪೀಳೀಗೆಯ ಕಥೆಗಳು' ಎಂಬ ಹೆಸರಿನಲ್ಲಿ ೨೦೦೧ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿ ಸಮರ್ಥರೆನಿಸಿದ ಕುಂವೀ ಅವರ ಕಥಾ ಸಾಹಿತ್ಯವನ್ನು ಆಧರಿಸಿ 'ಮನಮೆಚ್ಚಿದ ಹುಡುಗಿ', 'ಕೆಂಡದ ಮಳೆ', 'ದೊರೆ', 'ಕೊಟ್ರೆಶಿ ಕನಸು' ಎಂಬ ಚಲನ ಚಿತ್ರಗಳು ತೆರೆಕಂಡು ಯಶಸ್ವಿಯಾಗಿವೆ.

ಕುಂವೀ ಅವರ ಸಾಹಿತ್ಯಾತ್ಮಕ ಸಾಧನೆಗಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ಅವರನ್ನು ಹರಿಸಿಕೊಂಡು ಬಂದಿವೆ. ಎರಡುಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಅಘಣಿಯ

ಸಿರಸಿಂಗಿ, ಲಿಂಗಾರಾಜ ಪ್ರಶಸ್ತಿ, ರತ್ನಾಕರ ಪ್ರಶಸ್ತಿ, ಮುದ್ದಣ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ [೧೯೮೩], 'ಕಪ್ಪು' ಕಾದಂಬರಿಗೆ ಲಂಕೇಶ್ ಪ್ರಶಸ್ತಿ [೨೦೦೩], ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ [೨೦೦೪], ಅರಮನೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ [೨೦೦೭], ಹೀಗೆ ಇನ್ನೂ ಹಲವಾರು ಪ್ರಶಸ್ತಿ, ಬಹುಮಾನ, ಪುರಸ್ಕಾರಗಳು ಕುಂವೀ ಅವರ ಮುಡಿಗೇರಿವೆ.

೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡ ಕುಂವೀ ಅವರು ಸಾಹಿತ್ಯ ಸೃಷ್ಟಿಯಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಕಾಲ ಕಾರ್ಯನಿರ್ವಹಿಸಿ, ಅನಂತರ ತಮ್ಮ ಆಸಕ್ತಿಕ್ಷೇತ್ರವಾದ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಭಿನ್ನ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಕಥೆಯ ಮೂಲಕ ಬಂದಂತಹ ಕುಂವೀ ಅವರ ಜೀವನ ಮತ್ತು ಸಾಹಿತ್ಯ ಸಾಧನೆಯ ವಿವರಗಳು ವೈವಿಧ್ಯತೆ ಮತ್ತು ವಿಶಿಷ್ಟತೆಗಳಿಂದ ಕೂಡಿವೆ ಎಂದು ಹೇಳಬಹುದು. ಕುಂವೀ ಅವರ ಬರಹಕ್ಕೆ ಸೃಜನಶೀಲ ಮನಸ್ಸನ್ನು ಮಾನವೀಯ ನೆಲೆಗಟ್ಟಿನಲ್ಲಿ, ನೈತಿಕತೆಯ ಚೌಕಟ್ಟಿನಲ್ಲಿ, ಪ್ರಜ್ಞಾಪೂರ್ವಕ ನಾಗರಿಕನಾಗಿ ರೂಪಿಸುವ ಶಕ್ತಿ ಅಡಗಿದೆ. ಸಾಮಾಜಿಕ ಪಿಡುಗಾದ ಅಸಮಾನತೆಯ ವಿರುದ್ಧದ ಧ್ವನಿಯನ್ನು ಸ್ಪಷ್ಟವಾಗಿ ಕಾಣಬಹುದು. ಹೀಗಾಗಿ ಕುಂವೀ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಚ್ಚಳಿಯದ ಹೆಸರಾಗಿದ್ದಾರೆ.

ಅಡಿ ಟಿಪ್ಪಣಿ:

೧. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XVII

೨. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XIX

೩. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XX

೪. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XIX - XX

೫. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XXIII

೬. ಬರಿ ಕಥೆಯಲ್ಲೋ ಅಣ್ಣಾ; ಕುಂ.ವೀರಭದ್ರಪ್ಪ [೨೦೦೪] ಪುಟ XVI

೭. ಕಥನ ಕಲೆಯ ನೆಲೆಗಳು; (ಸಂ) ಕರೀಗೌಡ ಬೀಚನಹಳ್ಳಿ ಹಾಗೂ ರಾಜಶೇಖರ ನೀರಮಾನ್ವಿ; ಲೇಖನ 'ನಾನು ಮತ್ತು ನನ್ನ ಕಥಾ ಸಾಹಿತ್ಯ' ಕುಂ.ವೀ [೧೯೯೨] ಪುಟ ೮೯

೮. ಕಥನ ಕಲೆಯ ನೆಲೆಗಳು; (ಸಂ) ಕರೀಗೌಡ ಬೀಚನಹಳ್ಳಿ ಹಾಗೂ ರಾಜಶೇಖರ ನೀರಮಾನ್ವಿ; ಲೇಖನ 'ನಾನು ಮತ್ತು ನನ್ನ ಕಥಾ ಸಾಹಿತ್ಯ' ಕುಂ.ವೀ [೧೯೯೨] ಪುಟ ೯೦ ಮತ್ತು ೯೧

ಅಧ್ಯಾಯ ೨

ಕನ್ನಡ ಸಣ್ಣಕಥಾ ಸಾಹಿತ್ಯ ಬೆಳೆದು ಬಂದ ಮಾರ್ಗ

ಕನ್ನಡ ಸಣ್ಣಕಥಾ ಸಾಹಿತ್ಯ ಬೆಳೆದು ಬಂದ ಮಾರ್ಗ

ಕನ್ನಡ ಸಾಹಿತ್ಯದ ಆಧುನಿಕ ವಿಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆ ತುಂಬಾ ಪ್ರಮುಖವಾದುದು. ಈ ಪ್ರಕಾರ ಮೂಡಿಬಂದದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎಂದು ಹೇಳಬಹುದು. ಸಣ್ಣಕಥೆ ಎಂಬ ಪದ ಇಂಗ್ಲಿಷಿನ 'short story' ಯ ಭಾಷಾಂತರವಾಗಿದೆ. ಆದರೆ ಈ ಎರಡು ಪದಗಳ ನಡುವೆ ಅರ್ಥವ್ಯಾಪ್ತಿಯಲ್ಲಿ ವ್ಯತ್ಯಾಸವಿದೆ. "ಆಕ್ಸ್‌ಫರ್ಡ್ ಡಿಕ್ಸನರಿ ಯಲ್ಲಿ 'short' ಪದಕ್ಕೆ ಕೊಡುವ ಅರ್ಥ ೧. measuring little from end to end in space or time. 2. Not reaching the usual stated or required 3. saying very little or saying much in few words. ಎಂಬುದಾಗಿವೆ. ಈ ಅರ್ಥಗಳನ್ನು 'short story' ಗೆ ಅನ್ವಯಿಸಿದಾಗ ಸೂಚಿತವಾಗುವ ಅಂಶಗಳೆಂದರೆ ೧. ಸಣ್ಣಕಥೆ, ಸ್ಥಳ, ಕಾಲಗಳನ್ನು ತೀರ ಚಿಕ್ಕ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ. ೨. ಅದು ಅಪೇಕ್ಷಿತ ಅಥವಾ ನಿರೀಕ್ಷಿತ ಮಿತಿಗಳನ್ನು ತಲುಪುವುದಿಲ್ಲ ಹಾಗೂ ೩. ಅದು ಹೇಳುವುದು ಬಹಳ ಕಡಿಮೆ ಅಥವಾ ಸ್ವಲ್ಪದರಲ್ಲಿಯೇ ಬಹಳಷ್ಟನ್ನು ಅದು ಹೇಳುತ್ತದೆ ಕನ್ನಡದ ಸಣ್ಣ ಪದಕ್ಕೆ 'ಕಿಟ್ಟಲ್ ಡಿಕ್ಸನರಿ'ಯಲ್ಲಿ ಈ ಅರ್ಥಗಳಿವೆ, small, little, tiny, minute, thin, delicate, slender, narrow, insignificant. ಇವುಗಳಲ್ಲಿ ಬಹುಶಃ 'small' ಎಂಬುದೊಂದನ್ನು ಬಿಟ್ಟರೆ ಉಳಿದ ಯಾವ ಅರ್ಥಗಳೂ ಸಣ್ಣಕಥೆಗೆ ಅನ್ವಯಿಸುವಂತಿಲ್ಲ"[೧] ಜಿ.ಎಸ್. ಆಮೂರ ಅವರ ಈ ಮಾತುಗಳು ಸರಿಯೆನಿಸುತ್ತವೆ. ಅಂದರೆ 'short story' ಎಂಬುದಕ್ಕೆ ಬದಲಾಗಿ 'small story' ಎಂಬುದು ಸರಿಯಾದುದು ಎಂದೆನಿಸಿದರೂ 'short' ಹಾಗೂ ಸಣ್ಣ ಎಂಬ ಪದಗಳನ್ನು ಸಮನಾರ್ಥಕಗಳೆಂದು ಗ್ರಹಿಸಿ ಬಳಸಲಾಗುತ್ತಿದೆ.

ಭಾರತದಲ್ಲಿ ಕಥೆ ಎಂಬುದು ಮೊದಲು ಜನಪದವಾಗಿ ಬೆಳೆದು ಬಂದಿರಬಹುದು ಎನಿಸುತ್ತದೆ. ಇದರಿಂದ ಕಥೆಯ ಮೂಲ ಜನಪದ ಎಂದು ಸದ್ಯಕ್ಕೆ ಹೇಳಬಹುದು. ಸಣ್ಣಕತೆಯೂ ಕಾದಂಬರಿಯಂತೆ ಸೃಜನಶೀಲ ಗದ್ಯ ಸಾಹಿತ್ಯ ಪ್ರಕಾರವಾಗಿದೆ, ಸಣ್ಣಕಥೆ ಎಂಬುದು ಗುಣಸೂಚಕ ಶಬ್ದವೇ ಹೊರತು ಗಾತ್ರಸೂಚಕ ಶಬ್ದವಲ್ಲ ಎನ್ನಬಹುದು.

ಕನ್ನಡದಲ್ಲಿ ಸಣ್ಣಕಥೆಯ ಉಗಮವನ್ನು ಗಮನಿಸುವುದಾದರೆ, ಪ್ರಾಚೀನ ಕವಿಗಳು, ಪ್ರಾಚೀನಕಾಲದಿಂದಲೂ ಕಥೆಯ ಚೌಕಟ್ಟಿನಲ್ಲಿಯೇ ತಮ್ಮ ಕಾವ್ಯಗಳನ್ನು ನಿರೂಪಿಸಿದ್ದಾರೆ. ಕವಿರಾಜಮಾರ್ಗಕಾರ ತನ್ನ ಹಿಂದಿನ ಗದ್ಯ ಕವಿಗಳ ಹೆಸರನ್ನು ಉಲ್ಲೇಖಿಸುವಾಗ 'ದುರ್ವಿನೀತ'ನನ್ನು ಹೆಸರಿಸಿದ್ದಾನೆ. ಈತ 'ಪೈಶಾಚಿ' ಭಾಷೆಯಲ್ಲಿದ್ದ 'ಗುಣಾಢ್ಯ'ನ ಬೃಹತ್ಕಥೆಯನ್ನು ಕನ್ನಡಕ್ಕೆ ಅನುವಾದಿಸಿರಬೇಕೆಂದು 'ವಿದ್ವಾಂಸರು' ಊಹಿಸಿದ್ದಾರೆ. ಇದರ ನಂತರ ನಮಗೆ ಉಪಲಬ್ಧವಿರುವ ಮೊದಲ ಕಥಾಸಂಗ್ರಹ ವಡ್ಡಾರಾಧನೆ ಕೃತಿಯು ೧೯ ಉಪಸರ್ಗಕೇವಲಿಗಳ ಕಥೆಗಳನ್ನು ಒಳಗೊಂಡಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಕಥೆಗಾಗಿಯೇ ಕಥೆಗಳನ್ನು ರಚಿಸುವ ಸಂಪ್ರದಾಯ ಪ್ರಾರಂಭವಾಯಿತು ಎಂದೆನಿಸುತ್ತದೆ, "ಮೊತ್ತಮೊದಲಿನ ಕಥಾಸಂಗ್ರಹವೆಂದರೆ 'ಈಸೋಪನ' ನೀತಿಕಥೆಗಳದ್ದು. ಶಾಲಾ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಎಲಿಯಟ್ ಅದನ್ನು ಪ್ರಕಟಿಸಿದನು [೧೮೪೦]"[೨] ಎಂದು ಶ್ರೀನಿವಾಸ ಹಾವನೂರ ಅವರು ಹೇಳುತ್ತಾರೆ. ಕನ್ನಡದಲ್ಲಿ ಕಥೆಗಳ ರಚನೆಯಕಾರ್ಯವು ಅನುವಾದ-ರೂಪಾಂತರಗಳಿಂದ ಆರಂಭವಾಗಿರುವುದನ್ನು ಗುರುತಿಸಬಹುದು.

ಕಿಟ್ಟೆಲ್ ಅವರು ಪ್ರಬಂಧ ರೂಪದ ಮುನ್ನುಡಿ [ನಾಗವರ್ಮನ ಛಂದೋಂಬುಧಿ]ಯಲ್ಲಿ ೧೯ನೇ ಶತಮಾನದ ಲೇಖಕರ ಪಟ್ಟಿಯೊಂದನ್ನು ನೀಡುತ್ತಾನೆ ೧. ತೆನಾಲಿ ರಾಮಕೃಷ್ಣನ 'ಹಾಸ್ಯರಸ ಕಥೆ'ಗಳು ೨. ಬೇತಾಳ 'ಪಂಚವಿಶಂತಿ' ಕಥೆಗಳು ೩. ಎಸ್.ಕೃಷ್ಣಯ್ಯ ಅವರ 'ಹಂಸವಿಶಂತಿ' ಕಥಾ ೪. 'ಕಥಾಸಾಗರ' ೫. 'ಸಿಂಹಾಸನ ಬತ್ತೀಸ ಪುತ್ಥಳಿ'ಕಥೆ ೬. 'ಸುಭೋದಾಮೃತ' ಎಂಬ ಆರು ಕಥಾ ಸಂಕಲನಗಳು ಸೇರಿವೆ. ಈ ಕಥಾ ಸಂಕಲನಗಳು ೧೮೬೪-೧೮೭೨ರ ಅವಧಿಯಲ್ಲಿ ಪ್ರಕಟವಾಗಿವೆ"[೩]

ಕನ್ನಡದಲ್ಲಿ ಸಣ್ಣಕಥೆ ಎಂದು ಕರೆಯಬಹುದಾದ ಕಥೆಗಳನ್ನು ಮೊದಲು ಬರೆದವರು ಪಂಜೆ ಮಂಗೇಶರಾಯರು. ಅವರು ಬರೆದ 'ನನ್ನ ಚಿಕ್ಕತಾಯಿ' ಮತ್ತು 'ನನ್ನ ಚಿಕ್ಕ ತಂದೆ'

ಎಂಬೆರಡು ಕಥೆಗಳು 'ಸುವಾಸಿನಿ' ಮಾಸಪತ್ರಿಕೆಯಲ್ಲಿ ೧೯೦೦ರ ಆಗಸ್ಟ್ –ಸೆಪ್ಟೆಂಬರ್ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇವು ಮೊದಲ ಕಥೆಗಳಾದುದರಿಂದ ಅವುಗಳಲ್ಲಿ ಅಂಥ ಸತ್ವವೇನೂ ಇಲ್ಲವಾದರು ಅನುಭವದ ಅಭಿವ್ಯಕ್ತಿಗಳಾಗಿ ಅವು ಕಂಡುಬರುತ್ತವೆ. ೧೯೦೭ರ ವೇಳೆಗೆ ಕನ್ನಡದಲ್ಲಿ ೩೮ ಪತ್ರಿಕೆಗಳು ಇದ್ದವೆಂದು ತಿಳಿದು ಬರುತ್ತದೆ. ಬಹುತೇಕ ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸಲಾಗುತಿತ್ತು. ಅಂದರೆ ಸಣ್ಣಕಥೆಗಳಿಗೆ ಆ ಶತಮಾನದ ಆದಿಭಾಗದಲ್ಲಿ ಸಾಕಷ್ಟು ಪ್ರಚಾರ ದೊರೆತಿತ್ತೆಂದು ಕಾಣುತ್ತದೆ.

ಕನ್ನಡದ ಮಹತ್ವದ ಸಣ್ಣಕಥೆಗಳನ್ನು ಮೊದಲು ರಚಿಸಿದ 'ಮಾಸ್ತಿ'ಯವರನ್ನು 'ಸಣ್ಣಕಥೆಗಳ ಜನಕ' ಎಂದು ಕರೆಯಲಾಗಿದೆ. ಪಂಜೆ ಅವರು ಮಾಸ್ತಿಯವರಿಗಿಂತ ಮೊದಲೇ ಸಣ್ಣಕಥೆಗಳನ್ನು ರಚಿಸಿದ್ದರೂ ಸಹ ಮಾಸ್ತಿಯವರೇ ಮೊದಲಿಗರೆಂಬ ಹೇಳಿಕೆಗಳಿವೆ. "ಕನ್ನಡ ಕಾವ್ಯದಲ್ಲಿ ಪಂಪ ಹೇಗೋ ಸಣ್ಣಕಥೆಯಲ್ಲಿ ಮಾಸ್ತಿ ಹಾಗೆ".[೪] ಎಂಬ ಹೇಳಿಕೆಗಳನ್ನು ವಿದ್ವಾಂಸರು ನೀಡಿದ್ದಾರೆ.

ಪಂಜೆ ಅವರ ಅನಂತರ ಕಾಣಬರುವ ಪ್ರಮುಖ ಸಣ್ಣಕಥೆಗಾರರು ಎಂ.ಎನ್.ಕಾಮತರು [೧೮೮೩–೧೯೪೦] ಕಾಮತರ ಕಥೆಗಳು ೧೯೧೩–೧೪ರ ಅನಂತರದಲ್ಲಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ತಿಳಿದುಬರುತ್ತದೆ. ಕಾಮತರು ಬರೆಯುತ್ತಿದ್ದ ಕಾಲದಲ್ಲೇ ಧಾರವಾಡದ ಕಡೆಯಿಂದ ಕೆರೂರು ವಾಸುದೇವಚಾರ್ಯರು [೧೮೬೬–೧೯೨೧] ಸಣ್ಣಕಥೆಗಳನ್ನು ರಚಿಸುತ್ತಿದ್ದರು. ಸ್ವತಃ ಸಂಪಾದಕರಾದ್ದ ಅವರು 'ಸಚಿತ್ರ ಭಾರತ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ೧೯೫೨ ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯವರು ಕೆರೂರರ ಎಲ್ಲಾ ಕಥೆಗಳನ್ನು ಸಂಗ್ರಹಿಸಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದಲ್ಲಿ ೧೯೨೦ ರಿಂದ ೧೯೫೦ರವರೆಗಿನ ಕಾಲವನ್ನು ನವೋದಯ ಎಂದು ಗುರುತಿಸುತ್ತಾರೆ. ಕೇವಲ ಕಾಲದ ದೃಷ್ಟಿಯಿಂದ ಮಾತ್ರವಲ್ಲದೆ ಸಾಹಿತ್ಯಕ ಧೋರಣೆ

ಹಾಗೂ ಪರಂಪರೆಯ ದೃಷ್ಟಿಯಿಂದಲೂ ನವೋದಯವೆಂದು ಗುರುತಿಸಬಹುದಾಗಿದೆ. ಆದರೆ ಈ ಮೂರು ದಶಕಗಳಲ್ಲಿ ಮಾತ್ರವೇ ನವೋದಯ ಸಾಹಿತ್ಯ ಸೃಷ್ಟಿಯಾಯಿತು ಎಂದು ಹೇಳಲು ಬರುವುದಿಲ್ಲ. ನವೋದಯ ತಲೆಮಾರಿನ ಹಿರಿಯರಲ್ಲಿ ಒಬ್ಬರಾದ ಮಾಸ್ತಿಯವರು ೧೯೧೦ರಿಂದಲೇ ಸಣ್ಣಕಥೆಗಳನ್ನು ರಚಿಸಲು ಪ್ರಾರಂಭಿಸಿದರಲ್ಲದೆ ೧೯೮೦ರ ಅನಂತರವೂ ಸಣ್ಣಕಥೆಗಳನ್ನು ರಚಿಸಿದರು. ನವೋದಯ ಸಾಹಿತ್ಯದ ಧೋರಣೆಗಳನ್ನು ವಸ್ತುವಾಗುಳ್ಳ ಸಣ್ಣಕತೆಗಳನ್ನು ಬರೆದ ಪ್ರಮುಖರು ಈ ಅವಧಿಯಲ್ಲೇ ಕಥಾ ರಚನೆಯಲ್ಲಿ ತೊಡಗಿದ್ದರು ಎಂಬ ಅಂಶ ಗಮನಾರ್ಹವಾದುದು. ಹಾಗಾಗಿ ಸ್ಥೂಲವಾಗಿ ಕಾಲದ ಅವಧಿಯನ್ನು ಆಧರಿಸಿ ನವೋದಯ ಎಂದು ಕರೆಯುವುದಾದರೂ ಈವರೆಗೆ ಸಾಹಿತ್ಯ ಸೃಷ್ಟಿಸಿದ [ನವೋದಯ] ಬರಹಗಾರರನ್ನು ಗಮನದಲ್ಲಿಟ್ಟು ಮಾಡಿದ ವಿಭಜನೆ ಎಂದೇ ಹೇಳಬಹುದು.

೧೯೨೦–೧೯೪೭ರವರೆಗಿನ ಅವಧಿ ಕರ್ನಾಟಕದ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ರಾಜಕೀಯ ದೃಷ್ಟಿಗಳಿಂದ ಗಮನಾರ್ಹವಾದ ಕಾಲವಾಗಿದೆ. ಈ ಅವಧಿಯಲ್ಲಿ [ಸ್ವಾತಂತ್ರ್ಯಪೂರ್ವ] ನವೋದಯ ಸಾಹಿತ್ಯ ಪ್ರವರ್ಧಮಾನ ಸ್ಥಿತಿಯನ್ನು ತಲುಪಿತ್ತು.

ಮಾಸ್ತಿಯವರು ಸಣ್ಣಕಥೆಯ ಕ್ಷೇತ್ರದಲ್ಲಿ ಹಿರಿಯಕಥೆಗಾರರಾಗಿದ್ದು ಚಾರಿತ್ರಿಕ ಮಹತ್ವವುಳ್ಳವರು ಹಾಗೂ ಗುಣದ ದೃಷ್ಟಿಯಿಂದ ಪ್ರಮುಖರೆನಿಸಿದ್ದಾರೆ. ೧೯೧೦ರಿಂದ ೧೯೮೦ರ ನಂತರದ ಕಾಲದಲ್ಲೂ ಅವರು ಕಥೆಗಳನ್ನು ರಚಿಸಿ ಪ್ರಕಟಿಸಿದರು. ಮಾಸ್ತಿಯವರ ಕಥೆಗಳಲ್ಲಿ, ಮಾನವ ಬದುಕಿನ ಸಂಬಂಧಗಳನ್ನು ಬಿಡಿಸಿ ತೋರಿಸುವ ಮತ್ತು ಅದರ ಸರಿತಪ್ಪುಗಳನ್ನು ಅರಿವಿಗೆ ತರುವ ಶಕ್ತಿ ಅಡಗಿದೆ ಎಂದು ಹೇಳಬಹುದು. ಈ ಎಲ್ಲವನ್ನು ಮಾಸ್ತಿಯವರು ಧರ್ಮದ ಮೌಲ್ಯಗಳ ಪರಿಧಿಯಲ್ಲಿ ನೋಡುತ್ತಾರೆ. ಸಹಸ್ರಾರು ವರ್ಷಗಳ ಸಂಸ್ಕೃತಿಯನ್ನು ಶ್ರದ್ಧೆಯಿಂದ ಕಾಪಾಡಿಕೊಂಡು ಬರಬೇಕು ಎನ್ನುವ ಆಶಯ ಮಾಸ್ತಿಯವರ ಬರಹಗಳಲ್ಲಿ ಎದ್ದುಕಾಣುತ್ತದೆ. ಅದರ ಜೊತೆ ಜೊತೆಗೆ ಆ ಸಂಸ್ಕೃತಿಯನ್ನು ಆಧುನಿಕತೆಗೆ ತಕ್ಕಂತೆ ರೂಪಿಸಿಕೊಳ್ಳಬೇಕೆಂಬ ತುಡಿತವೂ ಗೋಚರಿಸುತ್ತದೆ. ಸಂಸ್ಕೃತಿಯನ್ನು ಉಳಿಸುವುದು ಮತ್ತು ರೂಪಿಸುವುದು ಅವುಗಳೊಂದಿಗೆ ಒಡನಾಡುವ ವ್ಯಕ್ತಿಗಳನ್ನು ಅವಲಂಭಿಸಿರುತ್ತವೆ.

ಆದರಿಂದಾಗಿಯೇ ಮಾಸ್ತಿಯವರ ಕಥೆಗಳು ಮನುಷ್ಯ ಸಂಬಂಧಗಳ ಕಡೆಗೆ ವಿಶೇಷ ದೃಷ್ಟಿಹರಿಯುವಂತೆ ಮಾಡುತ್ತವೆ. ವ್ಯಕ್ತಿ ವ್ಯಕ್ತಿಗಳ ನಡುವೆ ಉಂಟಾಗುವ ಬಿಕ್ಕಟ್ಟು, ಮಾನವೀಯ ಸಂಬಧ, ಮಾನಸಿಕ ಅಂತರ–ಇವುಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತವೆ. ತನ್ಮೂಲಕ ಸಂಸ್ಕೃತಿಯ ಮೌಲ್ಯಗಳ ಸತ್ವವನ್ನು ತೋರಿಸುತ್ತವೆ ಹಾಗೂ ಅದೇ ಮೌಲ್ಯಗಳ ಚೌಕಟ್ಟಿನಲ್ಲೇ ನೋವುಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿಯನ್ನು ಕಾಣಬಹುದುದಾಗಿದೆ.

ಕಲಾತ್ಮಕ ಚೌಕಟ್ಟಿನಲ್ಲಿ ಕಥೆಗಳನ್ನು ಪ್ರಯೋಗಿಸಿ ನಿರೂಪಿಸಿರುವ ದೃಷ್ಟಿಯಿಂದ ಮಾಸ್ತಿಯವರ ಬರಹಗಳು ಪ್ರಮುಖವೆನಿಸುತ್ತವೆ. ಸನ್ನಿವೇಶ, ಪಾತ್ರ, ಕಥೆಗಾರ, ಇವರ ನಡುವೆ ಅಂತರ ಕಾಪಾಡುವುದರೊಡನೆ ತಾಳ್ಮೆ, ಸಮಾಧಾನ, ದಾಟಿಯ ಬರಹಗಳನ್ನು ಅವರಲ್ಲಿ ಕಾಣಬಹುದು. ಹಾಗಾಗಿ ಮುಂದಿನ ಕಥೆಗಾರರ ಮೇಲೆ ಅವರ ಪ್ರಭಾವ ಹೆಚ್ಚಾಗಿ ಆಗಿರುವುದನ್ನು ಗುರುತಿಸಬಹುದು.

ಮಾಸ್ತಿಯವರ ಅನಂತರ ಸಣ್ಣಕಥೆಗಳ ರಚನೆಯಲ್ಲಿ ನವೋದಯದ ತಲೆಮಾರಿನವರಲ್ಲಿ ಗುರುತಿಸಬೇಕಾದವರು ಎ.ಆರ್.ಕೃಷ್ಣಶಾಸ್ತ್ರಿಗಳು ೧೯೨೩ರಿಂದ ೧೯೪೪ರವರೆಗೆ ಅವರು 'ಪ್ರಬುದ್ಧ ಕರ್ನಾಟಕ'ದಲ್ಲಿ ಶ್ರೀಪತಿ, ಕಮಲ, ಕಪ್ಪಣ್ಣ, ರಾಮಣ್ಣ, ಗೋಪಾಲ ಮುಂತಾದ ಹೆಸರುಗಳಲ್ಲಿ ಕಥೆಗಳನ್ನು ಪ್ರಕಟಿಸಿದರು. "ಶ್ರೀಪತಿಯ ಕತೆಗಳು" [೧೯೪೮] ಎಂಬ ಹೆಸರಿನ ಸಂಕಲನದಲ್ಲಿ ಹನ್ನೆರಡು ಕಥೆಗಳು ಪ್ರಕಟವಾಗಿವೆ. ಕೃಷಶಾಸ್ತ್ರಿ ಅವರ ಕತೆಗಳು ಮಾನವ ಬದುಕಿನ ಗಂಭೀರ ಸಮಸ್ಯೆಗಳ ಬಗೆಗೆ ಓದುಗರ ಗಮನವನ್ನು ಸೆಳೆಯುತ್ತವೆ. ಅವರ ಕಥೆಗಳು ಹಿಂದೂ ಧರ್ಮದ, ಹಿಂದೂ ಸಂಸ್ಕೃತಿಯ ಮೌಲ್ಯಗಳ ಚೌಕಟ್ಟಿನೊಳಗೆ ರೂಪುಗೊಂಡಿವೆ. ಇವು ಅವರ ಕಥೆಗಳ ರೀತಿ ಮತ್ತು ಮಹತ್ವವನ್ನು ನಿರ್ಧರಿಸುವ ಅಂಶಗಳಾಗಿವೆ. 'ಬಂಗಲೆಯ ಮನೆ', 'ಅತ್ತೆ', 'ಗುರುಗಳ ಮಹಿಮೆ', ಕಥೆಗಳನ್ನು ವಿಮರ್ಶಕರು ಮುಖ್ಯ ಕಥೆಗಳೆಂದು ಪರಿಗಣಿಸಿದ್ದಾರೆ.

ಸೋಸಲೆ ಗರಳಪುರಿಶಾಸ್ತ್ರಿಯವರು [೧೮೯೦-೧೯೫೫] ಕೃಷ್ಣಶಾಸ್ತ್ರಿಗಳ ಸಮಕಾಲೀನರು. ಮಾಸ್ತಿಯವರ ಜೊತೆ ಜೊತೆಗೆ ಕಥೆಗಳನ್ನು ರಚಿಸಿದ್ದಾರೆ. 'ಪ್ರಬುದ್ಧಕರ್ನಾಟಕ' ದ ಪ್ರಾರಂಭದ ಸಂಚಿಕೆಗಳಲ್ಲಿ ಗರಳಪುರಿಶಾಸ್ತ್ರಿ ಅವರ 'ಹಬ್ಬದ ಉಡುಗೊರೆ' ಹಾಗೂ 'ವಾರದ ಹುಡುಗ' ಎಂಬ ಕಥೆಗಳು ಪ್ರಕಟವಾಗಿದ್ದವು. 'ಇದ್ದರೂ ಇರಬಹುದು' [೧೯೪೬] ಹಾಗೂ 'ಪರಪುರುಷ ಮತ್ತು ಇತರ ಕಥೆಗಳು' [೧೯೫೪] ಎಂಬ ಕಥಾ ಸಂಕಲನಗಳು ಪ್ರಕಟವಾಗಿವೆ. ಇವರ ಕಥೆಗಳಲ್ಲಿ ಆದರ್ಶ, ಭಾವುಕತೆಗಳ ಎಳೆಗಳನ್ನು ಕಾಣಬಹುದು. ಮುಖ್ಯವಾಗಿ ಕೌಟುಂಬಿಕ ಬಿಕ್ಕಟ್ಟನ್ನು ವಸ್ತುವಾಗುಳ್ಳ ಕಥೆಗಳನ್ನು ರಚಿಸಿದ್ದಾರೆ. ಈ ಬಿಕ್ಕಟ್ಟನ್ನು ಪರಿಹರಿಸುವಂಥ ಹಾಗೂ ಮನುಷ್ಯನ ಸಂತೋಷಕ್ಕೆ ಕಾರಣವಾಗುವ ಶಕ್ತಿಗಳನ್ನು ಶಾಸ್ತ್ರಿಗಳು ಗುರುತಿಸಿರುವಂತೆ ತೋರುತ್ತದೆ. ಶಾಸ್ತ್ರಿಗಳು ಹೆಚ್ಚು ಎನಿಸುವಷ್ಟು ವಿವರಗಳನ್ನು ತಮ್ಮ ಕಥೆಯಲ್ಲಿ ತುಂಬುತ್ತಾರೆ. ಇದರಿಂದಾಗಿ ಅವರ ಕಥೆಗಳಲ್ಲಿ ಕಥಾವಸ್ತುವಿಗೆ ಅಗತ್ಯವಾದ ವಾತಾವರಣಸೃಷ್ಟಿ ಸಮಧಾನವಾಗಿ ಕಾಣುವುದಿಲ್ಲವೆಂದೇ ಹೇಳಬಹುದು.

ಮಾಸ್ತಿಯವರ ಸಮಕಾಲಿನರೇ ಆದ ಮತ್ತೋರ್ವ ಕಥೆಗಾರ 'ಕೊರಡ್ಕಲ್ ಶ್ರೀನಿವಸರಾವ್' [೧೮೯೫-೧೯೪೮] ಅವರು ಹದಿನಾರು ಕಥೆಗಳನ್ನು ಬರೆದಿದ್ದಾರೆ. ಮೇಲೆ ಹೇಳಿದ ಕಥೆಗಾರರಿಗಿಂತ ಭಿನ್ನವಾದ ಕಥೆಗಳನ್ನು ಶ್ರೀನಿವಾಸರಾವ್ ಅವರು ರಚಿಸಿದ್ದಾರೆ. ಅವರ ಹಲವು ಕಥೆಗಳ ವಸ್ತು ದುರ್ಬಲ ಹಾಗೂ ಶೋಷಿತ ವರ್ಗಗಳ ಬದುಕಿನ ಚಿತ್ರಣವಾಗಿವೆ. ಶೋಷಿತ ವರ್ಗದವರ ಬದುಕನ್ನು ಮಾನವೀಯ ಸಂಬಂಧಗಳ ಹಿನ್ನೆಲೆಯಲ್ಲಿ ನೋಡುವ, ಅದಕ್ಕೆ ಅನುಕಂಪದ ಲೇಪ ಹಚ್ಚದೆ ವಸ್ತುಸ್ಥಿತಿಯ ನೈಜತೆಯನ್ನು ಹಾಗೆಯೇ ತೆರೆದಿಡುವಲ್ಲಿ ಶ್ರೀನಿವಾಸರಾವ್ ಅವರ ಕಥೆಗಳು ಯಶಸ್ವಿಯಾಗಿವೆ. ಅವರ 'ಧನಿಯರ ಸತ್ಯನಾರಾಯಣ' ಒಂದು ಉತ್ತಮ ಕತೆಯಾಗಿದೆ.

ಮಾಸ್ತಿಯವರ ಪ್ರಭಾವದಲ್ಲಿ ಬೆಳೆದ ತುಂಬ ಜನಪ್ರಿಯ ಕಥೆಗಾರ 'ಅಜ್ಜಂಪುರ ಸೀತಾರಾಮ್' [ಆನಂದ ೧೯೦೨-೧೯೬೩] ಅವರ ಜನಪ್ರಿಯತೆ ಹೆಚ್ಚಿದುದು ಅವರು ಬರೆದ

ಪ್ರಣಯ ಕಥೆಗಳಿಂದ. ಅವರು ತಮ್ಮ ಕಥೆಗಳಲ್ಲಿ ಸಂಸಾರದ ಸರಸಕ್ಕೆ ಪ್ರಾಧಾನ್ಯನೀಡುತ್ತಾರೆ. ಗಂಡ, ಹೆಂಡತಿ, ಒಂದು ಮಗು ಇರುವ ಸಂಸಾರದಲ್ಲಿ ನಡೆಯುವ ಸರಸವಿರಸಗಳನ್ನು ಚಿತ್ರಿಸುತ್ತಾರೆ. ಕೆಲವು ಕಥೆಗಳಲ್ಲಿ ವಿವಾಹಪೂರ್ವಪ್ರಣಯ ಚಿತ್ರಣವಿದೆ. ಆನಂದ ಅವರ ಕಥೆಗಳಲ್ಲಿ ನೋವಿನ ಪ್ರಸಂಗಗಳು ಬಹುಕಡಿಮೆ. ಆದರೆ ಅವರ 'ನಾನು ಕೊಂದ ಹುಡುಗಿ'ಯಲ್ಲಿ ನೋವಿನ ವಸ್ತು ಪ್ರಧಾನವಾಗಿದೆ. ಆನಂದ ಅವರ ಕಥೆಗಳಲ್ಲಿ ಮಾಸ್ತಿಯವರ ಕಥೆಗಳಂತೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾಳಜಿ ಹೆಚ್ಚಾಗಿ ಕಂಡು ಬರುವುದಿಲ್ಲ. ಅದಕ್ಕೆ ಬದಲಾಗಿ ಇವರ ಕಥೆಗಳಲ್ಲಿ "ಅನುಭವಕ್ಕೆ ಅಂತರ್ಮುಖತೆಯ ಆಯಾಮ ಸೇರಿಸಿಕೊಳ್ಳದೆ ಕಥೆಗಳು ರಸಿಕತೆಯಿಂದ ಭಾವುಕತೆಯಿಂದ ಬೀಗುತ್ತವೆ".[೫]

ಮಾಸ್ತಿಯವರ ಪ್ರಭಾವ ಹೊಂದಿದ ಕಥೆಗಾರರಲ್ಲಿ ಕೆ.ಗೋಪಾಲಕೃಷ್ಣರಾಯರು ಒಬ್ಬರು [೧೯೦೬-೧೯೬೭] 'ನಟಿ', 'ಉಡುಗೊರೆ', 'ಬಂಗಾರದ ಡಾಬು', ಮತ್ತು 'ಕೆನ್ನಿಂಗ್ ಟನ್ ಪಾರ್ಕ್' ಎಂಬ ನಾಲ್ಕು ಕಥಾ ಸಂಕಲನಗಳು ಪ್ರಕಟವಾಗಿವೆ. ಆನಂದರ ನಂತರ ಹೆಚ್ಚು ಜನಪ್ರಿಯತೆಗಳಿಸಿದ ಕಥೆಗಾರರೆನಿಸಿದ್ದಾರೆ. ಬದುಕಿನಲ್ಲಿ ಉಂಟಾಗುವ ನೋವಿಗೆ ಕಾರಣಗಳನ್ನು ಹುಡುಕುವ ಪ್ರಯತ್ನ ಇವರ ಕಥೆಗಳಲ್ಲಿ ಗೋಚರಿಸುತ್ತದೆ. ಒಂದು ಹಂತದ ತಾಂತ್ರಿಕ ಸಿದ್ಧತೆ ಇವರ ಕಥೆಗಳಲ್ಲಿದೆ. ಅಂತಃಕರಣದ ಕಣ್ಣಿನಿಂದ ಬದುಕಿನ ಚಿತ್ರವನ್ನು ಹೆಣೆಯುವುದು ಹಾಗೂ ಆ ದಿಶೆಯಲ್ಲಿಯೇ ಬದುಕಿಗೆ ಅರ್ಥಹುಡುಕುವ ಪ್ರಯತ್ನವನ್ನು ಇವರ ಕಥೆಗಳಲ್ಲಿ ಕಾಣಬಹುದು.

ನವೋದಯ ಸಣ್ಣಕಥೆಯ ಗಣ್ಯರಲ್ಲೊಬ್ಬರಾದ ಕುವೆಂಪು [೧೯೦೪-೧೯೯೪] ಅವರು 'ಸನ್ಯಾಸಿ ಮತ್ತು ಇತರ ಕಥೆಗಳು' [೧೯೩೬] 'ದೇವರು ಮತ್ತು ಇತರ ಕಥೆಗಳು' [೧೯೪೦] ಎಂಬ ಎರಡು ಕಥಾ ಸಂಕಲನಗಳನ್ನು ಪ್ರಕಟಿಸಿದ್ದರೂ ಸಣ್ಣಕಥೆಯನ್ನು ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡವರಲ್ಲ. ಅವರ ಕಥೆಗಳನ್ನು ಬಿಡಿಬಿಡಿಯಾಗಿ ನೋಡಬೇಕೇ ಹೊರತು, ಹಿಡಿಯಾಗಿ ಯಾವುದೇ ಒಂದು ಉದ್ದೇಶವನ್ನಿಟ್ಟು ರಚಿಸಿದಂತೆ

ಕಾಣುವುದಿಲ್ಲ. ಕಾದಂಬರಿಗಳಲ್ಲಿ ಕಾಣಿಸಿಗುವಷ್ಟು ಸ್ವೋಪಜ್ಞತೆ ಕುವೆಂಪು ಅವರ ಕಥೆಗಳಲ್ಲಿ ಕಾಣಸಿಗುವುದಿಲ್ಲ.

ಕಡೆಂಗೋಡ್ಲು ಶಂಕರಭಟ್ಟ [೧೯೦೪–೧೯೭೮] ಅವರು 'ಹಿಂದಿನ ಕತೆಗಳು' [೧೯೪೯] 'ಗಾಜಿನ ಬಳೆ' [೧೯೪೭] 'ಮುಡಿಯುವ ಮಕ್ಕಳು' [೧೯೫೩], ಎಂಬ ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರು ಗಂಭೀರವಾದ ವಸ್ತುವನ್ನು 'ಮೇಲೋ ಡ್ರಾಮ'ವಾಗಿ ಮಾಡುವುದರಿಂದ ಕಥೆಗಳು ಯಶಸ್ವಿಯಾಗಿ ಓದುಗನನ್ನು ಮುಟ್ಟುವುದಿಲ್ಲ. "ಮಾದ್ರಿಯ ಚಿತೆ ಯಂತ ಕದನದಲ್ಲಿ ಅವರು ತೋರಿಸುವ ಕುಸುರಿ ಮತ್ತು ತಾತ್ವಿಕ ಪ್ರಬುದ್ಧತೆಗಳು ಅವರ ಕಥೆಗಳಲ್ಲಿ ಕಾಣಬರುವುದಿಲ್ಲ".[೬] ಎಂದು ಹೇಳಲಾಗಿದೆ.

ಸಣ್ಣಕಥೆಗಳನ್ನು ಧಾರವಾಡ ಕಡೆಯಲ್ಲಿ ರಚಿಸುತ್ತಿದ್ದವರಲ್ಲಿ ಬೆಟಗೇರಿ ಕೃಷ್ಣಶರ್ಮ [ಆನಂದಕಂದ] ೧೯೦೦–೧೯೮೨] ಪ್ರಮುಖರೆನಿಸುತ್ತಾರೆ. ೧೯೨೨ರಲ್ಲಿ 'ಮಾತೃಭೂಮಿ ಪತ್ರಿಕೆ'ಯಲ್ಲಿ ಬೆಟಗೇರಿ ಅವರ ಮೊದಲ ಕಥೆ 'ನನ್ನ ಗೆಳೆಯ' ಪ್ರಕಟವಾಯಿತು 'ಅನಾಥ ಬಂಧು' ಮತ್ತು 'ಕಾಣದ ಕೈ' [೧೯೨೭] 'ಬಡತನದ ಬಾಳು' [೧೯೩೨] 'ಸಂಸಾರ ಚಿತ್ರ' [೧೯೩೨] 'ನಮ್ಮ ಬದುಕು' [೧೯೩೯], 'ಜನಪದ ಜೀವನ' [೧೯೫೫], 'ಮಾತನಾಡುವ ಕಲ್ಲು' [೧೯೬೩], 'ಕಳ್ಳರ ಗುರು ಮತ್ತು ಇತರ ಕಥೆಗಳು' [೧೯೬೯], ಎಂಬ ಕಥಾ ಸಂಕಲನಗಳು ಪ್ರಕಟವಾಗಿವೆ. ಇವರ ಬಹುತೇಕ ಕಥೆಗಳ ವಸ್ತು ಉತ್ತರ ಕರ್ನಾಟಕದ ಜನಜೀವನವಾಗಿದೆ. ಗ್ರಾಮೀಣ ಜನರ ಜೀವನ ಕ್ರಮಕ್ಕೆ ಇವರು ನೀಡುವ ಪ್ರಾಧಾನ್ಯತೆ ಇವರ ಕಥೆಗಳಲ್ಲಿ ಮಹತ್ವದ ಅಂಶವೆನಿಸುತ್ತವೆ. ಆ ಜನರ ನೋವು–ನಲಿವು, ನಂಬಿಕೆ–ಶ್ರದ್ಧೆ, ನೀತಿ–ನಿಯಮಗಳನ್ನು ವಸ್ತುವಾಗಿಸಿ ಕಲಾತ್ಮಕ ಕಥೆಗಳನ್ನು ನೀಡುವಲ್ಲಿ ಬೆಟಗೇರಿ ಕೃಷ್ಣಶರ್ಮರು ಸಮರ್ಥರೆನಿಸಿದ್ದಾರೆ.

ಮಾಸ್ತಿಯವರ ಅನಂತರದ ತಲೆಮಾರಿನ ಮಹತ್ವದ ನವೋದಯ ಕಥೆಗಾರರಲ್ಲಿ ಪ್ರಮುಖರೆನಿಸುವವರು ರಂ.ಶ್ರೀ. ಮುಗಳಿ [೧೯೦೬–೧೯೯೩] ಅವರು 'ಕನಸಿನ ಕೆಳದಿ'

[೧೯೩೦] 'ವಿರಕ್ತ ಸಂಸಾರಿ' [೧೯೪೩] ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಥಾವಸ್ತುವಿನ ಸುಸಂಬದ್ಧಚಿತ್ರಣ ಹಾಗೂ ಪರಿಣಾಮಕಾರಿ ಅಂತ್ಯ ಇವು ಮುಗಳಿಯವರ ಕಥೆಗಳ ವೈಶಿಷ್ಟ್ಯಗಳೆಂದರೆ ಅತಿಶಯೋಕ್ತಿಯೇನಲ್ಲ.

ಗೊರೂರು ರಾಮಸ್ವಾಮಿ ಅಯ್ಯಂಗಾರರು [೧೯೦೪–೧೯೯೧] 'ಹಳ್ಳಿಯ ಚಿತ್ರಗಳು' [೧೯೩೦] ಕಥಾಸಂಕಲನದ ಮೂಲಕ ಹಳ್ಳಿಯ ಜೀವನವನ್ನು ಸಣ್ಣಕಥಾ ಜಗತ್ತಿಗೆ ಪರಿಚಯಿಸಿದರು. ಹಳ್ಳಿಯ ಜೀವನ ಪರಿಪೂರ್ಣ ಎಂದು ಚಿತ್ರಿಸದೆ ಅಲ್ಲಿನ ಮೇಲ್ಕೀಳುಗಳು, ಅಸೂಯೆ–ಸಂಚುಗಳು, ಎಲ್ಲವನ್ನು ನಿರೂಪಿಸಿದರು. "ಆ ಜೀವನದ ಸತ್ವವನ್ನೂ ಲವಲವಿಕೆಯನ್ನೂ ಪ್ರಸನ್ನತೆಯನ್ನೂ ಅನುಕಂಪ–ಹಾಸ್ಯಬೆರೆತ ದೃಷ್ಟಿಯಿಂದ ಕಂಡು ಪುನರ್‌ಸೃಷ್ಟಿಮಾಡಿದರು"[೭] ಗೊರೂರರ ಕಥೆಗಳಲ್ಲಿ ಹಾಸ್ಯಪ್ರಜ್ಞೆ ಪ್ರಮುಖವಾಗಿದ್ದು ಸರಳ ಹಾಗೂ ನೇರಗತಿಯಲ್ಲಿ ಕಥೆಹೇಳುವ ತಂತ್ರವನ್ನು ಅಳವಡಿಸಿದ್ದಾರೆ. "ವಾಸ್ತವವನ್ನು ಹನಿಗಣ್ಣಿನಲ್ಲಿ ನೋಡುತ್ತಾ ಅದರ ಹಾಸ್ಯದ ಬೆನ್ನನ್ನೂ ಕಾಣಿಸುವ ಗೊರೂರರ ಕಥೆಗಳು ಕನ್ನಡದ ಹಾಸ್ಯಕಥೆಗಳ ದೃಷ್ಟಿಯಿಂದ ಪ್ರಮುಖವಾಗುತ್ತವೆ."[೮] ಲೋಕಾಭಿರಾಮವಾಗಿ ಕಥೆಗಳನ್ನು ನಿರೂಪಿಸಿದ್ದಾರೆ. 'ಮಲ್ಲಿಗೆಹಳ್ಳಿಯಲ್ಲಿ ಬಯಲಾಟ', 'ಗಂಡುಬೀರಿ ಹೊಸಬಿ', 'ಬೆಸ್ತರ ಕರಿಯ', 'ನಾಯಬಾಲ' ಇವು ಅವರ ಕೆಲವು ಸೊಗಸಾದ ಕಥೆಗಳಾಗಿವೆ.

ನವೋದಯ ಸನ್ನಿವೇಶದಲ್ಲಿ ಮಹಿಳೆಯರೂ ಸಣ್ಣಕಥೆಗಳನ್ನು ಬರೆದಿದ್ದಾರೆ. ಪ್ರಮುಖರಾದವರಲ್ಲಿ ಆರ್.ಕಲ್ಯಾಣಮ್ಮ [೧೮೮೪–೧೯೬೫] ಒಬ್ಬರು. 'ಪ್ರಿಯಂವದಾ' ಕಥಾ ಸಂಕಲನ ಮೊದಲಿನದು. ಸ್ತ್ರೀಯರ ಆದರ್ಶ, ತ್ಯಾಗ, ನೀತಿ ಇವು ಇವರ ಕಥೆಗಳ ವಸ್ತು. ಹಲವು ಕಥೆಗಳಲ್ಲಿ ನೋವು ಪ್ರಧಾನವಾಗಿದೆ. ಬಾಳಿನದುರಂತವನ್ನು ಹನಿಗಣ್ಣಿನಲ್ಲಿ ಚಿತ್ರಿಸಿದ್ದಾರೆ.

ಕೊಡಗಿನ ಗೌರಮ್ಮ [೧೯೧೨–೧೯೩೯] ನವೋದಯ ಮಾರ್ಗದಲ್ಲಿ ಬರೆಯುತ್ತಿದ್ದ ಪ್ರಮುಖ ಕಥೆಗಾರರು. ಇವರ 'ಚಿಗುರು', ಮತ್ತು 'ಕಂಬನಿ', ಕಥಾಸಂಕಲನಗಳು

ಪ್ರಕಟವಾಗಿವೆ. ಗೌರಮ್ಮನವರು ಹೆಣ್ಣಿನ ಮನಸ್ಸಿನ ತುಮುಲಗಳನ್ನು, ಬಾಳಿನ ತೊಡಕುಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿಗೆ ಸಹಜವಾಗಿ ಇರುವ ಅಂತಃಕರಣದ ಮಿಡಿತವನ್ನು ಕಲಾತ್ಮಕವಾಗಿ ಇವರ ಕಥೆಗಳಲ್ಲಿ ಕಾಣಬಹುದು.

ನವೋದಯ ಮಾರ್ಗದಲ್ಲಿ ಮೇಲೆ ತಿಳಿಸಿದವರುಗಳಲ್ಲದೆ ಇನ್ನೂ ಅನೇಕರು ಕಥೆಗಳನ್ನು ಬರೆದಿದ್ದಾರೆ. ಜಿ.ಪಿ.ರಾಜರತ್ನಂ, ಕೃಷ್ಣಕುಮಾರ ಕಲ್ಲೂರ, ಪು.ತಿ.ನ, ನವರತ್ನ ರಾಮರಾವ್, ಅಶ್ವತ್ಥ, ವಿ.ಸೀತಾರಾಮಯ್ಯ, ಎಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ಶಾಂತದೇವಿ ಕಣವಿ. ಗೀತಾ ಕುಲಕರ್ಣಿ ಎಲ್.ಎಸ್.ಶೇಷಗಿರಿರಾವ್, ಶ್ಯಾಮಲ ದೇವಿ, ಹಿರೇಮಲ್ಲೂರು ಈಶ್ವರನ್, ನಿರುಪಮಾ, ಪ್ರೇಮಾಭಟ್, ಮೊದಲಾದವರು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ.

ಕನ್ನಡ ಸಾಹಿತ್ಯದ ರಚನೆಯಲ್ಲಿ ಐದನೆ ದಶಕದಲ್ಲಿ ಸಣ್ಣಕಥೆ ಬೇರೊಂದು ತಿರುವು ಪಡೆಯಿತು. ದೇಶದಲ್ಲಿ ಆಗತಾನೆ ಕಾಲಿಟ್ಟಿದ್ದ ಕೈಗಾರಿಕಾ ಕ್ರಾಂತಿಗೆ ಪ್ರತಿರೂಪವೆಂಬಂತೆ ಹುಟ್ಟಿದ ಈ ಹೊಸ ಸಾಹಿತ್ಯ ಮಾರ್ಗ ಪ್ರಗತಿಶೀಲ ಎಂಬ ಹೆಸರನ್ನುಪಡೆಯಿತು. ಶೋಷಿತರ, ದುರ್ಬಲರ ಜೀವನವನ್ನು ಚಿತ್ರಿಸುವ ಉದ್ದೇಶವನ್ನು ಹೊಂದಿದ್ದ ಈ ಸಾಹಿತ್ಯ ಮೊದಮೊದಲು ನವೋದಯಕ್ಕೆ ಪ್ರತಿಕ್ರಿಯೆ ಎಂಬಂತೆ ರೂಪುತಾಳಿತು. ವರ್ಗಹೋರಾಟ ಹಾಗೂ ಸಮೂಹನಿಷ್ಠ ಧೋರಣೆ ಮುಖ್ಯವಾಗಿದ್ದ ವಸ್ತುವನ್ನು ಇವರು ಆರಿಸಿಕೊಂಡರು. ಶೋಷಕ –ಶೋಷಿತರೆಂದು ಜನಸಮೂಹವನ್ನು ಎರಡು ಭಾಗಮಾಡಿಕೊಂಡು ನೋಡುವ ದೃಷ್ಟಿ ಬೆಳೆಯಿತು. ಪ್ರಗತಿಶೀಲರು ತಮ್ಮ ತತ್ವಪ್ರಕಾರಗಳಿಗೆ ವಿರೋಧವಾದವರನ್ನು ಖಂಡಿಸುವ ಮನೋಭಾವದ ಮೂಲಕವೇ ನೋಡುತ್ತಾರೆ. ನವೋದಯದವರಿಗೆ ಹಿಂದೂ ಆಶಯಗಳ ಬದ್ಧತೆ ಇದ್ದರೆ ಪ್ರಗತಿಶೀಲರು ಮಾರ್ಕ್ಸವಾದದ ಬದ್ಧತೆಗೆ ಒಳಗಾಗಿದ್ದಾರೆ.

ಪ್ರಗತಿಶೀಲ ಮಾರ್ಗದ ಕಥೆಗಾರರಲ್ಲಿ ಮೊದಲಿಗರು ಅ.ನ.ಕೃಷ್ಣರಾಯರು [೧೯೦೮–೧೯೭೧]. ಇವರು ಬರವಣಿಗೆಯ ಆರಂಭದಲ್ಲಿ ನವೋದಯದ ಪ್ರಭಾವದಲ್ಲೇ ಕಥೆ

ರಚಿಸಿದರು. ಆದರೆ ಮುಂದೆ ಪ್ರಗತಿಶೀಲತೆಯನ್ನು ಅಳವಡಿಸಿಕೊಂಡರು. ಅ.ನ.ಕೃ ಅವರು 'ಕಿಡಿ' [೧೯೩೨], 'ಪಾಪ ಪುಣ್ಯ' [೧೯೪೩], 'ಮಿಂಚು ಶಿಲ್ಪ' [೧೯೪೯], 'ಅಗ್ನಿಕನ್ಯೆ' [೧೯೫೧], 'ಸಮರ ಸುಂದರಿ' [೧೯೬೦] ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕಥೆಗಳಲ್ಲಿ ಸಾಮಾಜಿಕ ವಿಷಮತೆ, ರಾಜಕೀಯ ವ್ಯಕ್ತಿಗಳಿಂದಾಗುವ ಅನ್ಯಾಯ, ದುರ್ಬಲರ, ದಲಿತರ ಮೇಲಿನ ಶೋಷಣೆ, ವಸ್ತುವಾಗಿವೆ. ವರ್ತಮಾನದ ಆಗುಹೋಗುಗಳಿಗೆ ಇವರು ಸ್ಪಂದಿಸಿದ್ದಾರೆ. ಆದರೆ ಕಥೆಗಾರರಾಗಿ ಹೆಚ್ಚು ಸಾಧನೆಮಾಡಲಿಲ್ಲ.

ತ.ರಾ.ಸುಬ್ಬರಾಯರು [೧೯೨೦-೧೯೮೪] 'ರೂಪಸಿ', 'ತೊಟ್ಟಿಲು ತೂಗಿತು', 'ಗಿರಿಮಲ್ಲಿಗೆಯ ನಂದನದಲ್ಲಿ', ಮತ್ತು 'ಇದೇ ನಿಜವಾದ ಸಂಪತ್ತು' ಎಂಬ ನಾಲ್ಕು ಕಥಾಸಂಕಲಗಳನ್ನು ಪ್ರಕಟಿಸಿದ್ದಾರೆ. ತರಾಸು ಅವರ ಕಥೆಗಳಲ್ಲಿ ವೈವಿಧ್ಯವಿದೆ, ಕಲೆಯಿದೆ, '೦-೦=೦' ಎಂಬ ಕಥೆ ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಣ್ಣಕಥೆಯ ಸಂದರ್ಭದಲ್ಲಿ ಪ್ರಮುಖವಾದುದೆನಿಸುತ್ತದೆ. ಅಲ್ಲಿಯವರೆಗೆ ಬಂದ ಕಥೆಗಳಿಗಿಂತ ತುಂಬಾ ಭಿನ್ನವಾಗಿದೆ. "ಕಥಾಂಶವೇ ಇಲ್ಲ ಎನ್ನಬಹುದಾದ ಈ ರಚನೆಯಲ್ಲಿ ಪ್ರತಿಮೆಗಳಿಂದ ಕಥೆಯನ್ನು ಬೆಳೆಸುವ ಕೌಶಲ ಅಪೂರ್ವವಾದುದು."[೯] ಇದರಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಅಳವಡಿಸಿರುವುದಲ್ಲದೆ, ಭಾವಗೀತೆಗೆ ಸಮೀಪವಾದ ಭಾವತೀವ್ರತೆಯನ್ನೂ ಸಾಧಿಸಿದ್ದಾರೆ. ಆದರೆ ತರಾಸು ಅವರ ಕಥೆಗಳಲ್ಲಿ ಪ್ರಗತಿಶೀಲತೆ ಅತ್ಯಂತ ನಿಷ್ಠುರ ರೂಪದಲ್ಲಿ ಕಾಣಬರುವುದಿಲ್ಲ.

ಪ್ರಗತಿಶೀಲ ಕಥೆಗಾರರೆಂದು ಗುರುತಿಸಬಹುದಾದರೂ ಉಳಿದ ಕಥೆಗಾರರಿಗಿಂತ ಭಿನ್ನವಾದ ರಚನೆಯನ್ನು ಚದುರಂಗ [ಎಂ.ಸುಬ್ರಹ್ಮಣ್ಯರಾಜೇಅರಸ್ (೧೯೧೬-೧೯೯೮)] ಅವರಲ್ಲಿ ಕಾಣಬಹುದು. 'ಸ್ವಪ್ನಸುಂದರಿ' [೧೯೪೮], 'ಶವದಮನೆ', 'ಇಣುಕುನೋಟ', 'ಬಂಗಾರದ ಹೆಜ್ಜೆ', 'ಮೀನಿನ ಹೆಜ್ಜೆ', 'ಬಣ್ಣದ ಬೊಂಬೆ', 'ಕ್ವಾಟೆ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಚದುರಂಗ ಅವರ ಕಥೆಗಳಲ್ಲಿ ಅನ್ಯಾಯ, ಅಸಮತೆಗಳು ವಸ್ತುವಾಗಿವೆ. ಸಾಮಾಜಿಕ ಅನ್ಯಾಯಗಳ ಬಗೆಗೆ ಬರೆಯುವಾಗಲೂ ಮಾನವೀಯ

ಅಂತಃಕರಣದಿಂದ ಬದುಕನ್ನು ನೋಡುವುದು ಪ್ರಗತಿಶೀಲರಲ್ಲಿ ಚದುರಂಗರನ್ನು ವಿಶಿಷ್ಟ ಬರಹಗಾರರನ್ನಾಗಿ ಮಾಡಿದೆ.

ಪ್ರಗತಿಶೀಲ ತತ್ವಗಳನ್ನು, ಲಕ್ಷಣಗಳನ್ನು ಹೆಚ್ಚಿನ ಮಟ್ಟದಲ್ಲಿ ಮೈಗೂಡಿಸಿಕೊಂಡು ಹೆಚ್ಚಿನ ಉದ್ವಿಗ್ನತೆಯಿಂದ ವಸ್ತುವನ್ನು ಗ್ರಹಿಸುವ, ಅಭಿವ್ಯಕ್ತಿಸುವ ಕಲೆಗಾರಿಕೆ ಬಸವರಾಜ ಕಟ್ಟೀಮನಿ [೧೯೧೯–೧೯೮೯] ಅವರದು. ಸಾಮಾಜಿಕ ಅನ್ಯಾಯ, ಸ್ವಾತಂತ್ರ್ಯಚಳುವಳಿ, ರಾಜಕೀಯ ವಿಷಮತೆಗಳನ್ನು ತಮ್ಮ ಕಥೆಗಳಲ್ಲಿ ಓದುಗನಿಗೆ ಮುಟ್ಟುವಂತೆ ಅದ್ಭುತವಾಗಿ ಚಿತ್ರಿಸಿದ್ದಾರೆ. ಕಥೆಯ ವಸ್ತುವಿನ ದೋರಣೆಗೆ ಅನುಗುಣವಾದ ಬಿರುಸಿನ ಭಾಷೆಯನ್ನು ಬಳಸಿ ಕಥೆಗಳನ್ನು ರಚಿಸಿದ್ದಾರೆ.

ಪ್ರಗತಿಶೀಲರ ಗುಂಪಿನಲ್ಲಿ ಪ್ರಮುಖರಾದ ಮತ್ತೊಬ್ಬ ಕಥೆಗಾರ ನಿರಂಜನ [ಕುಳಕುಂದ ಶಿವರಾಯ (೧೯೨೪–೧೯೯೧)]. ಇವರ ಕಥೆಗಳಲ್ಲಿ ಮಿಕ್ಕ ಪ್ರಗತಿಶೀಲ ಬರಹಗಾರರಿಗಿಂತ ಹೆಚ್ಚಿನ ವೈಚಾರಿಕತೆಯನ್ನು ಕಾಣುತ್ತೇವೆ. ಗದ್ಯರೂಪ, ಕಾವ್ಯರೂಪಗಳಲ್ಲಿ ಕಥೆಗಳನ್ನು ರಚಿಸಿದ್ದಾರೆ. ಸಮಸ್ಯಾತ್ಮಕ ಪರಿಸ್ಥಿತಿಯ ಸಮಗ್ರಪರಿಕಲ್ಪನೆ ಮೂಡುವಂತೆ ಕಥೆಗಳನ್ನು ನಿರೂಪಿಸಿರುವ ಇವರ ಕಲಾತ್ಮಕತೆ ಪ್ರಗತಿಶೀಲರಲ್ಲೇ ಅಪೂರ್ವವಾದುದು. ನಿರಂಜನ ಅವರ 'ಅಯ್ಯನೈ' [೧೯೪೫], 'ರಕ್ತ ಸರೋವರ' [೧೯೪೭], 'ಅನ್ನಪೂರ್ಣ' [೧೯೫೭], 'ಒಂಟಿನಕ್ಷತ್ರ ಸಿಕ್ಕಿತು' [೧೯೬೦], 'ಯಾವಜನ್ಮದ ಶಾಪ' [೧೯೬೪], 'ನಾಸ್ತಿಕಕೊಟ್ಟ ದೇವರು' [೧೯೬೫], 'ಕೆಲವು ಸಣ್ಣಕತೆಗಳು' [೧೯೮೬] ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರುಗಳಲ್ಲದೆ ಕೋ.ಚನ್ನಬಸಪ್ಪ ಮುಂತಾದವರು ಈ ಹಂತದಲ್ಲಿ ಬರುವ ಕಥೆಗಾರರಾಗಿದ್ದಾರೆ.

ನವ್ಯ ಸಾಹಿತ್ಯ ಮಾರ್ಗದವರು ನವೋದಯದವರ ಆದರ್ಶ ಹಾಗೂ ಪ್ರಗತಿಶೀಲರ ಆವೇಶ ಇವುಗಳ ಬಗೆಗೆ ಅನುಮಾನದಿಂದ ನೋಡುವ ದೃಷ್ಟಿಯನ್ನು ಬೆಳೆಸಿಕೊಂಡರು. ಹಾಗಾಗಿ ನವ್ಯ ಕಥೆಗಾರರು ಚಿಂತನಾ ಶೀಲತೆಗೆ ಹೆಚ್ಚು ಒತ್ತು ನೀಡುತ್ತಾರೆ. ವ್ಯಕ್ತಿ ವಿಶಿಷ್ಟ

ಅನುಭವದ ಜೊತೆಗೆ ಸಮಷ್ಟಿ ಅನುಭವವನ್ನು ಗುರುತಿಸುವ ಪ್ರಯತ್ನಮಾಡುತ್ತಾರೆ. ಇದರಿಂದಾಗಿ ಬರವಣಿಗೆಯಲ್ಲಿ ನವೋದಯ ಮತ್ತು ಪ್ರಗತಿಶೀಲರಿಗಿಂತ ಭಿನ್ನವಾಗಿ ಗೋಚರಿಸುತ್ತಾರೆ. ತಮಗಾದ ಅನುಭವಕ್ಕೆ ಧ್ವನಿ, ಸಂಕೇತ, ಪ್ರತಿಮೆಗಳ ಮೂಲಕ ಮಾತಿನ ಶರೀರ ಕೊಡಲು ಪ್ರಯತ್ನಿಸಿದ್ದಾರೆ. ವ್ಯಕ್ತಿ ಮುಖ್ಯವಾದ ವಿಶಿಷ್ಟಸ್ಥಿತಿಯು ಮಹತ್ವ ಪಡೆಯುವಂತಾದುದರ ಫಲವಾಗಿ ನವ್ಯ ಮಾರ್ಗ ಜನಿಸಿತು.

ನವ್ಯಕಥೆಗಳ ಉಗಮವನ್ನು ವಿಮರ್ಶಕರು ಗುರುತಿಸುವಾಗ ಮೊದಲಿಗೆ ಬಾಗಲೋಡಿ ದೇವರಾಯರನ್ನು [೧೯೨೭–೧೯೮೫] ಗುರುತಿಸುತ್ತಾರೆ. ಇವರು "ಹುಚ್ಚು ಮುನಸೀಫ಼ ಮತ್ತು ಇತರ ಕಥೆಗಳು", [೧೯೪೯], 'ಆರಾಧನಾ' [೧೯೫೮] ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ನವ್ಯದಧೋರಣೆ ಖಚಿತವಾಗಿ ಮೊದಲಬಾರಿಗೆ ಮೂಡಿಬಂದಿರುವುದು 'ರಾಮಚಂದ್ರ ಶರ್ಮ'ರ [೧೯೩೫] ಕಥೆಗಳಲ್ಲಿ. ಇನ್ನುಳಿದ ಪ್ರಗತಿಶೀಲರ ಕಥೆಗಳಲ್ಲಿ ಕಂಡುಬರುವ ಸಾಮಾಜಿಕ ಅಸಮಾನತೆಯ ಬಗೆಗಿನ ಆಕ್ರೋಶಕ್ಕೆ ಬದಲಾಗಿ ಶರ್ಮರ ಕಥೆಗಳಲ್ಲಿ ವ್ಯಕ್ತಿಯ ಮನಸ್ಸಿನ ತುಮುಲಗಳು ಕಾಣಿಸಿಕೊಳ್ಳುತ್ತವೆ. 'ಮಂದಾರ ಕುಸುಮ [೧೯೫೩] 'ಏಳನೆಯ ಜೀವ' [೧೯೫೬] 'ಬೆಳಗಾಯಿತು' [೧೯೬೯] 'ಕತೆಗಾರನಕಥೆ' [೧೯೮೫] 'ನಲವತ್ತು ಕಥೆಗಳು' [೨೦೦೦] ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ನವ್ಯಕಥೆಗಾರರಲ್ಲಿ ಪ್ರಮುಖರಾದವರು ಯು.ಆರ್.ಅನಂತಮೂರ್ತಿ [೧೯೩೨]. 'ಎಂದೆಂದೂ ಮುಗಿಯದ ಕಥೆ' [೧೯೫೫] ಮೊದಲ ಕಥಾಸಂಕಲನ. ಅನಂತರದಲ್ಲಿ ಪ್ರಶ್ನೆ? [೧೯೬೨] 'ಮೌನಿ' [೧೯೬೭] 'ಆಕಾಶ ಮತ್ತು ಬೆಕ್ಕು' [೧೯೮೩] 'ಸೂರ್ಯನ ಕುದುರೆ' [೧೯೯೫] ಎಂಬ ಸಂಕಲನಗಳನ್ನು ಹೊರತಂದಿದ್ದಾರೆ. 'ಪ್ರಶ್ನೆ' ಕಥಾ ಸಂಕಲನದಲ್ಲಿ ಬ್ರಾಹ್ಮಣ ಸಮಾಜದ ಕೌಟುಂಬಿಕ ಪರಿಸರದ ಜೀವನ ಚಿತ್ರಿಸಿದ್ದಾರೆ. ಅನಂತಮೂರ್ತಿಯವರ ಕಥೆಗಳ ಮುಖ್ಯ ಅಂಶವೆಂದರೆ ಪರಂಪರಾಗತಮೌಲ್ಯಗಳು ಮುಖಾಮುಖಿಯಾಗಿರುತ್ತವೆ. 'ಪ್ರಶ್ನೆ' ಕನ್ನಡದ ಪ್ರಮುಖ ಕಥಾ ಸಂಗ್ರಹಗಳಲ್ಲಿ ಒಂದಾಗಿದೆ.

ಯಶವಂತ ಚಿತ್ತಾಲರ ಕಥೆಗಳು ಹೆಚ್ಚು ಕಲಾತ್ಮಕವಾಗಿವೆ. ಚಿತ್ತಾಲರ 'ಸಂದರ್ಶನ' [೧೯೫೭], 'ಆಬೋಲೀನ' [೧೯೬೦] ಮತ್ತು 'ಆಟ' ಸಂಗ್ರಹಗಳ ಹಲವು ಕಥೆಗಳಲ್ಲಿ ಸಾವು ತೀವ್ರವಾಗಿ ಕಾಡುವ ವಸ್ತುವಾಗಿದೆ. 'ಕತೆಯಾದಳು ಹುಡುಗಿ' [೧೯೮೦] ಮತ್ತು 'ಬೇನ್ಯಾ' [೧೯೮೩] 'ಸಿದ್ಧಾರ್ಥ' [೧೯೮೮] 'ಕುಮಟೆಗೆ ಬಂದ ಕಿಂದರಿಜೋಗಿ' [೧೯೯೭] ಸಂಕಲನಗಳ ಕಥೆಗಳಲ್ಲಿ ಹೆಚ್ಚಿನ ಮಟ್ಟದ ಚಿಂತನಶೀಲತೆಯಿಂದ ಅನುಭವಗಳ ಪರಿಶೋಧನೆಯನ್ನು ಕಾಣಬಹುದು.

ನಗರ ಜೀವನವನ್ನು ಕ್ರಿಯಾ ಕೇಂದ್ರವನ್ನಾಗಿಸಿಕೊಂಡು ಕಥೆಗಳನ್ನು ರಚಿಸಿರುವ ಶಾಂತಿನಾಥ ದೇಸಾಯಿ ನವ್ಯಕಥೆಗಾರರಲ್ಲಿ ಒಬ್ಬರೆನಿಸಿದ್ದಾರೆ. ದೇಸಾಯಿ ತಮ್ಮ ಕಥೆಗಳಲ್ಲಿ ಮನುಷ್ಯನ ಮನಸ್ಸಿನ ಪದರಪದರಗಳನ್ನು ತೆರೆದಿಡುತ್ತಾ ಹೋಗುತ್ತಾರೆ. ೧೯೫೯ರಲ್ಲಿ 'ಮಂಜುಗಡ್ಡೆ' ಎಂಬ ಸಂಗ್ರಹವನ್ನು ಪ್ರಕಟಿಸಿದರು. ಅನಂತರ 'ಕ್ಷಿತಿಜ' [೧೯೬೬], 'ದಂಡೆ' [೧೯೭೧], 'ರಾಕ್ಷಸ' [೧೯೭೭], 'ಪರಿವರ್ತನೆ' [೧೯೮೪], 'ಕೂರ್ಮಾವತಾರ' [೧೯೮೮] ಎಂಬ ಕಥಾಸಂಕಲನಗಳನ್ನು ರಚಿಸಿದ್ದಾರೆ. ಅವರ ಕಥೆಗಳಲ್ಲಿ ಮನಸ್ಸಿನ ವಿಶ್ಲೇಷಣೆ, ಸೂಕ್ಷ್ಮಪರಿಜ್ಞಾನ ಮತ್ತು ಖಚಿತತೆ ಕಂಡುಬರುತ್ತದೆ.

ನವ್ಯಕಥೆಗಾರರಲ್ಲಿ ಪಿ.ಲಂಕೇಶ ಅವರು ಪ್ರಮುಖರೆನಿಸಿದ್ದಾರೆ. ಅವರ ಕಥೆಗಳಲ್ಲಿ ಮನುಷ್ಯನ ಸಣ್ಣತನ, ದುಷ್ಟ ನಡೆವಳಿಕೆಗಳನ್ನು ಎತ್ತಿಹಿಡಿಯುತ್ತಾರೆ. ಹಳ್ಳಿಯಿಂದ ನಗರಕ್ಕೆ ಬಂದ ವ್ಯಕ್ತಿ ನಗರದಲ್ಲಿ ತನ್ನತನ ಕಂಡುಕೊಳ್ಳಲು ನಡೆಸುವ ಪರಿಪಾಟಲು ಇವರ ಹಲವು ಕಥೆಗಳಲ್ಲಿ ಕಂಡುಬರುವ ವಸ್ತುವಾಗಿದೆ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' [೧೯೬೩], 'ನಾನಲ್ಲ' [೧೯೭೦], 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' [೧೯೭೩], 'ಕಲ್ಲುಕರಗುವ ಸಮಯ' [೧೯೯೦], 'ಉಲ್ಲಂಘನೆ' [೧೯೯೬], ಎಂಬ ಕಥಾ ಸಂಕಲನಗಳು ಪ್ರಕಟವಾಗಿವೆ. ಲಂಕೇಶರು ಕಥೆಗಳಲ್ಲಿ ವ್ಯಕ್ತಿ ತನ್ನ ದೌರ್ಬಲ್ಯ ಮತ್ತು ಸಮಾಜದ ಒತ್ತಡ ಇವುಗಳಿಂದಾಗಿ ಪಡುವ ಪಾಡನ್ನು ಚಿತ್ರಿಸಿದ್ದಾರೆ.

ನವ್ಯ ಸಾಹಿತ್ಯ ಸಂದರ್ಭದಲ್ಲೇ ಕಾಣಿಸಿಕೊಂಡು ಅದಕ್ಕಿಂತ [ನವ್ಯಕ್ಕಿಂತ] ಭಿನ್ನವಾಗಿ ಕಥೆರಚಿಸಿದ ಮತ್ತೊಬ್ಬ ಕಥೆಗಾರ ಪೂರ್ಣಚಂದ್ರ ತೇಜಸ್ವಿ. ತೇಜಸ್ವಿಯವರು ನವ್ಯದ ರೀತಿಯಲ್ಲೇ ತಮ್ಮ ಕಥೆಗಳಲ್ಲಿ ತಂತ್ರಗಳನ್ನು ರೂಢಿಸಿಕೊಂಡರೂ ಹೊಸಮಾರ್ಗದ ಅನ್ವೇಷಕರಂತೆ ಕಾಣುತ್ತಾರೆ. ಸಾಮಾಜಿಕ ದೃಷ್ಟಿಕೋನದಿಂದ ಬದುಕನ್ನು ಅರ್ಥೈಸುತ್ತಾರೆ. 'ಹುಲಿಯೂರಿನ ಸರಹದ್ದು' [೧೯೬೨], 'ಅಬಚೂರಿನ ಪೋಸ್ಟಾಪೀಸು' [೧೯೭೧], 'ಕಿರಗೂರಿನ ಗಯ್ಯಾಳಿಗಳು' [೧೯೯೧], ಎಂಬ ಸಂಕಲನಗಳನ್ನು ರಚಿಸಿದ್ದಾರೆ.

ಹೀಗೆ ಇನ್ನೂ ಮೊದಲಾದ ಕತೆಗಾರರು ನವ್ಯ ಸಾಹಿತ್ಯಸಂದರ್ಭದಲ್ಲಿ ಕತೆ ರಚಿಸಿ ಕನ್ನಡ ಕಥಾಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಇದೇ ವೇಳೆಗೆ ಮಹಾರಾಷ್ಟ್ರದಲ್ಲಿ ಹುಟ್ಟಿಕೊಂಡ 'ದಲಿತ್ ಪ್ಯಾಂಥರ್ಸ್' ಚಳುವಳಿ ಕರ್ನಾಟಕದ ಮೇಲೂ ಪ್ರಭಾವ ಬೀರಿತು. ಇದು 'ದಲಿತ ಸಾಹಿತ್ಯ' ಎಂಬ ಹೊಸ ಮಾರ್ಗಕ್ಕೆ ನಾಂದಿಯಾಯಿತು. ಪ್ರಾರಂಭದಲ್ಲಿ ಬ್ರಾಹ್ಮಣರಿಂದಲೇ ತಮ್ಮ ಮೇಲೆ ಶೋಷಣೆಯಾಗುತ್ತಿದೆ ಎಂದು ತಮ್ಮ ವಾದವನ್ನು ದಲಿತ ಸಾಹಿತಿಗಳು ತಳೆಯುತ್ತಾರೆ. ಅನಂತರ ಸಮಾಜದಲ್ಲಿನ ಇತರ ಸವರ್ಣೀಯ ಗುಂಪುಗಳನ್ನು 'ಶೋಷಕ' ವರ್ಗ ಎಂದು ಪರಿಗಣಿಸುತ್ತಾರೆ. ಈ ಕಾಲದಲ್ಲಿ ದೇವನೂರು ಮಹಾದೇವ ಅವರು ಕಥೆಗಳನ್ನು ರಚಿಸಿದರು. ಅವರ ಕಥೆಗಳು ಯಾವುದೇ ಸಾಹಿತ್ಯಮಾರ್ಗದ ತಂತ್ರ ಹಾಗೂ ಲಕ್ಷಣಗಳನ್ನು ಹೊಂದದೇ ತನ್ನದೆ ಭಿನ್ನ ನೆಲೆಯಲ್ಲಿ ನಿಲ್ಲುತ್ತವೆ. ಆದರೂ ಮಹಾದೇವ ಅವರನ್ನು ದಲಿತಕವಿ ಎಂದು ಬಿಂಬಿಸುತ್ತೇವೆ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶೇಷವಾದ ಭಾಷಾ ಬಳಕೆಯನ್ನು ದೇವನೂರು ಮಾಡಿದ್ದಾರೆ. ಶೋಷಿತವರ್ಗದವರು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಲು ಆಗದೆ, ಸಹಿಸಿಕೊಂಡು ಜೀವಿಸುವ ಜೀವನಚಿತ್ರಣವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಗ್ರಾಮ್ಯಭಾಷಾಶೈಲಿಯಿಂದಲೇ ಓದುಗರ ಗಮನಸೆಳೆಯುತ್ತಾರೆ. 'ದ್ಯಾವನೂರು'

[೧೯೭೩] ಕಥಾಸಂಕಲನ ಪ್ರಕಟವಾಗಿದೆ. ಬರವಣಿಗೆ ಅಲ್ಪವಾದರೂ ಅವುಗಳ ತೀವ್ರತೆ ಅತಿಹೆಚ್ಚು.

ದಲಿತ ಭಂಡಾಯ ಕಥೆಗಳ ಸನ್ನಿವೇಶದಲ್ಲಿ ಕೇಳಸಿಗುವ ಮತ್ತೊಂದು ಪ್ರಮುಖ ಹೆಸರು ಬರಗೂರು ರಾಮಚಂದ್ರಪ್ಪ. ಬಂಡಾಯ ಸಾಹಿತ್ಯ ಸಂಘಟನೆಯನ್ನು ಹುಟ್ಟುಹಾಕಿ ಬೆಳೆಸಿದವರಲ್ಲಿ ಪ್ರಮುಖರು. ಇವರ ಕಥೆಗಳಲ್ಲಿ ಶೋಷಣೆಯ ವಿರುದ್ಧ ಪ್ರತಿಭಟನೆಯ ದನಿಯಿದೆ. 'ಸುಂಟರಗಾಳಿ' 'ಕಪ್ಪುನೆಲದ ಕೆಂಪು ಕಾಲು' 'ಬಯಲಾಟದ ಭೀಮಣ್ಣ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ಸದಾ ಬಂಡಾಯ ನಿಲುವು ಹಾಗೂ ಎಡ ಪಂಥೀಯ ಆಲೋಚನೆಗಳನ್ನು ಮೈಗೂಡಿಸಿಕೊಂಡಿರುವ ಕಾಳೇಗೌಡ ನಾಗವಾರ ಅವರು ಈ ಸಾಹಿತ್ಯ ಸಂದರ್ಭದ ಪ್ರಮುಖರೆನಿಸಿದ್ದಾರೆ. ಸಹಬಾಳ್ವೆ, ಸ್ವಾತಂತ್ರ್ಯ, ಸಮಾನತೆ, ವೈಚಾರಿಕತೆಯನ್ನು ಪ್ರೀತಿಸುವ; ಜಾತ್ಯತೀತ ಮೌಲ್ಯವನ್ನು ಗೌರವಿಸುವ ಹಾಗೂ ಮೌಢ್ಯ ಅಜ್ಞಾನ, ಅಸಮಾನತೆಗಳನ್ನು ತೀವ್ರವಾಗಿ ಖಂಡಿಸುವ ಕಾಳೆಗೌಡ ನಾಗವಾರರು ಈ ಸಮಾಜದ ಸ್ಥಾಪಿತನಿಯಮ, ಮೌಲ್ಯಗಳ ವಿರುದ್ಧ ಸದಾ ಬಂಡಾಯ ಹೂಡುವ ಹುನ್ನಾರ ನಡೆಸುತ್ತಲೇ ಇರುತ್ತಾರೆ. 'ಬೆಟ್ಟಸಾಲು ಮಳೆ' ಹಾಗೂ 'ಅಲೆಗಳು' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ದೇವನೂರರ ನಂತರದ ಪ್ರಮುಖ ದಲಿತ ಕಥೆಗಾರರಲ್ಲಿ ಮೊಗಳ್ಳಿ ಗಣೇಶ [೧೯೬೪] ಪ್ರಮುಖರು. 'ಬುಗುರಿ' [೧೯೯೨], 'ಅತ್ತೆ' [೧೯೯೭], ಹಾಗೂ ' ಭೂಮಿ' [೨೦೦೧] ಎಂಬ ಮೂರು ಕಥಾ ಸಂಕಲಗಳನ್ನು ಪ್ರಕಟಿಸಿದ್ದಾರೆ. ಬಲವಾದ ಸಮಕಾಲಿನ ಆಸ್ಥೆಗಳನ್ನು ಹೊಂದಿದ್ದವರು. ದಲಿತ ಸಂವೇದನೆಯ ನೆಲೆಗಳನ್ನು ಹೊಸದಾಗಿ ಸಂಶೋಧಿಸುವ ಕಾರ್ಯ ಮಾಡುತ್ತಾರೆ. "ಪ್ರಾದೇಶಿಕ ಸ್ವಭಾವದ ಅಭಿವ್ಯಕ್ತಿ, ಅಲಕ್ಷಿತ ಅನುಭವಗಳ ಶೋಧನೆ, ಮಾನವೀಕರಣ, ಜಾನಪದೀಯತೆಯ ಲಕ್ಷಣವಾದ ಸಮಷ್ಟಿಪ್ರಜ್ಞೆ, ಕಥನರೂಪಗಳನ್ನಾದರಿಸಿದ ಅಭಿವ್ಯಕ್ತಿ ಇವು ಅವರು ಸೂಚಿಸುವ ಪ್ರಧಾನ ನೆಲೆಗಳು" ಎಂದು ಜಿ.ಎಸ್.ಆಮೂರರವರು

ವಿವರಿಸುತ್ತಾರೆ. ಮೊಗಳ್ಳಿಯವರು ತಮ್ಮ ಪ್ರಯೋಗಶೀಲತೆಯಿಂದ ಓದುಗರ ಗಮನ ಸೆಳೆದಿದ್ದಾರೆ.

ಮೊಗಳ್ಳಿಯವರ ನಂತರ ಶೋಷಣೆಯ ವಿರುದ್ಧದ ಕತೆಗಳನ್ನು ರಚಿಸಿದವರು ಕುಂ.ವೀರಭದ್ರಪ್ಪನವರು. ಕುಂ.ವೀ ಬಳಸಿದ ಭಾಷೆಗೆ ಶೃಂಗಾರದ ಸೋಗಿಲ್ಲ. ಆದರೆ ನೇರ ಎದೆಗೆ ನಾಟುವ ಗುಣಗಳನ್ನು ಹೊಂದಿವೆ. ಹಿಂದಿನ ಅಧ್ಯಾಯದಲ್ಲಿ ಸವಿವರವಾಗಿ ಕುಂವೀ ಬಗೆಗೆ ಪರಿಚಯಿಸಲಾಗಿರುವುದರಿಂದ ಇಲ್ಲಿ ಮತ್ತೊಮ್ಮೆ ಅದರ ಪ್ರಸ್ತಾಪ ಅಪ್ರಸ್ತುತವೆನಿಸುತ್ತದೆ.

ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಣ್ಣ ಕತೆಗಳು ಬೆಳೆದಿರುವ ಮಾರ್ಗವನ್ನು ಗುರುತಿಸಬಹುದಾಗಿದೆ. ಇಂದು ಸಣ್ಣ ಕಥಾ ಸಾಹಿತ್ಯ ವಜ್ರದ ಪುತ್ಥಳಿಯಂತೆ ಬೆಳೆದು ಗಟ್ಟಿಯಾಗಿ ನೆಲೆನಿಂತಿದೆ ಎಂದು ಹೇಳಬಹುದು.

ಅಡಿಟಿಪ್ಪಣಿ:

೧. ಕನ್ನಡ ಕಥನ ಸಾಹಿತ್ಯ – ಸಣ್ಣಕಥೆ; ಜಿ.ಎಸ್.ಆಮೂರ; ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು [೨೦೦೩]

೨. ಹೊಸಗನ್ನಡ ಅರುಣೋದಯ; ಶ್ರೀನಿವಾಸ ಹಾವನೂರ (ಪ್ರ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. [೧೯೮೦]

೩. 'an essay on canarese literature' ಮುನ್ನುಡಿ "ನಾಗವರ್ಮನ ಕನ್ನಡ ಛಂದಸ್ಸು"; ಕಿಟ್ಟೆಲ್; ಬಾಸೆಲ್ ಮಿಷನ್, ಮಂಗಳೂರು [೧೮೭೫]

೪. ಸಾಹಿತಿಗಳ ಸಂಘದಲ್ಲಿ; ದೇಜಗೌ; ಉಷಾ ಸಾಹಿತ್ಯಮಾಲೆ ಮೈಸೂರು [೧೯೭೨]

೫. ಕನ್ನಡ ಸಣ್ಣ ಕಥೆಗಳು; ಪ್ರಸ್ತಾವನೆ ಜಿ.ಹೆಚ್.ನಾಯಕ್; ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ, [೧೯೭೮]

೬. ಕನ್ನಡ ಸಣ್ಣಕಥೆ ಹೆಜ್ಜೆ-ಹಾದಿ; ಸತ್ಯ ನಾರಾಯಣ ಮಲ್ಲಿಪಟ್ಟಣ; ಸಂಕಲನ ಪ್ರಕಾಶನ, ಮೈಸೂರು, [೧೯೮೫]

೭. ಹೊಸಗನ್ನಡ ಸಾಹಿತ್ಯ ಚರಿತ್ರೆ; ಎಲ್.ಎಸ್.ಶೇಷಗಿರಿರಾವ್, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, [೨೦೦೨] ಪುಟ ೧೭೬

೮. ಅದೇ;

೯. ಹೊಸಗನ್ನಡ ಸಾಹಿತ್ಯ ಚರಿತ್ರೆ; ಎಲ್.ಎಸ್.ಶೇಷಗಿರಿರಾವ್, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, [೨೦೦೨] ಪುಟ ೧೭೬

ಅಧ್ಯಾಯ ೪

ಆಂಧ್ರ ಕಥೆಗಳು : ಒಂದು ಪಕ್ಷಿನೋಟ

ಆಯ್ದ ಕಥೆಗಳು : ಒಂದು ಪಕ್ಷಿನೋಟ

ಕುಂವೀ ಅವರ ಕಥೆಗಳಲ್ಲಿ ಶುಲ್ಕ ಕಥೆಯು ತನ್ನದೇ ಆದ ಪ್ರಾಮುಖ್ಯತೆಯನ್ನು ಪೊಂದಿದೆ. ಕಥಾ ನಿರೂಪಕನ ಶಿಷ್ಯನಾದ ಅಶೋಕ ಸದಾ ಸಂಕೋಚದಿಂದ ಮುದುಡಿಕೊಂಡಿರುತ್ತಿದ್ದ, ತರಗತಿಯಲ್ಲಿ ಸದಾ ಮೊದಲ ಸಾಲಿನಲ್ಲಿ ಕುಳಿತು ಮೈತುಂಬ ಕಿವಿಮಾಡಿ ಶ್ರದ್ಧೆಯಿಂದ ಪಾಠ ಆಲಿಸುತ್ತಿದ್ದ ಹಾಗೂ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಚೂಟಿಯಾಗಿ ಉತ್ತರಿಸುತ್ತಿದ್ದ, ಜಾಣ-ಬುದ್ದಿವಂತ ಹುಡುಗನಾದರೂ ವ್ಯವಸ್ಥೆಯ ಅಸಮಾನತೆಗಳಿಗೆ ರೋಸಿಹೋಗಿ ನಕ್ಸಲೈಟ್‌ನಾಗಿರುತ್ತಾರೆ. ವರ್ಗವ್ಯವಸ್ಥೆ, ವಿರುದ್ಧ ಸಮರ ಸಾರಿದ ಲೆನಿನ್, ಮಾವೋ, ಮಾರ್ಕ್ಸ್ ವಿಚಾರಧಾರೆಗಳ ಜೊತೆ ಸಮಕಾಲಿನ ಸಮಾಜದ ಭೀಕರತೆಗಳೂ ನಿರಾಸೆಗಳೂ ತಾರತಮ್ಯಗಳೂ ಸೇರಿ ಅವನನ್ನು ಅಸ್ತ್ರ ಹಿಡಿಯಲು ಪ್ರೇರೇಪಿಸಿವೆ. ಇಲ್ಲಿ ನಿರ್ಗತಿಕರ ಪರ ಹೋರಾಡುವ ನಕ್ಸಲೀಯ ಚಳುವಳಿಯ ಬಗೆಗೆ ಮಾಸ್ತರನಾದ ನಿರೂಪಕನಿಗೂ ಆಸಕ್ತಿಯಿದೆ. ತನ್ನ ಶಿಷ್ಯನೊಬ್ಬ ನಕ್ಸಲೈಟ್ ಆಗಿರುವುದು ಒಂದೆಡೆ ಮೆಚ್ಚುಗೆಯಾಗುತ್ತದೆ. ಆದರೆ ಮೆಚ್ಚುಗೆಯನ್ನಷ್ಟೆ ನಿರೀಕ್ಷಿಸದ ಅಶೋಕ ನಿರೂಪಕನನ್ನು ಕುರಿತು "ನಿಮ್ಗೆ ಸರಕಾರಿ ನೌಕರಿ ಇದೆ. ಕಡಿಮೆ ಶ್ರಮದಿಂದ ಹೆಚ್ಚಿಗೆ ಸಂಪಾದಿಸುತ್ತಿರೋ ಪಗಲು ಲೂಟಿಗಾರರ ಪೈಕಿ ನೀವೂ ಒಬ್ರೂ......"[1] ಎಂದು ಹೇಳುವುದರ ಮೂಲಕ ಅಸಮಾನತೆಯ ಸಂಕೀರ್ಣತೆಯನ್ನು ಉದ್ಗರಿಸುತ್ತಾನೆ. ತನಗೆ ಐದು ಸಾವಿರ ಬೇಕೆಂದು ಒತ್ತಾಯಮಾಡುತ್ತಾನೆ. ಈ ಒತ್ತಾಯಕ್ಕೆ ಮಣಿದ ನಿರೂಪಕ ಏನೂ ಹೇಳಲಾಗದೆ, ಪತಿಭಟಿಸಿದರೆ ಪ್ರಯೋಜನವಿಲ್ಲೆಂದು ತಿಳಿದು "ಅರ್ಥಆಯ್ತುಬಿಡು – ಎಲ್ಲ-ಅರ್ಥಆಯ್ತು-" ಎಂದು[2] ಹೇಳಿ, ಎರಡು ಸಾವಿರದ ಆರುನೂರು ನಲವತ್ತಾರು ರೂಪಾಯಿ ಐವತ್ತೈದು ಪೈಸೆ ನಗದು ಹಣ ಹಾಗೂ ಹೆಂಡತಿಯ ಕೈಯ ಬಂಗಾರದ ಬಳೆಗಳನ್ನು ನೀಡುತ್ತಾರೆ. ಬದಲಾವಣೆ ಎಂಬುದು ಯಾವ ಹಂತದಲ್ಲಿ, ಯಾವ ಬಗೆಯಲ್ಲಿ, ಹೇಗಾಗಬೇಕೆಂಬುದನ್ನು ಈ ಕಥೆಯು ಅರ್ಥಪೂರ್ಣವಾಗಿ ತಿಳಿಸುತ್ತದೆ. ಅಸಮಾನತೆಯನ್ನು ಕಿತ್ತೊಗೆದು ಸಮಾನತೆಯನ್ನು ತರಲು ಹೋರಾಡುವ ತನ್ನ ಶಿಷ್ಯನ ಬಗೆಗೆ ನಿರೂಪಕನಿಗೆ ಕಾಳಜಿ ಹಾಗೂ ಮೆಚ್ಚುಗೆ ಇದೆಯಾದರೂ ಒಂಸೆಯಿಂದಲೇ ಸಮಾಜವನ್ನು ಬದಲಾಯಿಸಬೇಕೆಂಬ ತಾತ್ವಿಕ ಹಿನ್ನೆಲೆಯಲ್ಲಿ ನಕ್ಸಲ್

ಚಟುವಟಿಕೆಯಿಂದ, ಚಿಂತನೆಯಿಂದ ಆಗುವ ಅನಾಹುತವು ಈ ಕಥೆಯಲ್ಲಿ ಹೃದಯಂಗಮವಾಗಿ ಅಭಿವ್ಯಕ್ತಿಗೊಂಡಿದೆ. ಈ ಕಥೆಯು ದೇಶದ ನೈಜ್ಯಸ್ಥಿತಿಯನ್ನು ಎಳೆ–ಎಳೆಯಾಗಿ ಬಿತ್ತರಿಸುತ್ತದೆ. ಅಶೋಕನಂತಹ ವಿದ್ಯಾವಂತ ಯುವಕರು ಶೋಷಣೆ ವಿರುದ್ಧ, ಸೈದ್ಧಾಂತಿಕ ನಿಲವುಗಳ ಮೂಲಕ ಕ್ರಾಂತಿಮಾಡಹೊರಟಿರುವುದು ಇಡೀ ವ್ಯವಸ್ಥೆಯನ್ನು ಜಾಗೃತಗೊಳಿಸಹೊರಟಿರುವ ಸತ್ಯವಾಗಿದೆ. ತನ್ಮೂಲಕ ಸಾಮಾಜಿಕ ಸಮಾನತೆಯ ಕ್ರಾಂತಿಯನ್ನು ಈ ಕಥೆ ಮೊಳಗಿಸುತ್ತದೆ.

ಜಮೀನ್ದಾರಿ ಪದ್ದತಿ ಕಾಯ್ದುಕೊಂಡು ಬಂದಿರುವ ವರ್ಗ ಅಸಮಾನತೆಯ ಪರಾಕಾಷ್ಟತೆಯನ್ನು 'ಭಗವತಿ ಕಾಡು' ಕತೆ ಮನೋಜ್ಞವಾಗಿ ತಿಳಿಸುತ್ತದೆ, ತನಗೆ ಇಷ್ಟವಾದ, ತನಗೆ ಲಾಭವನ್ನು ತರುವುದನ್ನಷ್ಟೆ ನಿರೀಕ್ಷಿಸುವ, ಯಾವುದೇ/ಎಲ್ಲಾ ವಸ್ತು ತನ್ನದೆಂದೇ ಬಾವಿಸುವ ಜಮೀನ್ದಾರಿ ವ್ಯವಸ್ಥೆಯ ಕಾರ್ಯವನ್ನು ಈ ಕಥೆ ತೆರೆದಿಡುತ್ತದೆ. ಮೇಲ್ವರ್ಗದ ಜನ ಕೆಳವರ್ಗದವರಿಗೆ ಆಮಿಷಬಿಡ್ಡಿ ಅವರ ವಸ್ತುಗಳ ತಮ್ಮದಾಗಿಸಿಕೊಳ್ಳುವ ರೀತಿಯನ್ನು ಇಲ್ಲಿ ಕಾಣಬಹುದು.

ವರ್ಗ ಸಂಘರ್ಷವನ್ನು ವ್ಯಕ್ತಪಡಿಸುವ ಮತ್ತೊಂದು ಕಥೆ 'ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ' ಹೃದಯ ಸ್ಪರ್ಷಿಯಾಗಿ ಮೂಡಿಬಂದಿದೆ. ಸವರ್ಣೀಯರೆಸಿದ ವೀರಶೈವ ಧರ್ಮದಲ್ಲಿ ಪುರೋಹಿತಶಾಹಿಯಾಗಿರುವ ಅಯ್ಯನವರು ಅಲ್ಲಿನ ಒಳಪಂಗಡಗಳಲ್ಲಿರುವ ಬಡ, ನಿಸ್ಸಾಹಕರನ್ನು ಸಂಪ್ರದಾಯದ ಹೆಸರಿನಲ್ಲಿ ಶೋಷಣೆಮಾಡುವುದನ್ನು ಈ ಕಥೆಯಲ್ಲಿ ಕುಂವೀ ಸವಿವರವಾಗಿ ನಿರೂಪಿಸಿದ್ದಾರೆ.

ಮೊದಲಿಗೆ ಶ್ರೀಮಂತಿಕೆವುಳ್ಳ ಮನೆತನದವರಾಗಿ ಬಾಳಿ–ಬದುಕಿದ ತಿಪ್ಪವ್ವನ ಕುಟುಂಬ ಪತಿ ಕೊಟ್ರಗೌಡನ ದುಶ್ಚಟಗಳ ಕಾರಣದಿಂದಾಗಿ ಆಸ್ತಿ, ಐಶ್ವರ್ಯವನ್ನೆಲ್ಲಾ ಕಳೆದುಕೊಂಡು ಮಕ್ಕಳು ನಿರ್ಗತಿಕರಾಗುತ್ತಾರೆ. ಪತಿಯಸಾವಿನ ನಂತರ ತನ್ನಿಬ್ಬರು ಮಕ್ಕಳನ್ನು ಹಾಗೂ ಅತ್ತೆಯನ್ನು ಸಾಕಬೇಕಾದ ಹೊಣೆಗಾರಿಕೆ ತಿಪ್ಪವ್ವನ ಮೇಲೆ ಹೇರಲ್ಪಡುತ್ತದೆ. ಭೀಕರ

ಬಡತನದ ನಡುವೆಯೂ ಆಕೆ ಯುಗಾದಿ ಪಬ್ಬವನ್ನೂ ಮಾಡಾಬೇಕಾದಾಗ ಹಣಕ್ಕಾಗಿ ಹುಲಿಗೆಪ್ಪನ ಮನೆಗೆ ಸಾಲಕ್ಕಾಗಿ ಹೋಗುತ್ತಾಳೆ. ಹುಲಿಗೆಪ್ಪ ಒಂದು ಕಾಲಕ್ಕೆ ತಿಪ್ಪವ್ವನ ಮನೆಯಲ್ಲಿ ಕೂಲಿಮಾಡುತಿದ್ದವನು. ಈಕೆಯ ದಯನೀಯ ಪರಿಸ್ಥಿತಿಯನ್ನು ನೋಡಿ ಕಣ್ಣಲ್ಲಿ ನೀರು ತುಂಬಿಕೊಂಡು ಮರುಕದಿಂದ ಕೇಳಿದಷ್ಟು ಹಣಕೊಡುತ್ತಾನೆ. ಈ ಚಿತ್ರಣ ಪರಿಸ್ಥಿತಿಯ ಒತ್ತಡದಲ್ಲಿ ಸಿಕ್ಕಿ ಹೇಗೆ ಬಡವ ಬಲ್ಲಿದನಾಗಿಯೂ ಬಲ್ಲಿದ ಬಡವನಾಗಿಯೂ ಬದಲಾಗುತ್ತಾನೆ ಎಂಬುದನ್ನು ಧ್ವನಿಸುತ್ತದೆ. ಹುಲಿಗೆಪ್ಪನಿಂದ ತಂದ ಸಾಲದ ಸ್ವಲ್ಪ ಹಣದಲ್ಲಿಯೇ ಮಗ ಶಂಭುವಿನ ಜೊತೆಹೋಗಿ ಕೊಟ್ಟೂರು ಸಂತೆಯಲ್ಲಿ ಹಬ್ಬಕ್ಕೆ ಬೇಕಾದ ಪದಾರ್ಥಗಳನ್ನು ತರುತ್ತಾಳೆ, ಹಬ್ಬಕ್ಕೆ ವಿಶೇಷವಾಗಿ ಹೋಳಿಗೆ ಮಾಡುತ್ತಾಳೆ, ಅಯ್ನೋರನ್ನು ಕರೆದು ಪಾದಪೂಜೆಮಾಡಿ ಅವರ ಊಟವಾದನಂತರ ಮನೆಯವರು ಊಟಮಾಡುವುದು ಆಕೆಯ ಕುಟುಂಬದ ಸಂಪ್ರದಾಯವಾಗಿತ್ತು. ಆದ್ದರಿಂದ ಅಯ್ನೋರನ್ನು ಕರೆತರಲು ಮಗ ಶಂಭುವನ್ನು ಕಳುಹಿಸುತ್ತಾಳೆ. ಆತನ ಕಿವಿಯಲ್ಲಿ ತಂಗಿ ರತ್ನ– "ಅಣ್ಣೋ ದೊಡ್ ಸ್ವಾಮ್ಯೋರ್ನ ಕರ್ಕಂಡು ಬರ್ಬ್ಯಾಡ– ಸಣ್ಣ ಸ್ವಾಮಿ ಕರ್ಕೊಂಬಾ– ಆತಾದ್ರೆ ಅರ್ಧ ಹೋಳಿಗೆ ತಿಂದು ಕೈತೊಳ್ಕೊತಾನೆ"[೩] ಎಂದು ಹೇಳುತ್ತಾಳೆ. ರತ್ನಳ ಈ ಮಾತು ಅವರ ಕುಟುಂಬದ ಬಡತನದ ಪರಾಕಾಷ್ಠೆಯನ್ನು ತಿಳಿಸುತ್ತದೆ. ಆದರೂ ಸಂಪ್ರದಾಯದ ಹೆಸರಿನಲ್ಲಿ ಇಂಥ ಕುಟುಂಬಗಳು ಅನುಭವಿಸುವ ಯಾತನೆಯನ್ನು ಕತೆಗಾರರು ಸುಂದರವಾಗಿ ನಿರೂಪಿಸಿದ್ದಾರೆ.

ವೀರಶೈವರಲ್ಲಿ ಮೌಢ್ಯವಾಗಿ ಬೆಳೆದಿರುವ, ಅಯ್ನೋರ ಪಾದತೊಳೆದು ಆ ಪಾದೋದಕವನ್ನು ಗೋಡೆಗಳಿಗೆ ಸಿಂಪಡಿಸುವ ಸಾಂಪ್ರದಾಯಿಕ ಆಚರಣೆಯನ್ನು ಕುಂವೀ ತೀವ್ರ ಅಪಹಾಸ್ಯಕ್ಕೆ ಗುರಿಮಾಡುತ್ತಾರೆ. ಕಥೆಯಲ್ಲಿ ಬರುವ ವಿವರಗಳು ಗುಡಿಸಲಿನ ಬಡವರ ಕಷ್ಟಗಳನ್ನು ಅರ್ಥಮಾಡಿಕೊಳ್ಳದೆ ಅದೇ ವರ್ಗದ ಪುರೋಹಿತ ಶಾಹಿವರ್ಗ ಹೇಗೆ ಶೋಷಣೆಮಾಡುತ್ತದೆ ಎಂಬುದನ್ನು ಧ್ವನಿಸುತ್ತದೆ. "ಚುಟ್ಟದ ಖರ್ಚಿಗೆ ಮೂರು ಪಾವ್ಲಿ ಕೊಡಬೇಕವ್ವಾ... ಇಲ್ಲಾಂದ್ರೆ ಭಿನ್ನತೀರ್ಸಿ ಏನು ಸಾರ್ಥಕ"[೪] ಎಂದು ಕೇಳುವ ಶಂಕ್ರಯ್ಯನ ಮಾತುಗಳಲ್ಲಿ ಶೋಷಣೆಯ ಕ್ರೂರ ಮುಖವನ್ನು ನೋಡಬಹುದು. ಅಯ್ನೋರನ್ನು ಕಳುಹಿಸಿಕೊಟ್ಟ ನಂತರ ತಿಪ್ಪವ್ವ ತನ್ನ ಅತ್ತೆಗೆ ಊಟಹಾಕಿ ಅನಂತರ ಮಕ್ಕಳಾದ ಶಂಭು

ಹಾಗೂ ರತ್ನಳನ್ನು ಕರೆದು ಊಟ ಬಡಿಸುತ್ತಾಳೆ. "ಉಳಿದ ಒಂದೇ ಒಂದು ಹೋಳಿಗೆಯನ್ನು ಮಕ್ಕಳಿಬ್ಬರು ತಾಯಿಗೂ ಉಳಿಸಿ ತಾವೂ ಉಂಡರು ಎಂಬಲ್ಲಿಗೆ ಉಗಾದಿಯ ದಿನದ ಸೂರ್ಯಾಸ್ತಮವಾಯಿತು"[೫] ಎಂಬ ಸಾಲುಗಳು ಧರ್ಮದ, ಸಾಂಪ್ರದಾಯಿಕ ಆಚರಣೆ ಹೆಸರಿನಲ್ಲಿ ಬಡತನದ ಧಾರುಣತೆಯನ್ನು ಹೆಚ್ಚಿಸುವ ರೀತಿಯನ್ನು ಚಿತ್ರಿಸುತ್ತದೆ. ಈ ಮೂಲಕ ಸಂಪ್ರದಾಯ ಬಡವರ ಬದುಕಿಗೆ ಮುಳ್ಳಾಗುತ್ತದೆಂಬುದನ್ನು ಅರ್ಥಪೂರ್ಣವಾಗಿ ಕಣ್ಣಿಗೆ ಕಟ್ಟುವ ಹಾಗೆ ನಿರೂಪಿಸಿದ್ದಾರೆ. ಕುಂವೀ ಅವರ ಇಂತಹ ಸನ್ನಿವೇಶ ಮಕ್ಕಳ ಮನಸ್ಸಿನಲ್ಲಿ ಪ್ರತಿಭಟನೆಯ ರೂಪವನ್ನು ತಾಳುತ್ತದೆ. ಆಟವಾಡುವಾಗ ಆಟದಲ್ಲಿ ಬರುವ ದೃಶ್ಯ, ಅಯ್ನೋರು ಕಾಲು ತೊಳೆದುಕೊಂಡು ಊಟಕ್ಕೆ ಕೂಡುವುದು, ಕುಂಟ ಕೊಟ್ರಯ್ಯನಂತೆ ಕುಂಟುತ್ತಲೇ ನಡೆದು ಬಂದು ಶಂಭು ಸದಾಶಿವ ಪರಮಾತ್ಮ ಎನ್ನುತ್ತ ಕೂತು ಊಟಕ್ಕೆ ಆರಂಭಿಸಿದಾಗ ಹೋಳಿಗೆಯ ಬದಲು ಕಸದ ಪೊರಕೆ ಹಿಡಿದುಕೊಂಡು ಚಂಡಿಯಂತೆ ನುಗ್ಗಿದ ರತ್ನ "ಲೋಮಕ್ಳಾ ...... ಈ ಮುತ್ಕಾಳ ಅಯ್ನೋರನ್ನ ಹಿಡಕೊಳ್ರೋ"[೬] ಎಂದು ಆಜ್ಞಾಪಿಸಿದಾಗ ಕೂಡಲೇ ಮಕ್ಕಳೆಲ್ಲ ಶಂಭುವನ್ನು ಗಟ್ಟಿಯಾಗಿ ಹಿಡಿದುಕೊಂಡಾಗ "ಅಯ್ನೋರ ಪುಗಸಟ್ಟೆ ತಿನ್ನೋಕೆ ನಾಚ್ಕೆ ಆಗಲ್ಲೇನು"[೭] ಎಂದು ಹೇಳುತ್ತ ಕಸದ ಪೊರಕೆಯಿಂದ ಶಂಭುವಿನ ಬೆನ್ನಿಗೆ ರತ್ನ ಹೊಡೆಯುತ್ತಾಳೆ. "ಹಿಂದೆ ಮುಂದೆ ನೋಡದೆ ಮಾಡಿದ ಹೋಳಿಗೆನೆಲ್ಲ ತಿಂಥೀ ಏನೋ ಬಾಡ್ಕಾವ್..... ನಮ್ಮಂಗೆ ದುಡ್ದು ತಿನ್ನೋಕೇನಾಗೈತೆ ಧಾಡಿ ನಿನಗೆ"[೮] ಎಂದು ಕೂಗಿ ಓಣಿತುಂಬ ಓಡಿಸಿಕೊಂಡು ಹೋಗುತ್ತಾಳೆ. ಈ ದೃಶ್ಯವು ಪ್ರತಿಭಟನೆಯ ತೀವ್ರತೆಯನ್ನು ಸಮರ್ಥವಾಗಿ ನೀಡುತ್ತದೆ. ಶೋಷಣೆಗೆ ಒಳಗಾದವರು ಹೀಗೆ ಪ್ರತಿರೋಧಿಸಬೇಕು ಎಂಬುದನ್ನು ರತ್ನಾಳ ಪಾತ್ರದ ಮೂಲಕ ಕುಂವೀ ಚಿತ್ರಿಸಿದ್ದಾರೆ.

ಇದೇ ಕತೆಯಲ್ಲಿ ಮತ್ತೊಂದು ಚಿತ್ರಣ ಅಸ್ಪೃಶ್ಯತೆಗೆ ಸಂಬಂಧಿಸಿದ್ದಾಗಿದೆ. ಆರ್ಥಿಕವಾಗಿ ಶಂಭುವಿಗಿಂತ ಸುಸ್ಥಿಯಲ್ಲಿರುವ ಶೂದ್ರ ಚವುಡನು ವೀರಶೈವ ಹುಡುಗರ ಜೊತೆ ರೈಲಿನ ಆಟ ಆಡಲು ಅವರಿಗೆ ಪೆಪ್ಪರ್‌ಮೆಂಟನ್ನು ತೆಗೆದುಕೊಡುತ್ತಾನೆ. ಅದನ್ನು ಗಮನಿಸಿದ ಶಂಭು ತನ್ನ ಜಾತಿಯ ಹುಡುಗರನ್ನು ಬೈದು ತನ್ನೆಡೆಗೆ ಕರೆದುಕೊಳ್ಳುತ್ತಾನೆ. ಬಾಲ್ಯದಲ್ಲಿಯೇ ಜಾತಿವ್ಯವಸ್ಥೆ ಮಕ್ಕಳ ಮೇಲೆ ಉಂಟುಮಾಡಿರುವ ದುಷ್ಟಪರಿಣಾಮದ

ಚಿತ್ರಣವಿದೆ. ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಅದು ಸಂಕೀರ್ಣವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಾಣಬಹುದು. ಶಂಭು ಮೇಲ್ಜಾತಿಯವನಾಗಿದ್ದ ಕಾರಣದಿಂದ ಆರ್ಥಿಕವಾಗಿ ಸದೃಢನಾಗಿರುವ ಚವುಡ ಆತನಿಂದ ಅಪಮಾನಕ್ಕೆ ಒಳಗಾಗಬೇಕಾಗುತ್ತದೆ. ಬಡತನಕ್ಕಿಂತಲೂ ಮಿಗಿಲಾದುದು ಜಾತಿಯ ಅವಸ್ಥೆಗಳು ಎಂಬುದನ್ನು ಇದು ಧ್ವನಿಸುತ್ತದೆ.

'ದೇವರ ಹೆಣ' ಕಥೆಯಲ್ಲಿ ಜಾತಿಯ ಕಾರಣಕ್ಕಾಗಿ ಅಸ್ಪೃಶ್ಯರಾಗಿದ್ದು ಆರ್ಥಿಕ ಬಡತನದಿಂದಾಗಿ ಬೇಸತ್ತ ಜನರು ತಮ್ಮ ಪಾರಂಪರಿಕ ಹಕ್ಕನ್ನು ಒತ್ತಾಯಿಸುತ್ತಾರೆ. ಪಸಿವನ್ನು ನೀಗಿಸಿಕೊಳ್ಳಲು ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಧಾರುಣ ಬದುಕಿನ ಚಿತ್ರಣವನ್ನು ಈ ಕಥೆ ಹೊಂದಿದೆ. ಕಥೆಯಲ್ಲಿ ಬರುವ 'ತೊಣ್ಣಿ' ಎಂಬಾತನ ಸಂಸಾರ ಬರಗಾಲದ ಕಾರಣದಿಂದ ಪಸಿವಿನಿಂದ ಕಂಗಾಲಾಗಿದೆ. ತನ್ನ ಕುಟುಂಬದ ಪಸಿವನ್ನು ನೀಗಿಸಲು 'ತೊಣ್ಣಿ' ತತ್ತರಿಸುವ ಸಮಯಕ್ಕೆ ಊರಿನ ಶಿವಪೂಜೆಗೌಡರ ಮನೆಯಲ್ಲಿ ಎತ್ತು ಸತ್ತಿರುತ್ತದೆ. ಈ ಸುದ್ಧಿಕೇಳಿದ ತೊಣ್ಣಿಗೆ ಹಸಿವನ್ನು ನೀಗಿಸಿಕೊಳ್ಳಲು ತಾತ್ಕಾಲಿಕವಾಗಿ ಒಂದು ಪರ್ಯಾಯಮಾರ್ಗ ದೊರಕಿತೆಂದು ಸಂತೋಷಿಸಿ " ಶಿವಪೂಜೆಗೌಡರು ತಮ್ಮ ಮನೆಯ ಮಾದಿಗನಾದ ತನಗಾಗಿ ಎದುರು ನೋಡುತ್ತಿರಬಹುದೇ"[೯] ಎಂದು ಯೋಚಿಸುತ್ತಾ ಗೌಡರ ಮನೆಯ ಹತ್ತಿರಬರುತ್ತಾನೆ. ಸತ್ತ ಪ್ರಾಣಿಗಳನ್ನು ಸಾಗಿಸುವ ಹಕ್ಕು ಅಸ್ಪೃಶ್ಯರದೆಂಬ ಮನ್ವಾದಿ ಸಂಪ್ರದಾಯದ ನಂಬಿಕೆ ಆತನಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ, ಅಲ್ಲದೆ ತೊಣ್ಣಿ ಗೌಡರ ಮನೆಯಲ್ಲಿ ಹಲವು ವರ್ಷ ಜೀತದಾಳಾಗಿ ದುಡಿದಿದ್ದವನು ಎಂಬ ಕಾರಣದಿಂದ ಗೌಡರು ತನ್ನ ಪರವಾಗಿ ಇರುತ್ತಾರೆ ಎಂಬ ನಂಬಿಕೆ ಆತನಿಗಿದೆ. ಹಾಗಾಗಿ ಆತ "ಗೌಡ್ರೆ, ದೇವ್ರ ಹೆಣ ತುಂಬಿದ ಮನ್ಯಾಗ ಬಾಳವತ್ತಿರೋದು ನಂಗ್ಯಾಕೋ ಬೇಷಿ ಕಾಣುವಲ್ದು... ತಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆ ಕೊಡ್ರಿ ಧಣಿ... ಒಯ್ದುಬುಡ್ತೀನಿ"[೧೦] ಎಂದು ಕೇಳುತ್ತಾನೆ. ಈತನ ಈ ಮಾತು ಪಸಿವಿನ ಒತ್ತಡವನ್ನು ಧ್ವನಿಸುತ್ತದೆ. ಆದರೆ ಈ ಮಾತುಗಳನ್ನು ಕೇಳಿ ಕುಪಿತರಾದ ಗೌಡರು, ದೇವರನ್ನು [ಎತ್ತನ್ನು] ಹೂಳಬೇಕೆಂಬ ನಿರ್ಧಾರವನ್ನು ಹೊಂದಿದ್ದುದರಿಂದ "ನಿಂಗೆ ಕೊಡೋಕೆ ಸತ್ತಿರೋದು ಅಗಸ್ರ ಕತ್ತೆ ಅಲ್ಲಲೇ' ಮನೆಯ ಎತ್ತು. ಅದ್ನ ನಿನ್ ಕೈಗೊಪ್ಸಿ

[illegible]

ನಾನ್ಯಾವ ಕರ್ಮಕ್ಕೋಗ್ಲಿ"[೧೧] ಎಂದು ಹೇಳುವುದರ ಮೂಲಕ ಮಾದಿಗನಿಗೆ ಎತ್ತನ್ನು ತಿನ್ನಲು ನೀಡುವುದರಿಂದ ತನಗೆ ಪಾಪ ಅಂಟಿಕೊಳ್ಳುತ್ತದೆ ಎಂಬ ಭಾವನೆಯನ್ನು ಹೊರಹಾಕುತ್ತಾರೆ. ಒಂದೆಡೆ ಹಸಿವಿನ ಧಾರುಣತೆಯ ತೀವ್ರತೆ ಹೆಚ್ಚುತ್ತಿದ್ದರೆ, ಮತ್ತೊಂದೆಡೆ ಪಾವಿತ್ರ್ಯಪ್ರಜ್ಞೆ ಕಾಡುತ್ತಿರುವುದನ್ನು ಠೊಣ್ಣಿ ಹಾಗೂ ಗೌಡರ ನಡುವೆ ಕಾಣಬಹುದು.

ದೇವರ [ಎತ್ತಿನ] ಹೆಣವನ್ನು ಪಡೆಯುವುದು ತನ್ನ ಹಕ್ಕು ಎಂಬಂತೆ "ನಿಮ್ಮಂಥೋರೆ ಇಂಥ ಮಾತಂದ್ರೆ ಎಂಗ್ರಿಥಣಿ... ನಾವು ಎಣಾತಿಂದು ಬದುಕೋಮಂದಿ... ದ್ಯಾವ್ರ ಎಣಕೊಡಿ, ಕ್ವಯ್ದು ತಿಂದು ಬದಿಕಂತೀವಿ ... ತಿಳ್ದೋರೆ ಇಂಗಂದ್ರೆ ಮನಿಮಾದಿಗ್ರು... ನಾವೆತ್ಲಾಗೆ ಒಗ್ಬೇಕು ಧಣಿ... ನಿಮ್ಮೆಂಜ್ಲು ತಿನ್ನೋ ಅಕ್ಕೈತಿ ಕೇಳ್ತೀವಿ... ದೇವ್ರ ಎಣಕೊಡ್ರಿ"[೧೨] ಎಂದು ಆವೇಶದಿಂದಲೇ ಕೇಳುತ್ತಾನೆ. ಈ ಮಾತುಗಳನ್ನು ನೋಡಿದಾಗ ಎತ್ತಿನ ಮಾಂಸದಿಂದ ಹಸಿವು ಹಿಂಗುತ್ತದೆ, ಚರ್ಮದಿಂದ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಎಂಬ ಮಹಾತ್ವಾಕಾಂಕ್ಷೆ ಠೊಣ್ಣಿಯದು ಎಂದು ಖಚಿತವಾಗಿ ಹೇಳಬಹುದು. ಆದರೆ ಗೌಡ ದೇವರ ಹೆಣವನ್ನು ಹೂಳುವ ನಿರ್ಧಾರಮಾಡಿದುದರಿಂದ ದೇವರ ಹೆಣವನ್ನು ಹೂಳುತ್ತಾರೆ. ಒಬ್ಬರಿಗೆ ಅತ್ಯವಶ್ಯಕ ಆಹಾರವಾಗಿರುವ ವಸ್ತು ಮತ್ತೊಬ್ಬರಿಗೆ ಪವಿತ್ರವಾದುದಾಗಿದೆ. ಬದುಕಿನ ದ್ವಂದ್ವವನ್ನು ಇಲ್ಲಿ ಗುರುತಿಸಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಒಂದು ವ್ಯವಸ್ಥೆ ತಾನೇ ನಿರ್ಮಿಸಿರುವ ಸಂಪ್ರದಾಯವನ್ನು ತಾನೇ ನಿರಾಕರಿಸುತ್ತದೆ ಎಂಬುದು. ಹೀಗಾಗಿ ಠೊಣ್ಣಿ ಪರ್ಯಾಯ ಮಾರ್ಗವನ್ನು ಹುಡುಕುತ್ತಾನೆ. ಗೌಡರು ಎತ್ತನ್ನು ಊಳುವ ನಿರ್ಧಾರವನ್ನು ತಿಳಿದುಕೊಂಡ ನಂತರ ಠೊಣ್ಣಿ ಪ್ರತಿಭಟನಾಕಾರನಾಗಿ ಕಾಣಿಸಿಕೊಳ್ಳುತ್ತಾನೆ. "ಕ್ಯೇಳೋ ಅಕ್ಕೈತಿ ಕ್ಯೇಳ್ತೀವಿ ಅದಕ್ಯಾಕೆ ಗೌಡ ನರ ಆರಕೋಬೇಕು". ಎಂಬ ಮಾತಿನಲ್ಲಿ ಹಾಗೂ "ಸತ್ತಿರೋ ಎತ್ತು ಕ್ವಡಿಸ್ವಪ್ಪೋ ... ಆ ಎತ್ತು ತಿನ್ನೋದು ನನ್ ಅಕ್ಕಪ್ಪೋ... ಇವತ್ತು ಅನ್ಯಾಯ ನಂಗಾಯ್ತದೆ ಇದೇ ನಾಳೆ ನಿಮ್ಗೂ ಆಯ್ತದೆ... ಇಂಗಾದ್ರೆ ಒಕ್ಕಲಿಗರ ವಕ್ಕಲುಮಣ್ತಿನ್ನಬೇಕಾಯ್ತದ್ರಪ್ಪೋ"[೧೩] ಎಂಬ ಮಾತಿನಲ್ಲಿ ಅತ ಅನ್ಯಾಯದ ವಿರುದ್ಧ ತಾನು ಪ್ರತಿಭಟಿಸುವುದೇ ಅಲ್ಲದೇ ಉಳಿದ ಜನರನ್ನೂ ಜಾಗೃತಗೊಳಿಸುವ ನಾಯಕ ಪ್ರತಿಭಟನಾಕಾರನಂತೆ ಕಾಣಿಸುತ್ತಾನೆ. "ಒಗ್ಗಟ್ಟಾಗಿ ಕೇಳುವ ಬರ್‍ರಲೆ ಅಂದರೆ ಉಪದೇಶ

ಏಳ್ತೀರಲ್ರಪ್ಪೋ ಈ ಜನುಮದಾಗ ನೀವ್ಯಾರೂ ಉದ್ದಾರಾಗಲ್ಲ"[೧೪] ಎಂಬ ಮಾತು ಒಗ್ಗಟ್ಟಾಗುವ ತನಕ ತಮ್ಮ ಮೇಲೆ ಈ ರೀತಿಯ ಶೋಷಣೆ ತಪ್ಪಿದ್ದಲ್ಲ ಎಂಬ ಖಚಿತತೆಯನ್ನು ಧ್ವನಿಸುತ್ತದೆ. ಈ ಮಾರ್ಗವು ಯಶಸ್ಸನ್ನು ನೀಡದಿದ್ದಾಗ ದೇವರ ಹೆಣವನ್ನು ಭೂಮಿಯಿಂದ ಹೊರತೆಗೆಯಲು ನಿರ್ಧರಿಸುತ್ತಾನೆ. ಅದರಂತೆ ನಡೆದು ಹೆಣವನ್ನು ಹೊರತೆಗೆಯಲು ಮೈಯೊಳಗೆ ದೆವ್ವ ಹೊಕ್ಕಂಡವನಂತೆ ತೋಡೀ ತೋಡಿ ದೇವರ ಹೆಣವನ್ನು ತಲುಪುತ್ತಾನೆ. ಅದು ಕೊಳೆತಿರುವುದೋ ಇಲ್ಲೋ ಎಂಬುದಾಗಿ ದೇವರ ಹೆಣದ ಮೂಲೆ ಮೂಲೆ ಮೂಸಿ ಗೆಲುವಾಗುತ್ತಾನೆ. ನಂತರ ಅಲ್ಲೇ ಚಕಚಕ ಕೋಯ್ದು ಕೊಂಡೋಯ್ದಿದ್ದ ಪುಟ್ಟಿಗೆ ಕಣ್ಣಿಕಣ್ಣಿ ಮಾಂಸವನ್ನು ತುಂಬಿಕೊಂಡು, ಹಸಿ ತೊಗಲನ್ನು ಮಡಚಿ ಹೊತ್ತುಕೊಂಡು ಮನೆಗೆ ಬರುತ್ತಾನೆ. ಈ ಸನ್ನಿವೇಶದ ನಿರೂಪಣೆಯ ಮೂಲಕ ಹಸಿವಿನ ಧಾರುಣತೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಚಿತ್ರಿಸುವುದು ಕುಂವೀ ಅವರ ಇಂಗಿತವಾಗಿದೆ. ಆದರೆ ಇದು ನೈಜತೆಗೆ ನಿಲುಕದ್ದು ಎನಿಸುತ್ತದೆ. ಮಾದಿಗರು ಸತ್ತ ದನದ ಮಾಂಸವನ್ನು ತಿಂದರೂ ಸಹ ಮಣ್ಣಿನಲ್ಲಿ ಹೂತಿರುವ ದನದ ಮಾಂಸ ಹಾಗೂ ಚರ್ಮವನ್ನು ತೆಗೆದುಕೊಳ್ಳಲು ಎಳಸುವುದಿಲ್ಲ.

ಅನಂತರ ಕಥೆಯ ಬೆಳವಣಿಗೆ ವಿಶಿಷ್ಟ ತಿರುವು ಪಡೆದುಕೊಳ್ಳುತ್ತದೆ. ದೇವರ ಹೆಣವನ್ನು ಭೂಮಿಯಿಂದ ಹೊರತೆಗೆದ ಆಪಾದನೆಯ ದೂರನ್ನು ಗೌಡರು ಪೋಲೀಸರಲ್ಲಿ ದಾಖಲಿಸುತ್ತಾರೆ. ಪೋಲೀಸರು ಆತನಿಗೆ ತಕ್ಕ ಶಿಕ್ಷೆನೀಡಬೇಕೆಂದು ಬಯಸುತ್ತಾರೆ. ಅದರಂತೆ ಸಬ್‌ಇನ್ಸ್‌ಪೆಕ್ಟರ್ ಕೊಣ್ಣಿಯನ್ನು ಹೆದರಿಸಲು "ಕಳ್ಳ ಬಾಂಛೋದ್ ಇಂಥ ಕೆಲ್ಸನ ಮಾಡೋದು ನಿಂಗೆ ಆರ್ತಿಂಗ್ಳು ಜೇಲಿಗೆಹಾಕಿ ಬುದ್ದಿ ಕಲಿಸ್ತೀನಿ"[೧೫] ಎಂದು ಗದರಿಸುತ್ತಾರೆ. ಆದರೆ ಕೊಣ್ಣಿ ಯಾರೂ ನಿರೀಕ್ಷಿಸಿರದ ಉತ್ತರವನ್ನು ನೀಡುತ್ತಾನೆ. 'ನಿಮ್ಗೆ ಪುಣ್ಯಾ ಬರ್‌ತ್ತೈತ್ರೀ ದ್ಯಾವ್ರೂ, ಆರ್ತಿಂಗಳ್ಯಾಕೆ ಒಂದ್ವರ್ಷ ಆಕಿಬುಡ್ರಿ ಎಪ್ಪಾ ಕಾಲಿಗೆ ಬೀಳ್ತೀನಿ ಬೇಕಾರೆ"[೧೬] ಎಂದು ಹೇಳಿದಾಗ ಗೌಡ ಹಾಗೂ ಸಬ್‌ಇನ್ಸ್‌ಪೆಕ್ಟರ್ ಇಬ್ಬರೂ ತಬ್ಬಿಬ್ಬಾಗಿ ನಿಲ್ಲುತ್ತಾರೆ. ಸಬ್‌ಇನ್ಸ್‌ಪೆಕ್ಟರ್ ಈ ಬಾರಿ ಮಾಡಿರುವ ತಪ್ಪನ್ನು ಕ್ಷಮಿಸುವುದಾಗಿ ಹೇಳಿ ಮತ್ತೊಮ್ಮೆ ಮಾಡಬೇಡ ಎಂದಾಗ ಕೊಣ್ಣಿ ಆವೇಶದಿಂದ "ಈಗ್ ನನ್‌ಕರ್ಕೊಂಡೋಗ್ಲಿಲ್ಲಾಂದ್ರೆ ಇದ್ಕಿಂತ ದೊಡ್‌ತಪ್

ಮಾಡ್ತೀನಿ" ಎಂದು ಹೇಳೀ ಪೋಲೀಸರನ್ನು ಕಕ್ಕಾಬಿಕ್ಕಿಯಾಗಿಸುತ್ತಾನೆ. ಪೋಲೀಸರೇ ಅಲ್ಲಿಂದ ತಪ್ಪಿಸಿಕೊಳ್ಳೋ ಹಾಗೆ ಆಗುತ್ತದೆ.

ಬಡತನ ಹಾಗೂ ಹಸಿವಿನ ಭೀಕರತೆಯಿಂದಾಗಿ ಊರಿನಲ್ಲಿ ಉಳಿಯುವ ಮೂಲಕ ಹಸಿವಿನಿಂದ ನರಳುವ ಬದಲು ಜೈಲು ಸೇರುವುದೇ ಒಳ್ಳೆಯದು ಎಂಬ ವ್ಯಂಗ್ಯವನ್ನು ಈ ಕಥೆಯಲ್ಲಿ ಕಾಣಬಹುದು. ಹೊರಗೆ ಏನೂ ಇಲ್ಲದೆ ಬದುಕುವುದಕ್ಕಿಂತ ಒಳಗೆ (ಜೈಲಿನಲ್ಲಿ) ಊಟ, ವಸತಿಯ ಸುಭದ್ರತೆಯೊಂದಿಗೆ ಬದುಕುವುದೇ ಲೇಸು ಎಂಬ ಹಂತಕ್ಕೆ ತರುವ ಆ ಬಡತನದ ಧಾರುಣ ಚಿತ್ರಣ ಈ ಕತೆಯಲ್ಲಿದೆ.

ಜಾತಿ, ವರ್ಗ, ಧರ್ಮ, ಸಂಘರ್ಷವೆಂಬುದು ಮನುಷ್ಯ ಬದುಕಿದ್ದಾಗ ಮಾತ್ರವಲ್ಲದೆ ಸತ್ತ ನಂತರವೂ ಕಾಡುತ್ತದೆ ಎಂಬುದಕ್ಕೆ ಸ್ಪಷ್ಟ ನಿದರ್ಶನದಂತೆ ಕಾಣಸಿಗುವುದು ಕುಂವೀ ಅವರ "ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ" ಎಂಬ ಕಥೆ. ಕುಂವೀ ಅವರ ಕಥೆಗಳಲ್ಲಿ ಸಾವಿನ ಸನ್ನಿವೇಶಗಳ ಚಿತ್ರಣ ಬಂದಾಗ ಸತ್ತವನ ಮತ್ತು ಬದುಕಿರುವ ಮನುಷ್ಯರ ಅಂತರಾಳ ವ್ಯಕ್ತವಾಗುವ ಹಾಗೆ ಮತ್ತೆ ಯಾವ ಸಂದರ್ಭದಲ್ಲೂ ಕಾಣಸಿಗುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ವಾಸ್ತವವಾಗಿರುವ ಸಾಮಾಜಿಕ ಕ್ರೌರ್ಯ ಈ ಕಥೆಯಲ್ಲಿ ಸಮರ್ಥವಾಗಿ ಚಿತ್ರಣಗೊಂಡಿದೆ. ಈ ಕಥೆಯಲ್ಲಿ 'ದೂಪದಳ್ಳಿ' ಎಂಬ ಗ್ರಾಮ ಅಧಿಕ ವೀರಶೈವ ಮನೆಗಳಿಂದ ಕೂಡಿದ್ದು ಏಕೈಕ ಮುಸ್ಲಿಂ ಮನೆಯನ್ನು ಹೊಂದಿತ್ತು. ಆ ಮುಸ್ಲಿಂ ಕುಟುಂಬದಲ್ಲಿ ಯಜಮಾನ ಶೇಕಣ್ಣ, ಆತನ ಹೆಂಡತಿ ಶಾಲಮ್ಮ ಹಿರಿಯಮಗ ಪೀರಣ್ಣ ಕಿರಿಯಮಗ ಬಾಷಾ ಏಕೈಕ ಪುತ್ರಿ ಬೇಗಮ್ಮ ವಾಸವಿದ್ದರು. ಶೇಕಣ್ಣ ತೀರಿಹೋದ ನಂತರ ಊರಿನಲ್ಲಿ ಇದ್ದ ಒಂದೇ ಸ್ಮಶಾನ, [ಅದು ವೀರಶೈವರದು] ಕೆಲವು ಹಿರಿಯರ ಅನುಮತಿ ಪಡೆದು ಹೂಳಲಾಯಿತು ಅನಂತರ ಮಳೆಯಾಗದಿದ್ದಾಗ ಅದಕ್ಕೆ ವೀರಶೈವ ಸ್ಮಶಾನದಲ್ಲಿ ಇಸ್ಲಾಂ ಧರ್ಮದವನ ಹೆಣ ಊತದ್ದೇ ಕಾರಣವೆಂದು ಭಾವಿಸುತ್ತಾರೆ. ಪೀರಣ್ಣನ ಸ್ನೇಹಿತ ಗುರುವ "ಹೊಟ್ಟೆಗೇನು ತಿಂತೀರಲೇ... ತುರುಕ್ರೋನ ಹೆಣಾನ ಈರಸೈವರ ರುದ್ರಭೂಮ್ಯಾಗ ಉಗಿಯುವುದ್... ನೀನು ಎಸ್ಸೆಲ್ಸಿ

ಪ್ಯಾಸಾಗಿರಬಹುದು... ರವ್ಪೋಸ್ಟ್ ಇಂಗ್ಲೀಸೂ ಬರ್ತೀರಬಹ್ದು ... ಅಂದ ಮಾತ್ರಕ್ಕೆ ತುರುಕ್ರು ಲಿಂಗಾತ್ರು ಒಂದಾಯ್ತಾರಾ"[೧೭] ಎಂದು ಹೇಳುವುದರಲ್ಲಿ ಜನರ ಮೌಢ್ಯತೆಯ ಅರಿವಾಗುತ್ತದೆ.

ಅನಂತರ ಪೀರಣ್ಣ ತಾನು ಕೆಲಸಮಾಡುತ್ತಿದ್ದ ಜಾಗದಿಂದ ರೇವಣ್ಣಗೌಡನ ಪತ್ರಕ್ಕೆ ಸ್ಪಂದಿಸಿ ಹಿಂದಿರುಗಿದಾಗ ಗೌಡನ ಮನೆಗೆ ಹೋಗುವುದಕ್ಕಿಂತ ಮುಂಚೆ ಮನೆಯಲ್ಲಿ ತಾಯಿ, ತಮ್ಮನೊಡನೆ ಚರ್ಚಿಸುತ್ತಾನೆ. ಆಗ ತಾಯಿ ಪೀರಣ್ಣನನ್ನು ಕುರಿತು "ನೀನು ಓದ್ಕೊಂಡೋನು, ಗೌಡಗೆ ರವ್ಪೋಟು ಬುದ್ದಿ ಹೇಳು, ಸತ್ತೋರು ಸತ್ರು ಆದ್ರೆ ಬದುಕಿದೋರಿಗೆ ಯಾಕೆ ಕಾಟಕೊಡೋದು"[೧೮] ಎಂಬ ಮಾತಿಗೆ ಪೀರಣ್ಣ "ಇದೆಲ್ಲ ಇಲೇಜು ಪಾಲಿಟಿಕ್ಸ್ ನಿನ್ಗೆ ಅರ್ಥಾಗಿಲ್ಲ" ಎಂದು ಪ್ರತಿಕ್ರಿಯಿಸಿ ತಾಯಿಯ ಬಾಯಿ ಮುಚ್ಚಿಸುತ್ತಾನೆ. ನಂತರ ಗೌಡರ ಮನೆಪತ್ತಿರ ಜನಗಳು ಸೇರಿಸುತ್ತಾರೆ. ಅಲ್ಲಿಗೆ ಪೀರಣ್ಣ ಬಂದಾಗ ಅವರೆಲ್ಲರೂ ಸಹಾ ನಿಮ್ಮಪ್ಪನ ಹೆಣವನ್ನು ನಮ್ಮ ಅಂದರೆ ವೀರಶೈವರ ರುದ್ರಭೂಮಿಯಲ್ಲಿ ಹಾಕಿರುವುದರಿಂದ ಮಳೆ ಇಲ್ಲದಂತಾಗಿದೆ ಎಂದು ಹೇಳಿದಾಗ ಪೀರಣ್ಣ "ನೀವು ಹೇಳೋದ್ನ ಕೇಳಿದ್ರೆ ನೀವ್ ಎಷ್ಟು ಹಿಂದುಳೀದಿದ್ದೀರಂತ ಗೊತ್ತಾಯ್ತದೆ"[೧೯] ಎಂಬ ಮಾತಿನಲ್ಲಿ ಗ್ರಾಮೀಣರ ಮೌಢ್ಯತೆಯ ಒಟ್ಟು ಚಿತ್ರಣವೇ ಅಡಗಿದೆ.

ಬಸುದೇವ್ರ ಗುಡಿಯ ಬಳೀ ಸೇರಿದ್ದ ಪಂಚಾಯಿತಿಯಲ್ಲಿ ದೈವಸ್ಥರೆಲ್ಲ ಸೇರಿ, ರೇವಣ್ಣಗೌಡನೆ ತೀರ್ಪು ಪ್ರಕಟಿಸುತ್ತಾನೆ. "ಏನೋ ತೆಪ್ ಆಗೋದು ಆಗೋಗ್ಯೈತಿ ಇದ್ಕೆ ಪರಿಹಾರವಾಗಿ ಬಸಂದೇವ್ರಗುಡಿಗೆ ಐನೂರ್ ಒಂದ್ರೂಪಾಯಿ ತಪ್ ದಂಡ ಕಟ್‌ಬೇಕು. ಊರದೈವಸ್ಥರಿಗೆ ಸೀ ಊಟ ಹಾಕಿಸ್ಬೇಕು"[೨೦] ಎಂದು. ಆದರೆ ಪೀರಣ್ಣನ ಸಂಸಾರ ಒಪ್ಪೊತ್ತಿನ ಊಟಕ್ಕೆ ಪರದಾಡುವಂತಿರುವಾಗ ಐದುನೂರೊಂದು ರೂಪಾಯಿ ದಂಡ ಕಟ್ಟವ ಸ್ಥಿತಿಯಲ್ಲಿರುವುದಿಲ್ಲ. ತಾಯಿ ಶಾಲಮ್ಮ ಅದನ್ನು ವಿರೋಧಿಸಿ ಹೀಗೆ ಹೇಳುತ್ತಾಳೆ. "ಮುಸಲ್ಮಾನರ ಮನೆ ನಮ್ಮದೊಂದೇ ಈವೂರ್‍ನಾಗೋದು ನಮಗಾರಿಗೂ ಮುಸಲ್ಮಾನಿ ಮಾತಾಡೋಕೆ ಬರೋದಿಲ್ಲ... ನಾವು ಪೀರ್ಲ ಪಬ್ಬ ಮಾಡ್ತಿಲ್ಲ, ರಂಜಾನು ಮಾಡ್ತಿಲ್ಲ ನಾವೂ ನಿಮ್ಮಂಗೆ ನಾಗ್ರಪಂಚಮಿ, ಮಾನಾಮಿ, ಉಗಾದಿ ಪಬ್ಬ ಮಾಡ್ತೀವಿ... ಬಸಂದೇವ್ರೆ ನಮ್

ಮನೀದೇವ್ರು ... ಇಂತದರಾಗೆ ನನ್ ಗಂಡನ ಹೆಣಾನ ನಿಮ್ ಸುಡುಗಾಡ್ನಾಗೆ ಉಗುದ್ರೆ ಅದ್ರಾಗೇನೈತಿ ತಪ್ಪು... ಊರಿಗೆ ಇರೋದೆ ಒಂದು ಸುಡುಗಾಡು... ನನ್ ಹೆಣಾನೂ ನನ್ ಮಕ್ಕ ಹೆಣಾನೂ... ಅದ್ರಾಗ ಇಟ್ರೆ ತಪ್ಪೇನೈತಿ... ಹಾಂ..ಹಾ..."[೨೧] ಎಂದು ಆವೇಶದಿಂದ ನುಡಿಯುತ್ತಾಳೆ ಹಾಗೂ ತೀರ್ಪಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ.

ಆದಿನ ರಾತ್ರಿ ಬೇಗಮ್ಮ ಒಂದು ಕೆಟ್ಟಕನಸು ಕಾಣುತ್ತಾಳೆ. ಕಾಕತಾಳಿಯವೆಂಬಂತೆ ಆ ಕಡೆ ಆಕೆಯ ತಂದೆಯ ಹೂತಿಟ್ಟ ಹೆಣವನ್ನು ತೆಗೆದು ಊರಿನ ಅಗಸೆ ಬಾಕತಾಗ ಹಾಕಿರುತ್ತಾರೆ. ಆಕೆ ಕಂಡ ಕನಸನ್ನು ಹೀಗೆ ಹೇಳುತ್ತಾಳೆ "ಅಪ್ಪ" ಪೀರಣ್ಣಾ ನಾನೂ, ನೀನೂ, ಬಾಷಣ್ಣ ಎಲ್ರೂಲೂ ಕೊಟ್ರು ಜಾತರಿಗೋಗಿದ್ವಿ ಅಲ್ಲಿ ಬಣ್ಣಬಣ್ಣದ ಗಿರಿಗಿಟ್ಟಿಯೊಂದಿತ್ತು. ಅದು ಚಂದಿತ್ತೂ ಅಂದ್ರೆ ಚಂದಿತ್ತು. ನಾನಾ ನಮೂನೆ ಪ್ರಾಣಿಗಳೂ, ಪಕ್ಷಿಗಳೂ ಆದಕ್ಕಿದ್ದವು ಹದ್ದಿನಮ್ಯಾಲ ಅಪ್ಪ ಕುಂತಿದ್ದನು ಆತನ ಹಿಂದೆ ಕುದ್ರಿಮ್ಯಾಲ ನೀ ಕುಂತಿದ್ದಿ. ನಿನ್ನ ಹಿಂದಿದ್ದ ಟಗರಿನ ಮ್ಯಾಲ ಬಾಷಣ್ಣ ಕುಂತಿದ್ದ. ಆತನ ಹಿಂದಿನ ಹಂಸದ ಮ್ಯಾಲ ನಾನು ಕುಂತಿದ. ನನ್ನ ಹಿಂದಿದ್ದ ಕಾಗೆ ಮ್ಯಾಲ ಪೀರಣ್ಣ ಕುಂತಿದ್ದ, ಪೀರಣ್ಣನ ಹಿಂದಿದ್ದ ಹುಲಿಮ್ಯಾಲ ಕುಂತಿದ್ದ ಗೌಡ ಥೇಟ್ ಹುಲಿಯಂತಿದ್ದ ಕಣಮ್ಮ ...ಗಿರಗಿಟ್ಟಿ ಎಷ್ಟು ಜೋರಾಗಿ ತಿರುಗಿತಂದ್ರೆ ನಾವೆಲ್ಲ ಗಾಳ್ಯಾಗ ಎಲ್ಲಿ ಕರಗಿ ಹೋಗ್ತೀವೋ ಅನ್ನಿಸಿಭಯವಾಯ್ತು"[೨೨] ಇಲ್ಲಿ ಕುಂವೀ ಬೇಗಮ್ಮಳ ಮಾತಿನಲ್ಲಿಯೇ ಪೀರಣ್ಣನ ಕುಟುಂಬಕ್ಕಾಗುವ ತೊಂದರೆಯ ಕ್ರೂರಮುಖವನ್ನು ಚಿತ್ರಿಸಿದ್ದಾರೆ. ಕಿರಿಯಮಗ ಬಾಷಾ ಎಂದೂ ಕುಡಿಯದವ ಆ ದಿನ ಕುಡಿದು ತನ್ನ ಅಪ್ಪನ ಹೆಣವನ್ನು ಪೊತ್ತುಕೊಂಡು ಹೋಗಿ ರೇವಣ್ಣಗೌಡನ ಮನೆಯ ದೇವರ ಕೋಣೆಯ ಒಳಗಿರುವ ಕಬ್ಬಿಣ ಪೆಟಾರಿ ಮೇಲಿಟ್ಟನು. ಅನಂತರ ಆತನನ್ನು ಹಿಡಿದು ಅಟವಾಳಿಗೆಯಲ್ಲಿದ್ದ ಕಂಬಕ್ಕೆ ಕಟ್ಟಿಹಾಕಿದರು.

ಹೆಣಮನೆ ಸೇರಿದುದರಿಂದ ಮನೆಯ ಹೆಂಗಸು ಗಂಡಸೆಲ್ಲರೂ ಮನೆಯ ಆಚೆಯೇ ನಿಂತರು. ನಾಯಿಗಳು ಮನೆಯ ಒಳಹೊಕ್ಕವು. ಕೊನೆಗೆ ಬಾಷಾನನ್ನು ಪೋಲೀಸರಿಗೆ ಒಪ್ಪಿಸಲಾಗುತ್ತದೆ. ಇನ್ಸ್‌ಪೆಕ್ಟರ್ ವಸ್ಲೂರಪ್ಪ ಲಂಚ ಪಡೆದು ವಿಚಾರಣೆ ಆರಂಭಿಸುತ್ತಾನೆ. ಆ

ಇನ್ನೂರು ರೂಪಾಯಿಯನ್ನು ಅದೇ ಹೆಣಾಮಲಗಿಸಿದ್ದ ಪೆಟ್ಟಿಗೆಯಿಂದ ತರಲು ಎಲ್ಲರೂ ಹೆದರಿದ್ದರಿಂದ ಕಾನ್ಸ್‌ಟೇಬಲ್‌ಗಳಾದ ಬಸ್ರಾಜ ಹಾಗೂ ನರ್ಸಪ್ಪ ಹೋಗುತ್ತಾರೆ. ಆ ಪೆಟ್ಟಿಗೆಯಲ್ಲಿದ್ದ ನೂರು ರೂಪಾಯಿನೋಟುಗಳನ್ನು ಹಾಗೂ ಚಿನ್ನದ ಸರಗಳನ್ನು ಕಳವುಮಾಡುತ್ತಾರೆ. ಅದು ತಿಳಿದ ನಂತರ ಗೌಡ ಇನ್ಸ್‌ಪೆಕ್ಟರ್ ವನ್ನೂರಪ್ಪನ ಬಳಿ ದಾವೆ ಹೊತ್ತು ಹೋಗಿ ಗದರಿಸಿಕೊಂಡು ಹಿಂತಿರುಗುತ್ತಾನೆ. ಮತ್ತೆ ಆ ಹೆಣವನ್ನು 'ಎಲ್ಲಿಗ' ಹಾಗೂ 'ಮಾಯ' ಎಂಬ ಮಾದಿಗರಿಂದ ಕಟ್ರಮ್ಮನ ಹಳ್ಳದಲ್ಲಿ ಬಿಸಾಡಿಸುತ್ತಾನೆ. ಈ ಕಡೆ ಬಾಷಾನನ್ನು ಬಿಡುಗಡೆಮಾಡಲು ಸಾವಿರ ರೂಪಾಯಿಗಳನ್ನು ಲಂಚಕೊಡಬೇಕಾಗಿ ಬಂದಾಗ ಪಿತ್ರಾರ್ಜಿತ ಆಸ್ತಿ ಒಂದೂಕಾಲೆಕರೆ ಮಾರುವುದೆಂದು ತೀರ್ಮಾನಿಸುತ್ತಾನೆ ಪೀರಣ್ಣ. ಆದರೆ ಆ ಹಳ್ಳಿಯಲ್ಲಿ ಅದಕ್ಕೂ ಬಿಡುವುದಿಲ್ಲ.

ಹೀಗೆ ಅಧಿಕ ಸಂಖ್ಯೆಯಲ್ಲಿರುವ ಜನ ಅಲ್ಪಸಂಖ್ಯಾತ ವರ್ಗದವರನ್ನು ತುಚ್ಛವಾಗಿ ನಡೆಸಿಕೊಳ್ಳುವ ನೈಜತೆಯನ್ನು ಈ ಕಥೆಯಲ್ಲಿ ಕಾಣಬಹುದು.

ಆಧುನಿಕತೆ ಹಾಗೂ ಸಂಪ್ರದಾಯಗಳ ನಡುವಿನ ಸಂಘರ್ಷವನ್ನು 'ಕುಬುಸ' ಎಂಬ ಕಥೆಯಲ್ಲಿ ನೋಡಬಹುದು. ಸ್ವಾತಂತ್ರೋತ್ತರ ಭಾರತದಲ್ಲೂ ಶಿಲಾಯುಗದ ಲಕ್ಷಣ, ಸ್ವಭಾವಗಳನ್ನು ಉಳಿಸಿಕೊಂಡು ಬಂದಿರುವ ಗ್ರಾಮ 'ವಡ್ಡಟ್ಟಿ' ಎಂಬುದು. ನಾಗರಿಕತೆಯ ನೆರಳೂ ಸಹಾ ಆ ಗ್ರಾಮಕ್ಕೆ ಬಿದ್ದಿಲ್ಲವೆಂದೇ ಹೇಳಬಹುದು ಹಾಗಾಗಿ ಅದು ರಾಜಕೀಯ ನಕ್ಷೆಯಲ್ಲಿ ಸೇರಿಲ್ಲ. 'ವಡ್ಡಟ್ಟಿ' ಎಂಬ ಪ್ರಪಂಚ ಬಿಟ್ಟರೆ ಅಲ್ಲಿನ ಜನರಿಗೆ ಬೇರೊಂದು ಪ್ರಪಂಚದ ಪರಿಚಯವೇ ಇಲ್ಲ. 'ಆ ಗ್ರಾಮದ ಜನ ಭೂತಕಾಲದ ಉಕ್ಕಿನ ತೆರೆ ಸೀಳಿಕೊಂಡು ವರ್ತಮಾನದ ಜಗಜಗಿಸುವ ರಂಗಭೂಮಿಯತ್ತ ಇಣುಕಿದವರಲ್ಲ".[೨೩] ಇಂಥ ಗ್ರಾಮದಲ್ಲಿ ಹುಟ್ಟಿ ನಾಲ್ಕಕ್ಷರ ಕಲಿತು ಬೆಂಗಳೂರಿನಂತಹ ನಗರದಲ್ಲಿ ಸರ್ಕಾರಿ ಕೆಲಸಮಾಡುತ್ತಿರುವಾತ 'ನೆಟ್ಟಕಲ್ಲು' ಎಂಬಾತ. ಆತನನ್ನು ಈ ಕಾರಣಕ್ಕಾಗಿ 'ದೈವಾಂಶ ಸಂಭೂತನೆಂದೇ ಹೇಳಬೇಕು' ಎಂದು ಕುಂವೀ ಅವರೇ ನಿರೂಪಿಸಿದ್ದಾರೆ.

ನೆಟ್ಟಕಲ್ಲು ಶಾಲೆಗೆ ಹೋಗುತ್ತೇನೆ ಎಂದು 'ಬಂಡೆವಜ್ಜಿ' ಬಳಿ ಹೇಳಿದಾಗ ಆಕೆ ಗ್ರಾಮದ ಹಿರೀಕ ಕರಗಲ್ಲಪ್ಪನ ಬಳಿ ಹೋಗಿ ಶಾಂತಿಮಾಡಿಸುತ್ತಾಳೆ. ಅಂತರ ಕಟ್ಟಿಸುತ್ತಾಳೆ, ಮಂತ್ರಮಾಡಿಸುತ್ತಾಳೆ. ಆದರೆ ನಟ್ಟಕಲ್ಲು ಬಿಡದೆ ಹಠಮಾಡುತ್ತಾನೆ. ಶಾಲೆಯಲ್ಲಿ ಓದು ಬರಹ ಕಲಿತು ಸರ್ಕಾರಿ ಕಛೇರಿಯಲ್ಲಿ ಅಟೆಂಡರನಾಗಿ ಕೆಲಸಕ್ಕೆ ಸೇರುತ್ತಾನೆ. ಅಲ್ಲಿ ಅವನ ಹೆಸರು ಕೇಳಿದವರೆಲ್ಲ ಅವನ ಊರು, ವಿದ್ಯಾಭ್ಯಾಸ, ಅಪ್ಪ, ಅಮ್ಮ, ಇತ್ಯಾದಿ ವಿವರಗಳನ್ನು ಕುತೂಹಲದಿಂದಲೇ ಕೇಳುತ್ತಾರೆ. ಆತ ಮಾತನಾಡುವಾಗ ಗ್ರಾಮ್ಯಕ್ಕೆ ನಾಗರಿಕತೆಯನ್ನು ಬೆರೆಸಿ ಮಾತನಾಡುವುದನ್ನು ಕೇಳಿ ರೋಮಾಂಚನಗೊಳ್ಳುತ್ತಾರೆ. ಇತರರ ಲೇವಡಿಗೆ ಒಳಗಾಗುತ್ತಿರುವ ತನ್ನ ಹೆಸರನ್ನು 'ಎನ್.ಕೆ.ವಡವಟ್' ಎಂದು ಬದಲಾಯಿಸಿಕೊಳ್ಳುತ್ತಾನೆ. ಮೇಲ್ವರ್ಗದವರು ವಾಸಿಸುತ್ತಿದ್ದ ಬಡಾವಣೆಯಲ್ಲಿ ವಾಸಿಸತೊಡಗುತ್ತಾನೆ. ಸುಂಕಲಮ್ಮ, ಕಂದಾರೆಮ್ಮರಂಥ ಶೂದ್ರ ದೇವತೆಗಳಿಗೆ ನಡೆದುಕೊಳ್ಳುವುದು ಶೋಭೆ ತರುವುದಿಲ್ಲವೆಂದು ಭಾವಿಸಿ ಮೇಲ್ವರ್ಗದವರ ದೇವರುಗಳಾದ ಬೆಣ್ಣೆ ಆಂಜನೇಯ, ಚಲುವನಾರಾಯಣ ದೇವರಿಗೆ ನಡೆದುಕೊಳ್ಳತೊಡಗುತ್ತಾನೆ. ಹೀಗೆ ಆಧುನಿಕತೆಯ ಮೆರುಗನ್ನು ತನ್ನ ಜೀವನಕ್ಕೆ ಹೊಂದಿಸಿಕೊಳ್ಳಲು ತೊಡಗುತ್ತಾನೆ. ನೆಟ್ಟಕಲ್ಲು ಸಂಬಳದಲ್ಲಿ ಸ್ವಲ್ಪವನ್ನು ತನ್ನಜ್ಜಿ ವಡ್ಡರಟ್ಟಿಯಲ್ಲಿದ್ದ 'ಬಂಡೆವ್ವಜ್ಜಿ'ಗೆ ಮನಿಯಾರ್ಡರ್ ಮೂಲಕ ಕಳುಹಿಸುತ್ತಾನೆ, ಪತ್ರಗಳನ್ನು ಬರೆಯುತ್ತಾನೆ. ಅದನ್ನು ನೋಡಿ ಅಲ್ಲಿಯ ಜನ ಬೆರಗಾಗುತ್ತಾರೆ. ಅದೇ ಕಛೇರಿಯಲ್ಲಿ ಸೀನಿಯರ್ ಅಟೆಂಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಅಯ್ಯಾಳಪ್ಪ ಎಂಬಾತನ ಮಗಳು ಕಮಲಳನ್ನು ಮದುವೆಮಾಡಿಕೊಡುವುದಾಗಿ ಹೇಳಿದಾಗ ವಡವಟ್ ತನ್ನ ಅಜ್ಜಿಯನ್ನು ಕರೆತರಲು ಗ್ರಾಮಕ್ಕೆ ಹೋದಾಗ ಅಲ್ಲಿನ ಜನ ಹರ್ಷಿಸುತ್ತಾರೆ. ಆದರೆ ಆತ ಮದುವೆಯ ವಿಚಾರ ಪ್ರಸ್ತಾಪಿಸಿದಾಗ ಅದನ್ನು ಒಪ್ಪುವುದಿಲ್ಲ. ಏಕೆಂದರೆ ಅಲ್ಲಿನ ಜನ ಉಡುಸಲಮ್ಮ ದೇವತೆಗೆ ನಡೆದುಕೊಳ್ಳುವವರಾಗಿದ್ದು ಅವರಾರು ಕುಬುಸತೊಡುವಹಾಗಿಲ್ಲ. ಕುಬುಸತೊಟ್ಟದ್ದೇ ಆದರೆ ಆಕೆ ಕೋಪಿಸಿಕೊಳ್ಳುವಳೆಂದು ಭಾವಿಸಿರುತ್ತಾರೆ. ಹಾಗಾಗಿ ಕುಬುಸತೊಡುವ ಕಮಲಳನ್ನು ಆ ಗ್ರಾಮದ ಸೊಸೆಯಾಗಿ ತೆಗೆದುಕೊಂಡು ಬರಲು ನಿರಾಕರಿಸುತ್ತಾರಾದರೂ ವಡವಟ್ 'ಕುಬುಸ' ನಾಗರಿಕ ಪ್ರಪಂಚದ ಲಕ್ಷಣವೆಂದರೂ ಪ್ರತಿಭಟಿಸುತ್ತಾರೆ. ಆಗ ವಟವಟ್ "ಈ ಮಾನವರೂಪಿ ಗೋರ್ಕಲ್ಲುಗಳನ್ನು ಒಪ್ಪಿಸುವುದು

ಅಸಾಧ್ಯವೆಂದು"[೨೪] ಭಾವಿಸುತ್ತಾನೆ. ನಗರಕ್ಕೆ ಆಗಮಿಸಿ ಮದುವೆಯಾಗಿ ಸುಖ ಜೀವನ ನಡೆಸುತ್ತಾನೆ. ಅನಂತರ ತನ್ನಜ್ಜಿಯನ್ನು ಕರೆತರುತ್ತಾನೆ. ನಗರದ ಜನ ಆಕೆಯನ್ನು ಅಪಹಾಸ್ಯದಿಂದಲೇ ನೋಡತೊಡಗಿದರು, ಕೊನೆಗೂ ಆಕೆ ಕುಬುಸತೊಡಲು ನಿರಾಕರಿಸುತ್ತಾಳೆ. "ಕುಬುಸದ ಪರ ಅವರೂ; ಅದರ ವಿರುದ್ಧ ಅದು ಮಾತಿನ ಚಕಮಕಿ ನಡೆಸಿದರು. ಕುಬುಸ ತೊಡಲು ನಿರಾಕರಿಸಿದ ಮುದುಕಿ ಎಲ್ಲರಬೇಕೋ ಅಲ್ಲಿರುವುದೇ ವಾಸಿ ಎಂದು ಬಗೆದರು".[೨೫] ಅನಂತರ ಆ ಮುದುಕಿಯನ್ನು ವಡ್ಡಟ್ಟಿಗೆ ಕರೆದುಕೊಂಡು ಹೋಗಿ ಬಿಟ್ಟುಬರಲು ಗಂಡ ವಡವಟನನ್ನು ಕಮಲ ಮುದುಕಿಯ ಜೊತೆ ಕಳುಹಿಸುತ್ತಾಳೆ. "ಇಲ್ಲಿ ಕುಬುಸವನ್ನು ತೊಡಲೊಲ್ಲದ ಅಜ್ಜಿ ನಮ್ಮ 'ಪ್ರಗತಿ', 'ಅಭಿವೃದ್ಧಿ', 'ಆಧುನಿಕತೆ' ಇತ್ಯಾದಿ ಪರಿಕಲ್ಪನೆಗಳಿಗೆಲ್ಲ ದೊಡ್ಡಸವಾಲು. ಆ ಸವಾಲುಗಳನ್ನು ಎದುರಿಸುವುದರಲ್ಲಿ, ಅರ್ಥಮಾಡಿಕೊಳ್ಳುವುದಲ್ಲೂ ವಿಫಲರಾಗಿದ್ದೇವೆ".[೨೬] ಎಂದು ಓ.ಎಲ್.ನಾಗಭೂಷಣಸ್ವಾಮಿ ಹೇಳುತ್ತಾರೆ. ಇದು ಅಕ್ಷರಶಃ ಸತ್ಯ ಎನಿಸುತ್ತದೆ.

ಹೀಗೆ ಈ ಕಥೆಯಲ್ಲಿ ಆಧುನಿಕತೆ ಹಾಗೂ ಸಂಪ್ರದಾಯಗಳ ನಡುವಿನ ಜಗ್ಗಾಟಗಳನ್ನು ಗಮನಿಸಬಹುದು. ತಳವರ್ಗದವರು ತಮ್ಮ ನಂಬಿಕೆ ಸಂಪ್ರದಾಯ, ಆಚರಣೆಗಳ ಕಾರಣದಿಂದಲೂ ಮೇಲ್ವರ್ಗದವರ ಅಪಹಾಸ್ಯಕ್ಕೆ ಒಳಗಾಗಬೇಕಾಗುತ್ತದೆ ಎಂಬುದು ಈ ಕಥೆಯ ವಸ್ತುವಾಗಿದೆ.

ಜಮೀನ್ದಾರಿ ವ್ಯವಸ್ಥೆ ದಲಿತರ ಮೇಲೆ ನಡೆಸುವ ದೌರ್ಜನ್ಯವನ್ನು ಕಥಾವಸ್ತುವಾಗುಳ್ಳ ಕಥೆ 'ಭಗವತಿ ಕಾಡು'. ಈ ಕಥೆಯಲ್ಲಿ ಇಡೀ ಜಮೀನ್ದಾರಿ ವ್ಯವಸ್ಥೆಯ ಸಂಕೇತವಾಗಿ ಕಾಣಿಸಿಕೊಳ್ಳುವ ಶಿವಪೂಜೆ ಕೊಟ್ರಪ್ಪಗೌಡ ಒಮ್ಮೆ ದಲಿತಕೇರಿಗೆ ಹೋದಾಗ ಅಲ್ಲಿ ಭರಮ ಎಂಬುವವನ ಮನೆಯ ಮುಂದಿದ್ದ ಬೇವಿನ ಮರವನ್ನು ನೋಡಿ ತನ್ನ ಲಾಭದ ದೃಷ್ಟಿಯಿಂದ ಅದನ್ನು ಕತ್ತರಿಸಲು ತಂತ್ರ ರೂಪಿಸುತ್ತಾನೆ. ಜಮೀನ್ದಾರಿ ವ್ಯವಸ್ಥೆಗೆ ಹೆದರುವ ದಲಿತಕೇರಿಯ ಜನರಲ್ಲಿ ಒಬ್ಬನಾದ ಭರಮನನ್ನು ಕರೆಯಿಸಿ ನೂರರ ಗರಿಗರಿ ನೋಟುಗಳನ್ನು ತೋರಿಸುತ್ತಾನೆ. ಆತನ ಮೇಲೆ ಎಂದಿಲ್ಲದ ಪ್ರೀತಿಯನ್ನು ತೋರಿಸಿ "ತನ್ನಪ್ಪಟ್ಟೇಲಿ ಹುಟ್ಟಿದ

ಮೊಗ ಬೇರೆ ಅಲ್ಲ . . . ನೀನು ಬ್ಯಾರೆ ಅಲ್ಲ"[೨೭] ಎಂದು ಹೇಳಿ ಭರಮನನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾನೆ. ಹಣದ ಆಮಿಷಕ್ಕೆ ಒಳಗಾಗಿ ಭರಮ, ಗೌಡ ರೂಪಿಸಿದ ತಂತ್ರಕ್ಕೆ ತನ್ನ ಮನೆಯ ಮುಂದಿದ್ದ ಬೇವಿನ ಮರವನ್ನು ಕಡಿಯಲು ಅನುಮತಿ ನೀಡಿ, ಇಪ್ಪತ್ತರ ಎರಡು ನೋಟುಗಳನ್ನು ಮುಂಗಡವಾಗಿ ಪಡೆದುಕೊಳ್ಳುತ್ತಾನೆ. ಮತ್ತೊಂದೆಡೆ ಭರಮನ ಹೆಂಡತಿ ನಾಗವ್ವಾ ಹಾಗೂ ಆಕೆಯ ಅತ್ತೆ 'ಸೆವುಡವ್ವಾ' ಇಬ್ಬರೂ ಸಣ್ಣಪುಟ್ಟ ಕಾರಣಗಳಿಗೂ ಜಗಳವಾಡುತ್ತಿರುತ್ತಾರೆ. ಪ್ರತಿನಿತ್ಯ ನಡೆದುದೆಲ್ಲವನ್ನೂ ಸೆವುಡವ್ವಾ ಮಗ ಭರಮ್ಯಾ ಬಂದ ಮೇಲೆ ಹೇಳುತ್ತಿರುತ್ತಾಳೆ. ಆತನಿಗೆ ಮನೆ ನರಕ ಸದೃಶವಾಗಿರುತ್ತದೆ. ಯಾಕಾದರೂ ಮನೆಗೆ ಬಂದೆನೋ ಎಂಬುವಷ್ಟರ ಮಟ್ಟಿಗೆ ಅತ್ತೆ ಸೊಸೆ ಜಗಳ ಮಾಡುತ್ತಿರುತ್ತಾರೆ. ಆದರೆ ತಮ್ಮ ಕುಟುಂಬಕ್ಕೆ, ಸಂಪ್ರದಾಯಕ್ಕೆ ಧಕ್ಕೆ ಒದಗುತ್ತಿದೆ ಎಂದು ಗೊತ್ತಾದ ತಕ್ಷಣ ಇಬ್ಬರೂ ಒಗ್ಗಟ್ಟಾಗಿ ಆ ಸನ್ನಿವೇಶವನ್ನು ಎದುರಿಸಲು ಟೊಂಕಕಟ್ಟಿ ನಿಲ್ಲುತ್ತಾರೆ. ಆ ಸನ್ನಿವೇಶವೆಂದರೆ ಶಿವಪೂಜೆ ಕೊಟ್ರಪ್ಪಗೌಡ ಭರಮನಿಗೆ ಮುಂಗಡ ಹಣಕೊಟ್ಟ ಮಾರನೆಯ ದಿನ ಬೇವಿನಮರವನ್ನು ಕಡಿಯಲು ಆಳುಗಳನ್ನು ಕಳುಹಿಸಿದಾಗಿನ ಚಿತ್ರಣ. ಆಗ ಅತ್ತೆ, ಸೊಸೆಯರು ಮಾತ್ರವಲ್ಲದೆ ಇಡೀ ದಲಿತ ಕೇರಿಯ ಜನ ಬೇವಿನ ಮರವನ್ನು ಕಡಿಯುವುದು ವಿರೋಧಿಸುತ್ತಾರೆ. ಏಕೆಂದರೆ ಆ ಬೇವಿನ ಮರ ಅವರಿಗೆ ದೇವರಿದ್ದ ಹಾಗೆ ಹಾಗೂ ಕಥೆಯ ಆರಂಭದಲ್ಲಿ ಹೇಳುವ ಹಾಗೆ "ಮನೆಯ ಅಂಗಳಕ್ಕೇಕೆ ಇಡೀ ಕೇರಿಗೇ ಒಡವೆ ತೊಡಸಿದಂತಿರುವ"[೨೮] ಎಂಬ ಮಾತು ಆ ಬೇವಿನ ಮರದ ಮಹತ್ವವನ್ನು ತಿಳಿಸುತ್ತದೆ. ಅಂತಹ ಬೇವಿನ ಮರದಿಂದ ಕೆಳಕ್ಕಿಳಿಬಿದ್ದಿರೋ ಕೊಂಬೆಗೆ ಹಗ್ಗದಿಂದ ತೊಟ್ಟಿಲು ಕಟ್ಟಿ ಮಗುವನ್ನು ತೂಗಬೇಕೆಂಬ ಯೋಚನೆಯಲ್ಲಿದ್ದ ನಾಗವ್ವನಿಗೆ ಆ ಮರದ ಮೇಲೆ ಗೌಡ ಕಣ್ಣು ಹಾಕಿರುವ ವಿಷಯ ತಿಳಿದಾಗ ಕುಪಿತಗೊಳ್ಳುತ್ತಾಳೆ.

ಆ ಬೇವಿನ ಮರವನ್ನು ಕಡಿಯುವುದನ್ನು ತಡೆಯಲು ಇಡೀ ದಲಿತ ಕೇರಿಯ ಜನ ಇಚ್ಛಿಸುತ್ತಾರೆ. ಆದರೆ ನೇರವಾಗಿ ಅದನ್ನು ತಡೆಯುವ ಧೈರ್ಯವನ್ನು ಯಾರೊಬ್ಬನೂ ಮಾಡುವುದಿಲ್ಲ. ಕಾರಣ ಗೌಡರ ಬಗೆಗಿನ ಹೆದರಿಕೆಯಿಂದ. ಭರಮ್ಯನ ತಾಯಿ ವಿಷಯ ತಿಳಿದಾಕ್ಷಣ. ಆಕೆ "ಹೆತ್ತಾರೆ ಬ್ಯಾರೆ ಅಲ್ಲ .... ಆ ಮರ ಬ್ಯಾರೆ ಅಲ್ಲ .... ಕೇರ್ಯಾಗ

ಒಂದೋಳ್ಳೇದ್ಕೂ ಆ ಮರಬೇಕು .... ಒಂದು ಕ್ಯೆಟ್ಟದ್ಕೂ ಆ ಮರಬ್ಯೇಕು .... ಅದು ಬರೀ ಬೇವಿನ ಮರ ಅಲ್ಲಲೋ .... ಅದ್ರಾಗ ಚವುಡವ್ವಾ ಮನೆಮಡ್ಕೋಂಡಾಳೇ . . . . ಅಂಥಾದಕ್ಕೆ ಕೊಡ್ಲಿ ಬುದ್ರೆ, ನರಮನುಸ್ರು ಬೊದ್ಕಿ ಉಳ್ದಾರಾ .... ಬ್ಯಾಡಾ .... ಬೊರ್ಲಿ .... ಅದಾವನು ಬರ್ತಾನೆ .... ನ್ವಾಡೇ ಬುಡ್ತೀನಿ .... ಯಲೇ ನಾಗಿ .... ನೀನು ತಳಾರ ಅನುಮಂತ್ಗೆ ಪುಟ್ಟಿದ್ ಮೊಗ್ಳಾಗಿದ್ರೆ ಆ ಮರಾನ ಉಳಿಸ್ಗೆಂತಿ ....”[೨೯] ಎಂದು ಕಿಡಿಕಾರುತ್ತಾಳೆ. ಈ ಮಾತುಗಳಲ್ಲಿ ಆ ಮುದುಕಿ ಮರದ ಮೇಲಿಟ್ಟಿದ್ದ ಪ್ರೀತಿ, ನಂಬಿಕೆ ವ್ಯಕ್ತವಾಗುವುದರ ಜೊತೆಗೆ ಸೊಸೆ ನಾಗವ್ವನನ್ನು ಜಾಗೃತಗೊಳಿಸುವ ಅಂಶ ಅಭಿವ್ಯಕ್ತಗೊಂಡಿದೆ.

ಇದಾದ ನಂತರ ಇಡೀ ಕೇರಿಯ ಜನ ಎದೆಗುಂದದೆ ಪ್ರತಿಭಟನೆ ತೋರುತ್ತಾರೆ. ಮರಕಡಿಯಲು ಬಂದವರನ್ನು ಆ ಮುದುಕಿ “ಬಾಡ್ಕಾವ್ ಸೂಳ್ಯಾಮಕಾ ನೀವು ಗಂಡುಸ್ರಾಗಿದ್ರೆ ಮರಾನ ಮುಟ್ಟೇರಿ”[೩೦] ಎಂದು ಓಡಿ ಹೋಗಿ ಮರದ ಬೊಡ್ಡೆ ಏರಿ ಅಬ್ಬರಿಸುತ್ತಾಳೆ. ಇಡೀ ಶೂದ್ರ ಸಮುದಾಯದ ಇಚ್ಛಾಶಕ್ತಿಯೇ ಮರದ ರೂಪತಾಳಿ ನಿಂತಿರುವುದನ್ನು ನೋಡುತ್ತಾ ಪಿಳಿಪಿಳಿ ಕಣ್ಣುಬಿಡುತ್ತಾ ನಿಂತಿದ್ದ ಆ ಜನರ ನಡುವಿನಿಂದ ಹಾಡುಹಾಡುತ್ತಾ, ಕುಣಿಯುತ್ತ ನುಗ್ಗಿ ಬಂದಳು. ಅಷ್ಟರಲ್ಲಿ ನಾಗವ್ವಳ ಮ್ಯೆಯಲ್ಲಿ ಚೌಡವ್ವದೇವಿ ಹೊಕ್ಕಿತ್ತಾಳೆ. ಅವಳು ಬಾಯಲ್ಲಿ ಉರಿಯುತ್ತಿದ್ದ ಕರ್ಪೂರವನ್ನು ಇಟ್ಟುಕೊಂಡು ನುಂಗಿದುದನ್ನು ನೋಡಿ ಗೌಡ ಇದು ನಾಟಕವಲ್ಲವೆಂದು ತಿಳಿಯುತ್ತಾನೆ. ಪಾದಕ್ಕೆರಗಿದ ಗೌಡನ ಬೆನ್ನ ಮೇಲೆ ಕಾಲಿಟ್ಟು ಪೀಸಿರಂಗಣ್ಣನ ಹಾಗೂ ಭರಮ್ಯಾ ಮುಂತಾದವರನ್ನು ಓಡಿಸಿಕೊಂಡು ಬಹುದೂರ ಹೋಗುತ್ತಾಳೆ. “ಸಂತೋಷದಿಂದ ಗಾಳಿಗೆ ಸಮಸ್ತ ಅಂಗೋಪಾಗಾಂಗ ಮಿಸುಕಾಡಿಸಿದ ಬೇವಿನ ಮರವ ಮೇಲೆ ಪಕ್ಷಿಗಳು ಕುಣಿದು ಕುಪ್ಪಳಿಸಿದವು” ಎಂಬ ವಾಕ್ಯದೊಡನೆ ಕಥೆ ಮುಕ್ತಾಯವಾಗುತ್ತದೆ.

ಅಡಿ ಟಿಪ್ಪಣಿ :

೧. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೧೮

೨. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೧೮

೩. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೮೮

೪. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೮೯ – ೯೦

೫. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೯೦

೬. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೯೧

೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೯೧

೮. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೯೧

೯. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೦

೧೦. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೨

೧೧. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೨

೧೨. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೨

೧೩. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೩

೧೪. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೩

೧೫. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೭

೧೬. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೬೭

೧೭. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೩೯

೧೮. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೪೨

೧೯. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೪೩

೨೦. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೪೫

೨೧. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೪೫

೨೨. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ ಕ್ರೈಸ್ತ ಕಾಲೇಜು; ಕನ್ನಡ ಸಂಘ, ಬೆಂಗಳೂರು. [೨೦೦೭] ಪುಟ ೧೪೬

೨೩. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ಧಾರವಾಡ, [೨೦೦೨] ಪುಟ ೮

೨೪. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ಧಾರವಾಡ, [೨೦೦೨] ಪುಟ ೧೨

೨೫. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ಧಾರವಾಡ, [೨೦೦೨] ಪುಟ ೧೯

೨೬. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು. [೨೦೦೭] ಮುನ್ನುಡಿ ಪುಟ IX

೨೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೧೮

೨೮. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೧೯

೨೯. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೪೦

೩೦. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೪೧

ಅಧ್ಯಾಯ ೫

ಆಂಧ್ರ ಕಥೆಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷ

ಆಯ್ದ ಕಥೆಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷ

ಬಂಡಾಯ ಕಥೆಗಾರರಲ್ಲಿ ಅತ್ಯಂತ ಪ್ರಮುಖ ಕಥೆಗಾರರಾದ ಕುಂವೀ ಅವರ ಕಥಾಲೋಕ ಕೆಳಜಾತಿಯ ಜನರ ಭೀಕರ ಲೋಕದ ಪರಿಚಯವನ್ನು ಒಳಗೊಂಡಿದ್ದು, ಬಳ್ಳಾರಿ ಗಡಿಭಾಗದ ಭಾಷೆಯ ಬಳಕೆಯಿಂದ ತಮ್ಮ ಕಥೆಗಳ ಸಂವಹನವನ್ನು ಹೆಚ್ಚು ಮಾಡಿಕೊಂಡಿರುವ ಕುಂವೀ ಕನ್ನಡ ಪರಂಪರೆಯ ಶಕ್ತಕಥೆಗಾರರಲ್ಲಿ ಒಬ್ಬರು. ಜಮೀನ್ದಾರಿಲೋಕದ ಅನೇಕ ಮಾದರಿಗಳನ್ನು ಹೇಳುವುದರ ಜೊತೆಗೆ ಕೆಳವರ್ಗದ ಆರ್ಥಿಕ, ಸಾಮಾಜಿಕ ಸ್ಥಿತಿಗಳು ಆ ಜನರ ಬದುಕನ್ನು ಮಾನವತೆಯೆ ಇಲ್ಲದೆ ಕಳೆದುಕೊಂಡಿರುವ ಕಡೆಗೆ ಕೊಂಡೊಯ್ಯುವ ಸತ್ಯವನ್ನು ಹೇಳುತ್ತದೆ. ಸಮಾಜದ ನಿರ್ಲಕ್ಷಿತ ಜನರ ಜೀವನವನ್ನು ಅವರಷ್ಟು ಸಮೀಪದಿಂದ, ವಿಶಾಲವಾಗಿ, ಹಾಗೂ ಆಳವಾಗಿ ನೋಡಿದವರು ಅವರ ಸಮಕಾಲೀನರಲ್ಲಿ ತೀರ ವಿರಳ. ದಟ್ಟವಾದ ಅನುಭವ, ಸೂಕ್ಷ್ಮ ವಿವರಗಳಿಂದ ಕೂಡಿದ ನಿರೂಪಣೆ, ಭಾಷೆಯ ಮೂಲಕವೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಇವುಗಳು ಕುಂವೀ ಅವರ ವೈಶಿಷ್ಟ್ಯ.

ಕುಂವೀ "ನವೋತ್ತರ ಕನ್ನಡ ಕಥೆಗಾರರಲ್ಲಿ ಮುಖ್ಯರಾದವರು. ಬಂಡಾಯ ಸಾಹಿತ್ಯ ಚಳುವಳಿಯೊಂದಿಗೆ ನೇರವಾಗಿ ತಮ್ಮನ್ನು ತೊಡಗಿಸಿಕೊಂಡವರು. ಇವರ ಕಥೆಗಳಲ್ಲಿ ವ್ಯಕ್ತವಾಗುವ ಜಾತಿ, ಅಸ್ಪೃಶ್ಯತೆ, ವರ್ಗ ತಾರತಮ್ಯದ ಸ್ವರೂಪ, ಸಂಪ್ರದಾಯಗಳ ನಡುವಿನ ಸಂಘರ್ಷ, ಅವರು ಕಂಡಿರಿಸುವ ಮಹಿಳಾ ಪಾತ್ರ ಚಿತ್ರಣ ಹಾಗೂ ಎಲ್ಲಾ ಬಗೆಯ ಕ್ರೌರ್ಯಗಳ ನಡುವೆ ಉಂಟಾಗುತ್ತಿರುವ ಅಕ್ಷರದ ಬಗೆಗಿನ ಒಲವು ಈ ಕಾರಣದಿಂದ ಪಲ್ಲಟವಾಗುತ್ತಿರುವ ಸಮಾಜ, ಅದರ ಸಂಘರ್ಷ, ಮುಂತಾದವುಗಳು ಅವರ ಕಥೆಗಳಲ್ಲಿ ಗಮನ ಸೆಳೆಯುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಆಯ್ದ ಕಥೆಗಳಲ್ಲಿ ಇವುಗಳ ಸ್ವರೂಪವನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಸ್ವಾತಂತ್ರ್ಯ ನಂತರದ ಭಾರತದಲ್ಲಿ ದಲಿತರ ಬದುಕನ್ನು ಇಷ್ಟೊಂದು ದುಸ್ತರವಾಗಿದೆಯೆಂದು ಆಶ್ಚರ್ಯ ಪುಟ್ಟಿಸುವ ಘಟನೆಗಳು ಕುಂವೀ ಅವರ ಕಥೆಗಳಲ್ಲಿ

ಹಾಸುಹೊಕ್ಕಾಗಿವೆ. ಭಾರತದಂತಹ ರೋಗಗ್ರಸ್ಥ ಸಮಾಜದಲ್ಲಿ ಜಾತಿ ವ್ಯವಸ್ಥೆ, ಬಡತನ, ದಾಸ್ಯ ಪ್ರವೃತ್ತಿ, ಮೌಢ್ಯದ ಪರಾಕಾಷ್ಟೆಗಳು ಹೇಗೆ ಜಾತಿ ಮತ್ತು ವರ್ಗ ತಾರತಮ್ಯವನ್ನು ಉಂಟು ಮಾಡುತ್ತವೆ ಮತ್ತು ಶಾಶ್ವತಗೊಳಿಸುತ್ತವೆ ಎಂಬುದನ್ನು ಕುಂವೀ ಕಥೆಗಳು ಸಹಜವಾಗಿಯೇ ಹೇಳುತ್ತವೆ. ಜೊತೆಗೆ ಇಲ್ಲಿನ ಬಹುತೇಕ ಪಾತ್ರಗಳು ಕೆಳಜಾತಿ, ಕೆಳವರ್ಗಗಳು ಜೀತಗಾರರ ಅಸಹಾಯಕತೆ, ತಮ್ಮನ್ನು ತಾವು ಮಾರಿಕೊಂಡಿರುವ ಸ್ಥಿತಿಗಳನ್ನು ಕಥೆಗಳಲ್ಲಿ ಕಾಣಬಹುದು.

'ಶುಲ್ಕ' ಕಥೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಹುಡುಗ ಅಶೋಕನನ್ನು ಕಾಣಬಹುದು. ಕುಂವೀಗೆ ಕೇವಲ ಕೆಲವು ಜಾತಿಗಳ ಬಗ್ಗೆ ಮಾತ್ರ ಬರೆಯುವ ಹವ್ಯಾಸವಿದೆ ಎಂದು ವಾದಿಸುವವರು ಉಂಟು ಆದರೆ ಕುಂವೀ ಅವರು ಶೋಷಿತರ ಪರವಾದ ಧ್ವನಿ ಎಂದು ಅವರ ಕತೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಇವರು ಕಥೆಗಳಲ್ಲಿ ದೈಹಿಕವಾಗಿ, ಮಾನಸಿಕವಾಗಿ ಶೋಷಿತರಾಗಿರುವ ಶೋಷಿತರ ಬದುಕು ಭಾವುಕತೆಯನ್ನು ಪಡೆದುಕೊಳ್ಳದೆ ಎಚ್ಚರಿಕೆಯಿಂದ ಅದನ್ನು ನಿರ್ವಹಿಸುವ ರೀತಿ ಅಚ್ಚರಿಗೊಳಿಸುತ್ತದೆ. ಶೋಷಿತರು ತಾವು ಮಾಡದ ತಪ್ಪಿಗೆ ತಲೆತಲಾಂತರಗಳಿಂದ ಶೋಷಣೆಗೆ ಒಳಗಾಗಿರುವುದುರ ಮೂಲಕ ಶಿಕ್ಷೆ ಅನುಭವಿಸುತ್ತಿರುವ ಪಾತ್ರಗಳಾಗಿದ್ದಾರೆ, ಸ್ವಾತಂತ್ರ್ಯ ನಂತರದ ಭಾರತದ ಸುಧಾರಣೆಗಳು ದೀನದುರ್ಬಲರಿಗೆ, ವಂಚಿತರಿಗೆ ತಲುಪಿಲ್ಲವೆಂದು ಪ್ರಗತಿಶೀಲ ಸಾರುತ್ತದೆ. ಮನುಷ್ಯನು ಬದುಕುತ್ತಿರುವ ಕನಿಷ್ಠತಮ ಬದುಕು ಪ್ರಾಣಿಪಕ್ಷಿಗಳಿಗಿಂತಲೂ ಹೀನಾಯವಾಗಿರುವುದನ್ನು ಕಾಣಬಹುದು. ಭಾರತೀಯರಲ್ಲೇ ಅವಕಾಶಹೀನ ಜನತೆ ಅಭಿವೃದ್ಧಿ ಕಾಣಬೇಕಾದರೆ ಇನ್ನಷ್ಟು ಶತಮಾನಗಳು ಬೇಕು ಎಂದು ಓದುಗರಿಗೆ ಅನಿಸುತ್ತದೆ. ಕುಂವೀ ಅವರ ಈ ಆಯ್ದ ಆರು ಕಥೆಗಳ ಮೂಲಕ ಈ ಅಂಶಗಳನ್ನು ಚರ್ಚಿಸಬಹುದು.

'ದೇವರ ಹೆಣ' ಕಥೆಯಲ್ಲಿನ ಹಸಿವಿಗೆ ಈ ವ್ಯವಸ್ಥೆಯಲ್ಲಿ ಉತ್ತರವಿಲ್ಲ. ಇಲ್ಲಿ ಜಾತಿಯ ಕಾರಣಕ್ಕಾಗಿ ಅಸ್ಪೃಶ್ಯರಾಗಿರುವವರು ತಮ್ಮ ಪಾರಂಪರಿಕ ಹಕ್ಕನ್ನು ಒತ್ತಾಯಿಸುವ ಹಾಗೂ ಹಸಿವನ್ನು ನೀಗಿಸಿಕೊಳ್ಳಲು ಪರ್ಯಾಯ ಮಾರ್ಗವನ್ನು ರೂಪಿಸಿಕೊಳ್ಳುವ ವಸ್ತುವನ್ನು

ಒಳಗೊಂಡಿದೆ. ಈ ಕಥೆ ಕಾನೂನು ಕಟ್ಟಳೆಗಳು ಪಸಿವಿಗೆ ಅನ್ನ ಹಾಕಲಾರವು ಎಂಬುದನ್ನು ಹೇಳುತ್ತದೆ. ಈ ಕಥೆಯಲ್ಲಿ ಬರುವ ಶೊಣ್ಣಿಯು ಕೂಡ ಕುಂವೀ ಅವರ ಉಳಿದ ಕಥಾ ನಾಯಕರಂತೆ ಪಸಿವಿನಿಂದ ಬಳಲಿ ಕಂಗಾಲಾಗಿರುವ ಮಾದಿಗರ ಜಾತಿಯವನು. ಈಗ ಬೇರೆ ಬರಗಾಲದ ಪರಿಣಾಮವಾಗಿ ಇನ್ನಷ್ಟು ಪಸಿದು ಕಂಗಾಲಾಗಿದ್ದಾನೆ. ತನ್ನ ಊರ ಗೌಡನ ಮನೆಯ ಎತ್ತು ರೋಗದಿಂದ ನರಳುತ್ತಿದೆಯೆಂದು ತಿಳಿದ ಕ್ಷಣವೆ ಪರಮಾತ್ಮನು ನಮ್ಮ ಕಷ್ಟ ನೋಡಲಾರದೆ ಈ ರೀತಿಯಾಗಿ ಸಹಾಯ ಮಾಡುತ್ತಿದ್ದಾನೆಂದು ಭಾದಿಸುವ ಶೊಣ್ಣಿ ಎತ್ತು ಸತ್ತದು ತಿಳಿದ ಕೂಡಲೆ ಗೌಡರ ಮನೆಗೆ ಬರುತ್ತಾನೆ. ಇದು ಅವನಿಗೆ ಹಸಿವನ್ನು ನೀಗಿಸಿಕೊಳ್ಳಲು ಒಂದು ಪರ್ಯಾಯ ಮಾರ್ಗದಂತೆ ಕಾಣುತ್ತದೆ. ಸತ್ತ ಪ್ರಾಣಿಗಳನ್ನು ಸಾಗಿಸುವ ಹಕ್ಕು ಮಾದಿಗನಾದ ತಮ್ಮ ಹಕ್ಕು ತಾನೇ ಮುಂದೆ ಬಂದು "ಗೋಡ್ರೆ ದೇವ್ರ ಎಣಾ ತುಂಬಿದ ಮನ್ಯಾಗ ಬಾಳವತ್ತಿರೋದು ನಂಗ್ಯಾಕೋ ಬೇಷಿ ಕಾಣುವಲ್ದು .... ತಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆಕೊಡ್ರಿ ಧಣಿ .... ಒಯ್ದುಬುಡ್ತೀನಿ"[೧]. ಕುಂದೀ ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು ಪುಟ–೬೨ ಎಂದು ಗೋಗರೆದು ಕೇಳುವುದು ಅವನ ಹಸಿವಿನ ಭೀಕರತೆಯನ್ನು ಸೂಚಿಸುತ್ತದೆ. ಶೊಣ್ಣಿಯು ಗೌಡರ ಮನೆಯಲ್ಲೇ ಜೀತಗಾರನಾಗಿದ್ದ. ಈತ ತಾನೇ ಸ್ವತಃ ಗೌಡರ ಜೊತೆ ಜಾತ್ರೆಗೆ ಹೋಗಿ ಎತ್ತುಗಳನ್ನು ತಂದು ಅವುಗಳನ್ನು ಸಾಕಿ ಸಲಹಿದ್ದ ಪರಿಯನ್ನೆಲ್ಲ ಹೇಳುತ್ತಲೆ ಗೌಡ ತನ್ನ ಮೇಲೆ ಕನಿಕರಿಸಲಿ ಎಂದು ಭಾವಿಸಿದ. ಆದರೆ, ಗೌಡರಿಗೆ ಈತನ ಮಾತನ್ನು ಕೇಳಿ ಒಮ್ಮೆಗೆ ಸಿಟ್ಟು ಬರುತ್ತದೆ. ಸತ್ತು ಹೋಗಿರುವ 'ದೇವರನ್ನು' ಹೂಳಬೇಕೆಂಬುದು ಅವರ ನಿರ್ಧಾರದ ಹಾಗೂ ಮಾದಿಗರು ಅದನ್ನು ತಿನ್ನುವುದರಿಂದ ತನಗೆ ಪಾಪ ಬರುತ್ತದೆ ಎಂಬ ಪಾಪಪ್ರಜ್ಞೆ ಅವರಲ್ಲಿ ಕಾಣುತ್ತದೆ. ಹಾಗಾಗಿ ಮನೆಯಲ್ಲಿ ಸತ್ತಿರೋದು ಕತ್ತೆ ಅಲ್ಲ ಅದು ಎತ್ತು ಹಾಗಾಗಿ ನಿನಗೆ ಕೊಡಲು ಆಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದಾಗ ಶೊಣ್ಣಿ ಭೀಕರ ಹಸಿವನ್ನು ನೆನೆಪಿಸಿಕೊಂಡು ದುಃಖಿತನಾಗುತ್ತಾನೆ. ಆಗ ಶೊಣ್ಣಿ "ತಿಳ್ದೋರೆ ಇಂಗಂದ್ರೆ ಮನೆ ಮಾದಿಗ್ರು .... ನಾವೆತ್ಲಾಗೆ ಒಗ್ಬೇಕು ಧಣಿ, ನಿಮ್ಮೆಂಜ್ಲು ತಿನ್ನೋ ಅಕ್ಕೈಲತಿ ಕೇಳ್ತೀವಿ .... ಓಗ್ಲಿನಿಂ ಪಾದಕ್ಕೆ ಒಂದ್ಜೆತಿ ಚಮ್ಡಾ ಮಾಡ್ಕೊಡ್ತೀನಿ .... ದೇವ್ರ ಎಣ ಕ್ವಡ್ರಿ"[೨] ಎಂಬುದಾಗಿ ಆದೇಶದಿಂದಲೇ ಕೇಳಿಯೇ ಬಿಡುತ್ತಾನೆ. ಈ ಮಾತು ಒಂದು ಜನಾಂಗದ ಚರಿತ್ರೆಯನ್ನೇ ಹೇಳುತ್ತದೆ. ಸತ್ತ

ಎತ್ತಿನ ಚರ್ಮವನ್ನು ಮಾರುವ ಮೂಲಕ ಹಣ ಹಾಗೂ ಅದರ ಮಾಂಸದಿಂದ ಹಸಿವು ಹಿಂಗುತ್ತದೆ ಎನ್ನುವುದು ಆತನ ಪ್ರಬಲವಾದ ಆಸೆಯಾಗಿದೆ. ಹಾಗಾಗಿ ಕೊಣ್ಣೆ ಗೌಡರನ್ನು ಮತ್ತೆ ಮತ್ತೆ ಕೇಳುತ್ತಾನೆ. ಆದರೆ ಪ್ರೀತಿಯಿಂದ ಸಾಕಿದ್ದ ಎತ್ತನ್ನು ಹೂಳಲು ಗೌಡ ನಿರ್ಧರಿಸಿರುತ್ತಾನೆ. ಈ ಪ್ರಸಂಗದಲ್ಲಿ ಒಬ್ಬರಿಗೆ ಅನಿವಾರ್ಯವಾಗಿ ಆಹಾರವಾಗಿರುವುದು ಹೇಗೆ ಇನ್ನೊಬ್ಬರಿಗೆ ಪವಿತ್ರವಾಗಿರುತ್ತದೆ ಎಂಬ ಬದುಕಿನ ಸಮಾಜದ ವೈರುಧ್ಯಗಳನ್ನು ಲೇಖಕ ನಿರೂಪಿಸುತ್ತಾನೆ. ಇದೊಂದು ಚಾರಿತ್ರಿಕ ಸಂಗತಿಯಾಗಿದೆ. ಕೊಣ್ಣೆಗೆ ಸತ್ತ ಎತ್ತಿನ ಮಾಂಸ ತಿನ್ನುವುದು ಹಾಗೂ ಅದರ ಚರ್ಮವನ್ನು ಸುಲಿದು ಮಾರುವುದು ಅವನ ಹಕ್ಕು ಎಂದು ಸಮಾಜವೆ ಮಾಡಿದೆ. ಅದೇ ಸಮಾಜ ಈಗ ಸತ್ತ ಆ ಎತ್ತನ್ನು ಕೊಡಲು ನಿರಾಕರಿಸುತ್ತದೆ. ಯಾಕೆಂದರೆ ಅದು ಗೌಡನ ನಂಬಿಕೆ ಸಂಬಂಧಿಸಿದ ವಿಚಾರವಾಗಿದೆ. ಹಾಗಾಗಿ ಗೌಡರು ಎತ್ತಿನ ಹೆಣವನ್ನು ಕೊಡದೆ ಹೂತು ಬರುತ್ತಾರೆ. ಆದರೆ ಹಸಿವಿನಿಂದ ಬಳಲುತ್ತಿದ್ದ ಕೊಣ್ಣೆ ಸುಮ್ಮನಿರಲಿಲ್ಲ. ಹೆಣವನ್ನು ಸಮಾಧಿಯಿಂದ ಹೊರತೆಗೆಯಲು ನಿರ್ಧರಿಸುತ್ತಾನೆ. ಕಥೆಯಲ್ಲಿ ಬರುವ "ಗುದ್ದಿನ ಮೇಲಿದ್ದ ಇಬತ್ತಿ ಉಂಟೆ, ಕಣಗಿಲೆ ಹೂವುಗಳು ಅವನ ಸಲಿಕೆ ಏಟುಗಳಿಗೆ ತತ್ತರಿಸಿ ಹೋದವು. ಮೈಯೊಳಗೆ ದೆವ್ವ ಹೊಕ್ಕಂಡವನಂತೆ ತೋಡೀ ತೋಡೀ ದೇವರ ಹೆಣ ತಲುಪಿದನು. ದೇವರ ಹೆಣದ ಮೂಲೆ ಮೂಲೆ ಮೂಸಿ ಗೆಲುವಾದನು. ದೇವರು ಬದುಕಿರುವ ರೀತಿಯಲ್ಲಿಯೇ ಬೆಚ್ಚಗಿರುವುದು, ಸರಿ. ಅವನು ಮಿಂಚಿನಂತೆ, ಚರಚರ ಅಂತ ದೇವರ ಹೆಣವನ್ನು ಕೊಯ್ಯ ತೊಡಗಿದನು. ಸ್ವಲ್ಪ ಹೊತ್ತಿನಲ್ಲಿ ಕೊಯ್ದು ಕಣ್ಣಿ ಕಣ್ಣಿ ಮಾಂಸವನ್ನು ಪುಟ್ಟಿಗೆ ತುಂಬಿ ಹಸಿ ತೊಗಲನ್ನು ಮಡಚಿ ಹೊತ್ತುಕೊಂಡನು"[೩] ಸಹಜವಾಗಿ ಪ್ರಾಣಿಗಳನ್ನು ತಿನ್ನುವ ದಲಿತರು ಅಥವಾ ಬೇರೆ ಯಾರೇ ಸತ್ತಿರುವ ದನ ಹಾಗೂ ಇತರೆ ಯಾವುದೇ ಪ್ರಾಣಿಯನ್ನು ಒಮ್ಮೆ ಹೂತ ಮೇಲೆ ಹೊರಕ್ಕೆ ತೆಗೆಯುವುದಿಲ್ಲ. ಹಾಗೆ ತೆಗೆದರೆ ಮುಕ್ತಿ ಸಿಗುವುದಿಲ್ಲವೆಂದು ಒಂದು ಕಲ್ಪನೆಯಿದ್ದರೆ, ಇನ್ನೊಂದು ತಾವು ನರಕಕ್ಕೆ ಹೋಗಬೇಕಾಗುತ್ತದೆ ಎಂಬ ನಂಬಿಕೆ. ಹಾಗೆ ನೋಡಿದರೆ ನಂಬಿಕೆಯನ್ನು ನಂಬಿದವರೆಂದರೆ ದಲಿತರು. ಅವರು ನಂಬಿಕೆಯಲ್ಲಿ ನಂಬಿಕೆ ಕಳೆದುಕೊಂಡಿದ್ದರೆ, ಬಹುಶಃ ಈ ಜಗತ್ತು ಎಂದೋ ಬದಲಾಗುತ್ತಿತ್ತು. ಮೇಲಿನ ವಿವರಣೆ ಸ್ವಲ್ಪ ಅವಾಸ್ತವಿಕವಾಗಿಯೇ ಇದ್ದರೂ, ಕಥೆಗಾರ ಹಸಿವಿನ ತೀವ್ರತೆಯನ್ನು, ಭೀಕರತೆಯನ್ನು ಹೇಳಲು ಆಯ್ದುಕೊಂಡಿರುವುದು

ಸರಿಯಾಗಿದೆ ಎನಿಸುತ್ತದೆ. 'ಕಿವುಡ ನಾಯಿಯಾದ ಪ್ರಸಂಗ' ಕಥೆಯಲ್ಲಿಯೂ ಇದೆ ಮಾದರಿಯ ಚಿತ್ರಣವಿದೆ.

ಎತ್ತಿನ ಚರ್ಮವನ್ನು ಮಾರುತ್ತೇನೆಂಬ ನಂಬಿಕೆಯಿದ್ದ ಹಿಂದಿನ ದಿನವೇ ಮುಂಗಡ ಹಣ ಕೇಳಿದ್ದ ಠೊಣ್ಣಿ. ಈ ತರಹ ಎತ್ತಿನ ಚರ್ಮವನ್ನು ಕೊಂಡುಕೊಳ್ಳುವ 'ಕಟುಗರ ದಯಾನಂದಪ್ಪ'ನ ಮನೆಯ ಹತ್ತಿರ ಠೊಣ್ಣಿ ಹೋಗಿ "ದೇವರ ತೊಗಲಿನ ದರ್ಶನ ಮಾಡಿಸಿ ಏಟು ಕ್ವಡ್ತಿಯಪೊ .... ನಿನ್ನೆ' ಕ್ಯೋಳಿದ್ರೆ ಗಂಟಾಕೋರಂಗೆ ಮಾತಾಡ್ದೆ, ಈಗ್ನೋಡು ಎಂಗ್ಯೆತಿ ಎಂದು ಗೆಲವಾಗಿ ನುಡಿದನು. ಇಲ್ಲಿ ಕಥೆಗಾರ ಕುಂವೀ 'ಕಟುಗರ ದಯಾನಂದ' ಎಂಬ ಹೆಸರನ್ನು ಸೂಚಿಸುವುದನ್ನು ನೋಡಿದರೆ ಅದು ವ್ಯಂಗ್ಯದಿಂದ ಕೂಡಿದೆ. ಈತನಿಗೆ ಠೊಣ್ಣಿಯ ಹಸಿವು ಅರ್ಥವಾಗುವುದಿಲ್ಲ. ಬದಲಿಗೆ ಈತನನ್ನು ಹೇಗೆ ತನ್ನ ಅನುಕೂಲಕ್ಕೆ ಬಳಸಿಕೊಳ್ಳಬಹುದು ಎಂದು ಯೋಚಿಸುತ್ತಾನೆ. ಮನೆಯಲ್ಲಿಯೇ ಹಿಂಸೆ ಹಣವನ್ನು ತರುವವನಂತೆ ಹೇಳಿ ಹೋಗಿ, ಗೌಡರಿಗೆ ಎತ್ತಿನ ಸಮಾದಿಯನ್ನು ಕಿತ್ತು ಎತ್ತಿನ ಚರ್ಮವನ್ನು ಸುಲಿದು ಠೊಣ್ಣಿ ತಂದಿರುವುದನ್ನು ಹೇಳುತ್ತಾನೆ. ದಯಾನಂದನ ಮನಸ್ಸಿನಲ್ಲಿ ಐನೂರು ರೂಪಾಯಿ ಸಾಲ ಕೇಳುವುದಕ್ಕೆ ಇದನ್ನು ಬಳಸಿಕೊಳ್ಳಬಹುದು ಎಂದು ನಿರ್ಧರಿಸಿರುತ್ತಾನೆ. ಎತ್ತಿಗೆ ಒದಗಿದ ಈ ಸ್ಥಿತಿಯನ್ನು ಕೇಳಿ ಕುಪಿತರಾದ ಗೌಡರು ಠೊಣ್ಣಿಯನ್ನು ಮಗ ಹಾಗೂ ಆಳುಗಳ ಮೂಲಕ ಕರೆತರಿಸುತ್ತಾರೆ.

ಗೌಡರು ಸಿಟ್ಟಿನಿಂದ ಕೆಕ್ಕರಿಸಿ ನೋಡತೊಡಗಿದ, ಕಂಡ ಮೇಲೂ ಠೊಣ್ಣಿಯ ಎದೆ ಯಾಕೋ ಬಗ್ಗಲೇ ಇಲ್ಲ. "ಎತ್ ಮುಟ್ಟೋವಸ್ಟು ತಾಕತ್ತು ಐತೇನ್ಲೇ ಮೈಯಾಗ? ಅಂತ ಗೌಡರು ಒಂದೇ ಒಂದು ಪ್ರಶ್ನೆ ಕೇಳಿದ್ದಕ್ಕೆ ಠೊಣ್ಣಿ ತಡವರಿಸದೆ ಏತೆಪ್ಪೋ ಐತೆ, ಆಸಗಂಡೂ ಆಸಗಂಡೂ ಏನ್ತಿನ್ಲಿ ಏನ್ಯಡ್ಲಿ ಅನ್ನಂಗಾಗ್ಯೆತಿ"[೫] ಎಂದನು. ಇಲ್ಲಿ ಮೇಲ್ವರ್ಗದ ಗೌಡರ ಮನಸ್ಥಿತಿ ಹಾಗು ಮಾತುಗಳಿಗೂ ಕೆಳವರ್ಗದ, ಹಸಿವಿನಿಂದ ನರಳುತ್ತಿರುವ ಠೊಣ್ಣಿಯ ಮಾತುಗಳ ನಡುವೆ ಜಾತಿ ಸಂಘರ್ಷದ ವಿಚಾರವನ್ನು ಕಾಣಬಹುದು.

ಅನಂತರ ಗೌಡರು ಪೋಲೀಸರಿಗೆ ರೊಟ್ಟನನ್ನು ಹಿಡಿದು ಒಪ್ಪಿಸುವ ಒಪ್ಪಂದ ಮಾಡಿ ಪೋಲೀಸರನ್ನು ಕರೆತರುತ್ತಾರೆ. ಅಲ್ಲಿಗೆ ಬಂದ ಸಬ್‌ಇನ್ಸ್‌ಪೆಕ್ಟರ್ ರೊಟ್ಟನನ್ನು ನೋಡುತ್ತ "ನಿಂಗೆ ಅರ್ಧ್ರಂಗ್ಯಾ ಜೋಲಿಗಾಕಿ ಬುದ್ದಿ ಕಲಿಸ್ತೀನಿ" ಎಂದು ಗದರಿಸಿದಾಗ ರೊಟ್ಟನು ಬೆದರಿಕೆಗೆ ತಕ್ಕಂತೆ ಭಯವನ್ನು ವ್ಯಕ್ತಪಡಿಸದೆ "ದ್ಯಾವ್ರು, ಅರ್ಧ್ರಂಗ್ಯಾಕೆ ಬಿಂದ್ಯಾಕ ಆಟುವು ಬಿಡ್ರಿ ಕಾಲಿಗೆ ಬೀಳ್ತೀನಿ ಬಿಡ್ರಿ" ಎಂದು ಹೇಳಿದ. ಆಗ ಇನ್ಸ್‌ಪೆಕ್ಟರ್ ಹಾಗೂ ಗೌಡ ಇಬ್ಬರೂ ದಿಗಿಲುಗೊಂಡು ಹೌಹಾರುವಂತೆ ಹೇಳುತ್ತಾನೆ. ಕೆಳವರ್ಗ ಎಂಬ ಕಾರಣದಿಂದ ಪೋಲೀಸರಿಗೆ ಹೆದರುತ್ತಾರೆ ಎಂದು ಭಾವಿಸಿದ್ದ ಗೌಡ ಕಕ್ಕಾಬಿಕ್ಕಿಯಾಗುತ್ತಾನೆ. ಇನ್ಸ್‌ಪೆಕ್ಟರ್ ಅಲ್ಲಿಂದ ತಪ್ಪಿಸಿಕೊಳ್ಳಲು, ಇದೊಂದು ಸಾರಿ ಕ್ಷಮಿಸುವುದಾಗಿ ಹೇಳಿದಾಗ ರೊಟ್ಟ ಆವೇಶದಿಂದ "ಅದೆಂಗ್ ಬಿಟ್ ಹೋಗ್ತೀರೋ ನೋಡೇ ಬಿಡ್ತೀನಿ, ಈಗ್ ನನ್ ಕಕೋರ್ಟಂದೊಯ್ಗ್ಲಿಲ್ಲಾಂದ್ರೆ ಇಲ್ಲಿಂತ್ ಮೊದ್ ದೊಡ್ ತಪ್ ಮಾಡ್ತೀನಿ ...." ಎಂದು ಹೇಳಿದಾಗ ಇನ್ಸ್‌ಪೆಕ್ಟರ್‌ನ ಎದೆ ಢವಢವ ಹೊಡೆದುಕೊಳ್ಳುತ್ತದೆ ಎಂಬಲ್ಲಿ ಕೆಳವರ್ಗದವರು ತಿರುಗಿ ಬಿದ್ದರೆ ಮೇಲ್ವರ್ಗದವರೂ ಸಹ ಹೆದರುತ್ತಾರೆ ಎಂಬ ಸತ್ಯವನ್ನು ನಿರೂಪಿಸುವುದರ ಜೊತೆಗೆ ನೋವುಗಳ ಹೊಡೆತ ತಿಂದ ಮನುಷ್ಯ ಪ್ರತಿಭಟಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ ಎಂಬ ಸತ್ಯ ಅಡಕವಾಗಿದೆ. ಕೊನೆಗೆ ರೊಟ್ಟನ ಜೊತೆಗೆ ಬೆಂಬಲವೆಂಬಂತೆ ಆತನ ಕುಟುಂಬದ ಸದಸ್ಯರೆಲ್ಲರು ಅವನಿಗೆ ಬೆಂಬಲವಾಗಿ ನಿಂತಾಗ ಪೋಲೀಸ್ ವ್ಯವಸ್ಥೆಯೇ ಬೆದರುತ್ತದೆ. "ಜೀಪು ಚಾಲೂ ಆಗದಿದ್ದುದು ಕಂಡು ಎಸ್ಸೈ ಹೇಸುಗೂಡು ತಡಬಡವನಂತೆ ಉದ್ವಿಗ್ನನಾಗಿ ಚಡಪಡಿಸುತ್ತ ಡ್ರೈವರ್‌ನ ಮೇಲೆ ಹರಿಹಾಯ ತೊಡಗಿದನು" ಎಂಬ ವಾಕ್ಯ ಜಾತಿಗಳ ನಡುವಿನ ಸಂಘರ್ಷದೇರ್ಪಟ್ಟಾಗ ಹೆದರಿಸಿದರೆ ಹೆದರುವ ಅಧಿಕಾರ ಮದದಿಂದ, ಆರ್ಥಿಕ ಮದದಿಂದ, ಮೇಲ್ಜಾತಿ ಎಂಬ ಮದದಿಂದ ಬೀಗುವ ಸಮಾಜವನ್ನು ಪ್ರತಿಭಟನೆಯ ಮೂಲಕ ಹೆದರಿಸಬಹುದು ಎಂಬುದನ್ನು ಸೂಚಿಸುತ್ತದೆ.

ಜಾತಿ ಸಂಘರ್ಷದ ಚಿತ್ರಣವಿರುವ ಮತ್ತೊಂದು ಕಥೆ 'ರತ್ನ ಎಂಬ ಹುಡುಗಿಯೂ ಯುಗಾದಿ ಎಂಬ ಆಟವೂ' ಎಂಬ ಈ ಕಥೆ ಎರಡು ಮಜಲುಗಳನ್ನು ಹೊಂದಿದೆ. ಒಂದು ಒಂದೇ ಜಾತಿಯ ಒಳಗಡೆ ಇರುವ ಎರಡು ಒಳಪಂಗಡಗಳ ನಡುವೆ ನಡೆಯುವ ಸಂಘರ್ಷ.

ಎರಡನೆಯದು ಮೇಲ್ಜಾತಿಯ ಹುಡುಗ ಶಂಭು ದಲಿತ ಜಾತಿಯ ಹುಡುಗ ಚಪ್ಪಡನ ನಡುವೆ ನಡೆಯುವ ಸಂಘರ್ಷ.

ಮೊದಲಿಗೆ ಈ ಕಥೆಯ ಮೊದಲಿನ ಸ್ತರದಲ್ಲಿ ನಡೆಯುವ ಸಂಘರ್ಷವನ್ನು ನೋಡೋಣ. ವೀರಶೈವ ಧರ್ಮದಲ್ಲಿ ಪುರೋಹಿತಶಾಹಿ ಆಗಿರುವ ಅಯ್ಯನವರು ಅದೇ ಜಾತಿಯ ಒಳಪಂಗಡಗಳ ಮುಗ್ದರನ್ನು ಸಂಪ್ರದಾಯ, ಆಚರಣೆ ನಂಬಿಕೆಗಳ ಹೆಸರಿನಲ್ಲಿ ಶೋಷಣೆ ಮಾಡುತ್ತಾರೆ. ಅದಕ್ಕೆ ಪ್ರತಿಭಟನೆಯೂ ನಡೆಯುತ್ತದೆಂಬುದನ್ನು ಈ ಕಥೆಯಲ್ಲಿ 'ರತ್ನ'ಳ ಮೂಲಕ ಸಾಬೀತುಪಡಿಸಿದ್ದಾರೆ. ಒಂದು ಕಾಲಕ್ಕೆ ಸಿರಿವಂತಿಕೆಯನ್ನು ಅನುಭವಿಸಿದ್ದ ಕೊಟ್ರಪ್ಪಗೌಡನ ಸಂಸಾರ ಆತನ ದುಶ್ಚಟಗಳ ಕಾರಣದಿಂದ ಆಸ್ತಿ ಐಶ್ವರ್ಯವೆಲ್ಲವನ್ನೂ ಕಳೆದುಕೊಂಡು ನಿರ್ಗತಿಕ ಸ್ಥಿತಿಯನ್ನು ತಲುಪಿಸಿರುತ್ತಾರೆ. ಆತ ಮರಣವನ್ನು ಹೊಂದಿರುತ್ತಾನೆ. ಇಂತಹ ಸಂದರ್ಭದಲ್ಲಿ ಕೊಟ್ರಪ್ಪಗೌಡನ ಹೆಂಡತಿ ತಿಪ್ಪವ್ವ ತನ್ನ ಅತ್ತೆ ಹಾಗೂ ಶಂಭು ಮತ್ತು ರತ್ನ ಎಂಬ ಇಬ್ಬರನ್ನು ಸಾಕಬೇಕಾಗುತ್ತದೆ. ಹೀಗಿರುವಾಗ ಒಮ್ಮೆ ಯುಗಾದಿ ಹಬ್ಬವನ್ನು ಆಚರಿಸಬೇಕಾದ ಸನ್ನಿವೇಶವೇರ್ಪಡುತ್ತದೆ. ಆಗ ತಿಪ್ಪವ್ವ ತನ್ನದೆ ಮನೆಯಲ್ಲಿ ದಿನಗೂಲಿಯಾಗಿ ದುಡಿದು, ಈಗ ಬಲಿದನಾಗಿರುವ ಹುಲಿಗೆಪ್ಪನ ಬಳಿ ಸಾಲ ತರುತ್ತಾಳೆ. ಆತ ಕನಿಕರದಿಂದ ಕೇಳಿದಷ್ಟು ಹಣ ಕೊಟ್ಟು ಕಳುಹಿಸುತ್ತಾನೆ. ಆ ಹಣದಿಂದ, ಕೊಟ್ಟೂರು ಸಂತೆಗೆ ಹೋಗಿ ಹಬ್ಬಕ್ಕೆ ಬೇಕಾದ ಸಾಮಾನುಗಳನ್ನು ಕೊಂಡು ತರುತ್ತಾಳೆ. ಹಬ್ಬವನ್ನು ಆಚರಿಸಲು ಏರ್ಪಾಟು ಮಾಡುತ್ತಾಳೆ. ಇಲ್ಲಿ ಶುರುವಾಗುತ್ತದೆ ಸಂಘರ್ಷ.

ಅತ್ತೆ ಹಾಗೂ ಸೊಸೆಯ ನಡುವೆ ಸಣ್ಣಪುಟ್ಟದ್ದಕ್ಕೂ ಜಗಳವಾಗುತ್ತದೆ. ಹೀಗೆ ಹಬ್ಬದ ದಿನ ಆ ಮನೆತನದ ವಾಡಿಕೆಗೆ ಸಂಬಂಧಿಸಿದಂತೆ ಹೋಳಿಗೆಗೆ ಹೂರಣ ರುಬ್ಬುವ ವಿಚಾರಕ್ಕೆ ಸಂಘರ್ಷವೇರ್ಪಡುತ್ತದೆ. ಗುಡಿಸಿಲೊಳಗೆ ಹೂರಣ ರುಬ್ಬಿದ ಕಾರಣದಿಂದ ಆ ಮುದುಕಿ ಹೀಗೆ ಕೂಗಾಡುತ್ತಾಳೆ. "ಅಲಲಲಾ ಚಿನಾಲಿ ಎಂದು ಬಾಯಿ ಬೊಂಬಾಯಿ ಮಾಡೇಬಿಟ್ಟಿತು. ಅಂಗಳದಲ್ಲಿರುವ ದೊಡ್ಡ ಬಂಡೆಗೆ ಹಾಕಿ ರುಬ್ಬುವುದು ಮನೆತನದ ವಾಡಿಕೆಯಂತೆ. ನಾಕು ಜನ ನೋಡಿ ಬಾಯಲ್ಲಿ ಜೊಲ್ಲು ಸುರಿಸುತ್ತಿರಬೇಕಂತೆ . . . . ಹೂರಣದ ಪರಿಮಳ ಇಡೀ

ಓಣಿಗೆ ಪರಡಬೇಕಂತೆ . . . ಕಳ್ಳಗೊಂದು ಪಿಳ್ಳೆನೆವ ಎಂಬಂತೆ, ತರಾಟೆ ತೆಗೆದುಕೊಂಡು ಬಿದ್ದಿತು ಏರುವನಿಯಲ್ಲಿ .... ಇಡೀ ಊರಿಗೆ ಕೇಳಿಸುವಂತೆ"[೧೦] ಎಂಬ ವಾಕ್ಯಗಳಲ್ಲಿ ಪಳೆಯ ಕಾಲದ ವಾಡಿಕೆಯನ್ನು ಈಗಲೂ ಇಂತಹ ನಿರ್ಗತಿಕ ಸ್ಥಿತಿಯಲ್ಲೂ ಕಾಪಾಡಿಕೊಂಡುಹೋಗಬೇಕೆಂಬ ಅಂಶವನ್ನು ಕಾಣಬಹುದು. ತಿಪ್ಪವ್ವ ಹೇಗೋ ಸಾಲಸೋಲ ಮಾಡಿ ಹಬ್ಬ ಆಚರಿಸುತ್ತಿರುವ ವಿಚಾರ ತಿಳಿದೂ ಮುದುಕಿ ಅತ್ತೆ ಎಂಬ ಅಧಿಕಾರವನ್ನು ಚಲಾಯಿಸುವುದರ ಮೂಲಕ ಅತ್ತೆಸೊಸೆಯರ ನಡುವೆ ಸಂಘರ್ಷವೇರ್ಪಡುತ್ತದೆ. ಮತ್ತೆ ಸ್ನಾನ ಮಾಡಿಸುವ ವಿಚಾರದಲ್ಲೂ ಅಷ್ಟೆ. ತಿಪ್ಪವ್ವ "ಯಮ್ಮಾ ಬಾ ಜಳಕ ಮಾಡಿಸುತ್ತೀನಿ" ಎಂದು ಕರೆವಾಗ ಮುದುಕಿ "ಏನ್ಲೀ ನಿನ್ನೆ ಮೊನ್ನೆ ಬಂದೋಳು ಬಿದ್ದಾಡಿ ನೀನು ನನ್ಗೇ ಜಳಕಾ ಮಾಡಿಸ್ತಿಯಾ ಅಲಲಲಾ ಯೇಟು ಧೈರ್ಯಲೇ ನಿಂಗೆ"[೧೧] ಎಂದು ಮುದುಕಿ ಘಂಟಾಘೋಷವಾಗಿ ಯುದ್ಧ ಸಾರುತ್ತಾಳೆ. ಇಲ್ಲಿ ಸೊಸೆಯ ಒಳ್ಳೆಯತನವನ್ನು ಅರಿತುಕೊಳ್ಳದ ಮುದುಕಿಯ ದುಡುಕಿನ ವರ್ತನೆಯನ್ನು ಕಾಣಬಹುದು. ಇಲ್ಲಿ ಹೆಣ್ಣೇ ಹೆಣ್ಣನ್ನು ಶೋಷಿಸುವ ಚಿತ್ರಣವಿದೆ.

ಒಂದೇ ಜಾತಿಯ ಒಳಪಂಗಡಗಳಲ್ಲಿ ನಡೆಯುವ ಸಂಘರ್ಷದ ಚಿತ್ರಣವನ್ನು ಈ ಕಥೆಯಲ್ಲಿ ಕಲಾತ್ಮಕವಾಗಿ ಕುಂವೀ ಚಿತ್ರಿಸಿದ್ದಾರೆ. ವೀರಶೈವ ಧರ್ಮದಲ್ಲಿ ಹಬ್ಬಗಳಿಗೆ ಅಯ್ನೋರ್ನ ಕರೆಸಿ ಭಿನ್ನ ತೀರಿಸೋದು ರೂಢಿಯಾಗಿ ಬಂದಿರುವ ಸಂಪ್ರದಾಯ ಅದರಂತೆ ತಿಪ್ಪವ್ವ ಕುಂಟಕೊಟ್ರಯ್ಯನವರ ಮನೆಗೆ ಹೋಗಿ ಊಟಕ್ಕೆ ಬರಬೇಕು ಬುದ್ಧಿ ಎಂದು ಹೇಳಿ ಬಂದಿದ್ದರು. ಅದರಂತೆ ಅವರನ್ನು ಕರೆತರಲು ತನ್ನ ಮಗ ಶಂಭುವನ್ನು ಕಳುಹಿಸುತ್ತಾಳೆ. ಚಕ್ರವ್ಯೂಹವನ್ನು ಭೇದಿಸಲು ಹೊರಟ ಅಭಿಮನ್ಯುವಿನ ತರಹ ಹೊರಟ ಶಂಭುವನ್ನು ತಡೆದು ತಂಗಿ ರತ್ನ "ಅಣ್ಣೀ–ದೊಡ್ ಸ್ವಾಮ್ಯೋರ್ನ ಕರ್ಕಂಡು ಬರಬ್ಯಾಡ, ಸಣ್ಣಸ್ವಾಮಿ ಕರ್ಕೊಂಬಾ, ಆತಾದ್ರೆ ಅರ್ಧ ಹೋಳಿಗೆ ತಿಂದು ಕೈತೊಳ್ಕೊತ್ತಾನೆ"[೧೨] ಎಂದು ಹೇಳುತ್ತಾಳೆ. ಈ ವಾಕ್ಯದಲ್ಲಿ ಮಕ್ಕಳ ಮನಸ್ಸು ಸಂಪ್ರದಾಯದ ವಿರುದ್ಧ ಪ್ರತಿಭಟನೆಗೆ ಸಿದ್ಧವಾಗುತ್ತಿದೆ ಎಂಬ ಧ್ವನಿವ್ಯಕ್ತವಾಗಿದೆ. ತಂಗಿ ತಾಯಿ ಮಾತಿನಂತೆ ಕೊಟ್ರಯ್ಯ ಅಯ್ನೋರ ಮನೆಗೆ ಹೋದ ಶಂಭು ಅವರ ಕಾಲಿಗೆ ನಮಸ್ಕರಿಸುತ್ತಾನೆ. ತಂಗಿ ರತ್ನಳ ಮಾತು ನೆನಪಾಗಿ ಆತ ದೊಡ್ಡ ಅಯ್ಯೋರ್ನ

ಕರೆಯುವುದಕ್ಕೆ ಬದಲಾಗಿ ತಾನೆ" "ಉಮಾಪತಿ ಸ್ವಾಮಿಯನ್ನ ಕಳಿಸಿಕೊಡುವಂತೆ ಕಳಕಳಿಯಿಂದ ಪ್ರಾರ್ಥಿಸಿಕೊಂಡ ಶಂಭು"[೧೩] ಎಂಬ ವಾಕ್ಯದಲ್ಲಿ ಹೇಗೆ ಮನೆಯವರ ಸಂಪ್ರದಾಯಕ್ಕೂ, ನಂತರದ ಪೀಳಿಗೆಯವರ ಆಧುನಿಕ ಮನಸ್ಥಿತಿಗೂ ನಡುವಿನ ಅಂತರದ ಪರಿಕಲ್ಪನೆಯನ್ನು ಕಥೆಗಾರ ಬಹಳ ಚೆನ್ನಾಗಿ ಒಡಮೂಡಿಸಿದ್ದಾನೆ. ಶಂಭು ಉಮಾಪತಿ ಸ್ವಾಮಿಯನ್ನು ಕಳಿಸಿಕೊಡಿ ಎಂದರೂ ಉಮಾಪತಿ ಬರುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಆತ "ಹತ್ತಾರು ಮನೆಯಲ್ಲಿ ಖಾದ್ಯ ಕತ್ತರಿಸಿ ಅಜೀರ್ಣ ವ್ಯಾದಿಗೆ ತುತ್ತಾಗಿ ಅನ್‌ಲೋಡ್ ಮಾಡಿಕೊಳ್ಳಲಾರಂಭಿಸುತ್ತಲ್ಲ"[೧೪] ಎಂಬಲ್ಲಿ ಈ ಕಡೆ ಹಸಿದು ಹಬ್ಬದ ಊಟಕ್ಕಾಗಿ ಕಾಯ್ದು ಕುಳಿತಿರುವ ರತ್ನ ಒಂದು ಕಡೆಯಾದರೆ ಅಜೀರ್ಣ ರೋಗಕ್ಕೆ ಒಳಗಾಗಿರುವ ಉಮಾಪತಿ ಇನ್ನೊಂದೆಡೆ ಹೇಗೆ ಸಂಘರ್ಷಗಳು ಕಾಣಿಸಿಕೊಳ್ಳುತ್ತವೆ ಎಂಬುದನ್ನು ಇದರ ಮೂಲಕ ಕಾಣಬಹುದು.

ಬಡಕಲು ದೇಹಿಯಾದ ಶಂಕ್ರಯ್ಯ ಊಟಕ್ಕೆ ಕುಳಿತು ಹೋಳಿಗೆ ತಿನ್ನಲು ಮೊದಲು ಮಾಡಿದಾಗಲೇ ರತ್ನ "ದೇವ್ರೆ ಹೋಳಿಗೆಗೆ ಕೈ ತೊಳೆದುಕೊಳ್ಳುವಂತೆ ಮಾಡು ಎಂದು ಪ್ರಾರ್ಥಿಸಿದಳು"[೧೫] ಎಂಬಲ್ಲಿ ರತ್ನಳ ಮನಸ್ಸು ಸಂಘರ್ಷಕ್ಕೆ ಸಿದ್ದವಾಗುತ್ತಿರುವ ಅಂಶವನ್ನು ಸೂಚಿಸುತ್ತದೆ ಪ್ರಾರ್ಥನೆ ಈಡೇರದಿದ್ದರೆ ಈಕೆ ಯಾವುದೇ ತರಹದ ರೋಷ ವ್ಯಕ್ತಪಡಿಸಲೂ ಸಿದ್ದ ಎಂಬುದನ್ನು ಸೂಚಿಸುವಂತಿದೆ. ಈ ಅಂಶ ಕಥೆಯ ಕೊನೆಯಲ್ಲಿ ವ್ಯಕ್ತವಾಗಿರುವುದನ್ನು ನೋಡಬಹುದು. ಆರೋಗಣೆಯಾದ ನಂತರ ಶಂಕ್ರಯ್ಯ "ಚುಟ್ಟದ ಖರ್ಚಿಗೆ ಮೂರು ಪಾವ್ಲಿ ಕೊಡಬೇಕಾವ್ವಾ .... ಇಲ್ಲಾಂದ್ರೆ ಭಿನ್ನತೀರ್‍ಸಿ ಏನು ಸಾರ್ಥಕ"[೧೬] ಎಂದು ಮೊಂಡು ಹಠ ಹಿಡಿಯುತ್ತಾನೆ. ಈ ವಾಕ್ಯಗಳು ಹೇಗೆ ಬಡತನದ ಬೇಗೆಯಲ್ಲಿ ಬೇಯುವವರನ್ನು ಇನ್ನಷ್ಟು ಬೇಯಿಸುವ ಪ್ರಕ್ರಿಯೆ ಮೇಲ್ವರ್ಗದವರಿಂದ ಹೇಗೆ ನಡೆಯುತ್ತದೆ ಎಂಬುದರ ಚಿತ್ರಣವಿದೆ.

ಈಗಾಗಲೇ ಹೇಳಿದ ಹಾಗೆ ಈ ಕಥೆಯ ಮತ್ತೊಂದು ಸ್ತರ ವೀರಶೈವ ಬೀದಿಯ ಶಂಭು ಮತ್ತಿತರ ಸ್ನೇಹಿತರು, ಹಾಗೂ ದಲಿತ ಹುಡುಗನಾದ ಚವುಡನ ನಡುವೆ ನಡೆಯುವಂತಹ ಸಂಘರ್ಷ. ಶಂಭು ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲದ ಕುಟುಂಬಕ್ಕೆ

ಸೇರಿದವನು. ಚವುಡ ಅಸ್ಪೃಶ್ಯ ವರ್ಗಕ್ಕೆ ಸೇರಿದವನಾಗಿದ್ದು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವ. ಈತ ವೀರಶೈವ ಬೀದಿಯ ಹುಡುಗರ ಜೊತೆ ರೈಲಿನ ಆಟ ಆಡುತ್ತಿರುತ್ತಾನೆ. ತನ್ನ ಜೊತೆ ವೀರಶೈವ ಹುಡುಗರು ಆಟಕ್ಕೆ ಸೇರಿಕೊಳ್ಳಬೇಕಾದರೆ ಲಂಚವಾಗಿ ಅವರಿಗೆ ಪೆಪ್ಪರ್‌ಮೆಂಟು ತೆಗೆದುಕೊಡುತ್ತಾನೆ. ಆದರೆ ಶಂಭು ಬಂದು ತನ್ನ ಜಾತಿಯ ಹುಡುಗರಿಗೆ "ಲ್ರೇ ...... ನಾಚ್ಕೆ ಆಗಲ್ಲೇನ್ರಲೇ .... ಎಂಜಲಿಗಾಸೆ ಬಿದ್ದು ಅವನ್ನ ಇಂಜಿನ್ನಂಥ ಒಪ್ಪಿಕೊಂಡೋಗ್ತಿರಲ್ಲ"[೧೭] ಎಂದು ತನ್ನ ಜಾತಿಯ ಹುಡುಗರಿಗೆ ಬೈಯುವುದು ಹಾಗೂ ಚವುಡನನ್ನು ಉದ್ದೇಶಿಸಿ 'ನಿಮ್ ಕೇರ್‍ಯಾಗ ಡಬ್ಬಿಗಳಿಲ್ಲಾಂತ ನಮ್ಮೋಣ್ಯಾಕ ಬಂದೀಯಾ .... ಇಲ್ಲಿ ನಿಂಗೇ ಡಬ್ಬಿಗಳು ಸಿಗೋದಿಲ್ಲ, ತಿಳಿತಾ" .....[೧೮] ಎಂದು ಆತನಿಗೆ ಅಪಮಾನ ಮಾಡುವುದು ಜಾತಿ ಹಿನ್ನೆಲೆಯಿಂದಲೇ ಎಂಬುದು ಗಮನಾರ್ಹವಾದುದು. ಬಾಲ್ಯದಿಂದಲೇ ಕುಡಿಯೊಡೆಯುತ್ತಿರುವ ನೀಚ ಜಾತಿಪ್ರಜ್ಞೆಯನ್ನು ಇದು ಸೂಕ್ಷ್ಮವಾಗಿ ಸಂಕೇತಿಸುತ್ತದೆ.

ಜಾತಿ ಆಧಾರಿತ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಬೇರೆಲ್ಲದಕ್ಕಿಂತಲೂ ಜಾತಿ ಅಸಮಾನತೆ, ಅಪಮಾನ ಸಂಕೀರ್ಣವಾಗಿರುತ್ತದೆ ಎಂಬುದನ್ನು ಈ ಕಥೆಯ ಮೂಲಕ ಕಥೆಗಾರರು ಧ್ವನಿಸುತ್ತಾರೆ. ಶಂಭು ಕಡು ಬಡವನಾಗಿದ್ದರೂ ತಾನು ಮೇಲಿನ ಜಾತಿ ಎನ್ನುವ ಅಹಂನ ಕಾರಣಕ್ಕೆ ತನಗಿಂತ ಸ್ವಲ್ಪ ಆರ್ಥಿಕವಾಗಿ ಸಬಲನಾಗಿರುವ ದಲಿತ ಚವುಡನನ್ನು ಅಪಮಾನಿಸುತ್ತಾನೆ. ಚವುಡ ಶಂಭುವಿಗಿಂತ ಆರ್ಥಿಕವಾಗಿ ಸಬಲನಾಗಿದ್ದರೂ ಜಾತಿ ಕಾರಣಕ್ಕಾಗಿ ಅಪಮಾನಕ್ಕೆ ಒಳಗಾಗಬೇಕಾಗುತ್ತದೆ. ಈ ವ್ಯವಸ್ಥೆ ಹೇಗೆ ಮನುಷ್ಯನನ್ನೆ ಜಾತಿ ಹಾಗೂ ವರ್ಗದ ಆಧಾರದ ಮೇಲೆ ಒಡೆದು ಹಾಕಿದೆ ಎಂಬ ವಾಸ್ತವವನ್ನು ಕಥೆಗಾರರು ಸಮರ್ಥವಾಗಿ ಚಿತ್ರಿಸಿದ್ದಾರೆ.

ಕುಂವೀ ಅವರು ವರ್ಗ ಸಂಘರ್ಷವನ್ನು ಚಿತ್ರಿಸಿರುವ ಕಥೆಗಳಲ್ಲಿ 'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ" ಎಂಬುದೂ ಒಂದು ಇಲ್ಲಿ 'ವರ್ಗ ಎಂಬ ಪರಿಕಲ್ಪನೆಯನ್ನು 'ಧರ್ಮ' ಎಂಬ ಅರ್ಥದಲ್ಲಿ ಬಳಸಿಕೊಂಡಿದ್ದೇನೆ. ಜಾತಿಯನ್ನು ಮೀರುವುದು ಸುಲಭ ಆದರೆ

ಧರ್ಮವನ್ನು ಮೀರುವುದು ಕಷ್ಟ ಎಂಬ ಅಂಶ ಕಾರಂತರ ಚೋಮನದುಡಿ ಹಾಗೂ ತಕಳಿ ಶಿವಶಂಕರ ಪಿಳ್ಳೆಯವರ ಚೇಮ್ಮೀನು ಕಾದಂಬರಿಗಳಲ್ಲಿ ನೋಡ ಸಿಗುತ್ತದೆ. ಚೋಮನದುಡಿಯಲ್ಲಿ ಗುರುವ ಜಾತಿಯನ್ನು ಮೀರಿ ಮೇರಿಯನ್ನು ಮದುವೆಯಾಗುತ್ತಾನೆ. ಆದರೆ ಚೆಮ್ಮೀನಿನಲ್ಲಿ ಪರೀಕುಟ್ಟಿ ಎಂಬ ಮುಸ್ಲಿಂ ಯುವಕ ಕರುತ್ತಮ್ಮ ಎಂಬ ಬೆಸ್ತರ ಕನ್ಯೆಯನ್ನು ಮದುವೆಯಾಗಲು ಸಾಧ್ಯವಾಗುವುದಿಲ್ಲ. ಹಾಗೆ ಪ್ರತಿಯೊಂದು ವಿಚಾರದಲ್ಲೂ ಧರ್ಮಗಳನ್ನು ಮೀರುವುದು ಸಾಧ್ಯವಿಲ್ಲದ ಮಾತು.

ಪ್ರಸ್ತುತ ಈ ಕಥೆಯಲ್ಲಿ ದೂಪದಳ್ಳಿ ಎಂಬ ಗ್ರಾಮದಲ್ಲಿ ಒಂದು ಮುಸ್ಲಿಂ ಕುಟುಂಬ ಹಾಗೂ ವೀರಶೈವ ಧರ್ಮದ ನಡುವೆ ನಡೆಯುವ ಸಂಘರ್ಷವನ್ನು ಚಿತ್ರಿಸುತ್ತದೆ. ಕಥೆಯಲ್ಲಿ ಬರುವ ಪೀರಣ್ಣ ಎಂಬಾತ ಮುಸ್ಲಿಂ ಯುವಕ ಈತನ ತಂದೆ ಶೇಕಣ್ಣ ಕಾಲವಾದ ನಂತರ ಹೆಣವನ್ನು ವೀರಶೈವರ ರುದ್ರಭೂಮಿಯಲ್ಲಿ ಹೂಳುತ್ತಾನೆ. ಕಾಲಾನಂತರದಲ್ಲಿ ಮಳೆಯಾಗದಿದ್ದಾಗ ಅದಕ್ಕೆ ವೀರಶೈವ ರುದ್ರಭೂಮಿಯಲ್ಲಿ ಮುಸ್ಲಿಂ ಹೆಣವೂತಿರುವುದೇ ಕಾರಣವೆಂದು ಅಲ್ಲಿನ ಜನ ತಿಳಿಯುತ್ತಾರೆ. "ಹೊಟ್ಟಿಗೇನು ತಿಂತೀರಲೇ .... ತುರುಕ್ರೋನ ಹೆಣನ ಈರಸ್ಯೆವರ ರುದ್ರಭೂಮ್ಯಾಗ ಉಗಿಯುವುದಾ ...... ತುರುಕ್ರು ಲಿಂಗಾತ್ರು ಒಂದಾಯ್ತಿರಾ",[೧೯] ಪೀರಣ್ಣನ ಗೆಳೆಯ ಗುರುವ ಹೇಳುವ ಈ ಮಾತುಗಳಲ್ಲಿ ಸತ್ತ ಹೆಣಕ್ಕೂ ಅದೇ ಧರ್ಮಕ್ಕೆ ಸೇರಿದ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರವಾಗಬೇಕೆಂದು ಹೇಳುತ್ತಾನೆ. ಜಾತಿ, ಧರ್ಮವೆಂಬುದು ಮನುಷ್ಯನಿಗೆ ಹುಟ್ಟಿನಿಂದ ಬಂದುದಾದರೂ ಸತ್ತನಂತರವೂ ಹೋಗಲೊಲ್ಲದು ಎಂಬ ಅಂಶವನ್ನು ಇದು ಧ್ವನಿಸುತ್ತದೆ. ಈ ಹಿಂದೆಯೇ ಶೇಕಣ್ಣ ಬದುಕಿದ್ದಾಗ ಇಂತಹ ಸಂಘರ್ಷದ ಸಂದರ್ಭವೇರ್ಪಟ್ಟಿರುತ್ತದೆ. ಜಮೀನನ್ನು ಕೊಳ್ಳಬೇಕಾಗಿ ಬಂದಾಗ "ಲೇ ತುರುಕ ನೀನು ಅದೆಂಗ ಹೊಲ ಕೊಳ್ತಿಯೋ ನೋಡೆಬುಡ್ತೀನಿ"[೨೦] ಎಂದು ಗೌಡ ರೇವಣ್ಣ ಸಡ್ಡೊಡೆದಿರುತ್ತಾನೆ. ಆದರೂ ಅದಕ್ಕೆ ಹೆದರದೆ, ಶೇಕಣ್ಣ ಚಪ್ಪದಳ್ಳಿ ಸರ್ವಕ್ಕನಿಂದ ಒಂದೂಕಾಲೆಕರೆ ಹೊಲವನ್ನು ಕೊಂಡಿರುತ್ತಾನೆ. ಇಲ್ಲಿ ವೀರಶೈವ ಗ್ರಾಮದಲ್ಲಿ ವಾಸಿಸುತ್ತಿರುವ ಮತ್ತೊಂದು ಧರ್ಮಕ್ಕೆ ಸೇರಿದವರಿಗೆ ಜಮೀನುಕೊಳ್ಳಲು ಹಕ್ಕಿಲ್ಲವೆಂಬ ಅಂಶ ಧ್ವನಿಸಿತವಾಗುತ್ತದೆ.

ವೀರಣ್ಣ ತನ್ನ ತಾಯಿಗೆ ಹೇಳುವಾಗ ಹಳ್ಳಿಯ ರಾಜಕೀಯವೇನೆಂಬುದನ್ನು ಹೇಳುವುದರ ಮೂಲಕ ಮೇಲ್ವರ್ಗದವರ ಶೋಷಣೆಯ ಅಂಶವನ್ನು ತಿಳಿಸುತ್ತಾನೆ. ನಂತರ ಗೌಡ್ರ ಮನೆ ಪತ್ತಿರ ಹೋದಾಗ ಆತನನ್ನು ಜಬರ್ದಸ್ತಾಗಿ ಹೆದರಿಸಿದಾಗ "ಗೌಡ್ರೆ ಬಡವ್ರ ಅಂತ ಬಾಯಿಗೆ ಬಂದಂಗ ಮಾತಾಡಬ್ಯಾಡ್ರಿ" ಗಿವ್ ರೆಸ್ಪೆಕ್ಟ್ ಅಂಡ್ ಟೇಕ್ ರೆಸ್ಪೆಕ್ಟ್",[೨೧] ಎಂಬ ಪೀರಣ್ಣನ ಮಾತಿನಲ್ಲಿ ಹೇಗೆ ದುರ್ಬಲವರ್ಗದವರು ಮತ್ತೊಂದು ವರ್ಗದವರನ್ನು ಕೀಳುಹಿರಿಮೆಯಿಂದ ನೋಡುತ್ತಾರೆ ಎಂಬುದು ತಿಳಿಯುತ್ತಾರೆ. ಹಾಗೆಯೆ ವಿದ್ಯೆ ಪಡೆದುಕೊಂಡವರು. ಅದನ್ನು ಪ್ರತಿಭಟಿಸುವ ರೀತಿ ಗಿವ್ ರೆಸ್ಪೆಕ್ಟ್ ಅಂಡ್ ಟೇಕ್ ರೆಸ್ಪೆಕ್ಟ್" ಎಂಬ ಮಾತಿನ ಮೂಲಕ ಅಭಿವ್ಯಕ್ತಗೊಂಡಿದೆ.

ಬಸಾದೇವ್ರ ಗುಡಿತಾಗ ಪಂಚಾಯ್ತಿ ಸೇರಿದಾಗ ಪೀರಣ್ಣ, ಶಾಲಮ್ಮ ಹಾಗು ಭಾಷ ಹೋಗಿ ನಿಂತಿದ್ದನ್ನು ಕಥೆಗಾರ ಚಿತ್ರಿಸುವ ರೀತಿಯಲ್ಲೇ ದೌರ್ಜನ್ಯದ ಛಾಪು ಅಡಗಿದೆ. "ದೈವಸ್ಥರ ಕಣ್ಣಿಗೆ ಆ ಮುವ್ವರು ಹಬ್ಬದ ಕುರಿಗಳಂತೆಯೂ, ಆ ಮುವ್ವರಿಗೆ ದೈವಸ್ಥರು ಸೀಳುನಾಲಗೆಯ ಬೇಟೆ ನಾಯಿಗಳಂತೆಯೂ ಕಂಡುಬಂದರು"[೨೨] ಎಂಬಲ್ಲಿ ಬಳಕೆಯಾಗಿರುವ ಹಬ್ಬದ ಕುರಿ ಹಾಗೂ ಸೀಳುನಾಲಗೆಯ ಬೇಟೆ ನಾಯಿ ಎಂಬ ಪ್ರತಿಮೆಗಳು ಅನುಕ್ರಮವಾಗಿ ಮುಗ್ದ ಹಾಗು ಕ್ರೂರತೆಯ ಸಂಕೇತಗಳಾಗಿವೆ. ಅಲ್ಲಿ ನೆರೆದಿದ್ದ ಜನ ದೈವಸ್ಥರಾದಿಯಾಗಿ ಎಲ್ಲರೂ ಎಷ್ಟು ಕ್ರೂರರಾಗಿದ್ದರೆಂಬುದಕ್ಕೆ ಶಾಲಮ್ಮನ ಸ್ಥಿತಿಯನ್ನು ಕಥೆಗಾರ ಈ ರೀತಿ ಚಿತ್ರಿಸುತ್ತಾನೆ. "ಅಷ್ಟೊಂದು ಕೌರವರ ಮುಂದೆ ದ್ರವಪದಿಯಂತೆ ಆರ್ತಳಾಗಿ ಶಾಲಮ್ಮನ ಕಣ್ಣುಗಳಿಂದ ಒಂದೇ ಸಮನೆ ಹನಿಯುತ್ತಿದ್ದ ನೀರು ನೆಲದ ಮೇಲೆ ಇಂಡಿಯಾ ದೇಶದ ನಕ್ಷೆ ಬರೆಯತೊಡಗಿತ್ತು". ಕೊನೆಗೆ ಪಂಚಾಯ್ತಿ ತೀರ್ಮಾನ ಐದು ನೂರು ಒಂದು ರೂಪಾಯಿ ದಂಡಕಟ್ಟುವಂತೆ ಹೊರಬಂದಾಗ, ಶಾಲಮ್ಮ ಕೈಮುಗಿದು ಬೇಡಿಕೊಳ್ಳುತ್ತಾಳೆ ಅದಕ್ಕೆ ಬಗ್ಗದಿದ್ದಾಗ ಆವೇಶದಿಂದಲೇ ಆಕೆ "ನನ್ ಗಂಡನ ಹೆಣಾನ ನಿಮ್ ಸುಡುಗಾಡ್ನಾಗೆ ಉಗುದ್ರೆ ಅದ್ರಾಗೇನೈತಿ ತಪ್ಪು .... ಊರಿಗೆ ಇರೋದೇ ಒಂದು ಸುಡುಗಾಡು .... ನನ್ ಹೆಣಾನೂ, ನನ್ನ ಮಕ್ಳ ಹೆಣಾನೂ .... ಅದ್ರಾಗ ಇಟ್ರೆ ತಪ್ಪೇನೈತಿ .... ಅಲ್ಲ ....ಅ"[೨೩]

ಎಂದು ನುಡಿಯುತ್ತಾಳೆ. ಇಲ್ಲಿ ಜಾತಿ ಧರ್ಮವೆಂಬ ಬೇಧ ಏಕೆ ಬೇಕು? ಅದರ ಅವಶ್ಯವೇನು? ಎಂಬ ಪ್ರಶ್ನೆಗಳು ಈಕೆಯ ಮಾತಿನಿಂದ ಧ್ವನಿತವಾಗುತ್ತವೆ.

ದಂಡ ಕಟ್ಟದಿದ್ದುದರಿಂದ ಹೆಣವನ್ನು ಹೊರತೆಗೆದು ಊರಗಸೆಬಾಕಲತಾಗ ಹಾಕುತ್ತಾರೆ. ಅದನ್ನು ಸಹಿಸದ ಭಾಷ ಕುಡಿದು, ಗೌಡನ ಮನೆಯ ದೇವರ ಕೋಣೆಯ ಕಬ್ಬಿಣದ ಪೆಟಾರಿ ಮೇಲೆ ಪೆಣವನ್ನು ಹೊತ್ತು ತಂದು ಮಲಗಿಸುತ್ತಾನೆ. ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲು ನಿರ್ಧರಿಸುತ್ತಾರೆ. ವನ್ನೂರಪ್ಪ ಎಂಬ ಇನ್ಸ್‌ಪೆಕ್ಟರ್ ಬಂದು ಬಾಷನನ್ನು ಹಿಡಿದುಕೊಂಡು ಹೋಗಿ ಜೈಲಿಗೆ ಹಾಕುತ್ತಾರೆ. ಅನಂತರ ಹೆಣವನ್ನು ಕಟ್ರಮ್ಮನ ಹಳ್ಳದಲ್ಲಿ ಎಸೆಯುತ್ತಾರೆ 'ಎಲಿಗ' ಮತ್ತು 'ಮಾಯ'. ಅವರಿಗೆ ಕೊಡುವುದಾಗಿ ಹೇಳಿದ್ದ ನೂರು ರೂಪಾಯಿಯನ್ನು ನೀಡುವುದಿಲ್ಲ ಗೌಡ. ಅಲ್ಲಿಯೂ ಶೋಷಣ್ಣ ನಡೆಯುತ್ತದೆ. "ನೀವು ನಮ್ಗೆ ಬಾಕಿ ಕೊಡ್ಬೇಕಲ್ಲ . . . ಅದ್ರಾಗ ಮುರುಕಂತೀನ್ರಲೇ"[೨೫] ಎನ್ನುತ್ತಾರೆ. ಈ ಕಡೆ ಬಾಷನನ್ನು ಬಿಡಿಸಲು ಪೀರಣ್ಣ ಹರಸಾಹಸಮಾಡುತ್ತಾನೆ. ಆತನನ್ನು ಬಿಡಿಸಲು ಲಂಚವಾಗಿ "ಹ್ಯಾಗಾದ್ರೂ ಮಾಡಿ ಒಂದ್ರೂಪಾಯ್ ಕಡ್ಮೆ ಮಾಡದಂತೆ ಕರೆಕ್ಟ್ ಸಾವಿರ ರೂಪಾಯ್ ತಕ್ಕೊಂಡ್ಬಾ, ಬಂದ್ರೆ ಮಾತ್ರ ನಿನ್ ಬ್ರದರ್ ಬಾಷಾನ ಬಿಡುಗಡೆಯಾಗ್ತದೆ"[೨೬] ಎಮದು ಹರಪಾದಯ್ಯ ಹೇಳುತ್ತಾನೆ. ಹೀಗೆ ಐದೂನೂರೆಂದು ದಂಡ ಕಟ್ಟಲಾರದವ ಸಾವಿರ ಲಂಚಕೊಡಬೇಕಾದ ಸ್ಥಿತಿ ಏರ್ಪಡುತ್ತದೆ.

ಶುಲ್ಕ ಕಥೆಯಲ್ಲಿ ಪ್ರತಿಭಟನೆಯ ರೂಪ ಅತ್ಯಂತ ಮನೋಜ್ಞವಾಗಿ ಚಿತ್ರಿತವಾಗಿದೆ. ವರ್ಗ ಸಂಘರ್ಷ ಎಂಬ ಪದಕ್ಕೆ ಇಲ್ಲಿ ನಾನು ನೀಡಿರುವ ಅರ್ಥ ಆರ್ಥಿಕ ಅಸಮಾನತೆಯ ನೆಲೆಗಟ್ಟಿನಿಂದ ಕೂಡಿದ್ದಾಗಿದೆ. ಕಥೆ ನಿರೂಪಕ ಒಬ್ಬ ಶಿಕ್ಷಕನಾಗಿದ್ದು, ಕೈತುಂಬ ಸಂಬಳ ಪಡೆಯಂಥವನು. ಆತನ ಶಿಷ್ಯನೊಬ್ಬ ಆರ್ಥಿಕವಾಗಿ ಹಿಂದಿಳಿದಿರುವ ಬಡ ಕುಟುಂಬಕ್ಕೆ ಸೇರಿದವನಾದರೂ ಬುದ್ಧಿವಂತ ಹುಡುಗನಾಗಿರುತ್ತಾನೆ. ಸಮಾಜ ಬಡವರನ್ನು ನಡೆಸಿಕೊಳ್ಳುವ ಹೇಯ ನಡವಳಿಕೆಯನ್ನು ನೋಡಿ ರೋಸಿ ಹೋಗಿ 'ನಕ್ಸ್‌ಲೈಟ್' ನಾಗಿರುತ್ತಾನೆ. ಸಾಮಾಜಿಕ

ವರ್ಗ ಸಂಘರ್ಷಕ್ಕೆ ಆರ್ಥಿಕ ಅಸಮಾನತೆ ಕಾರಣವೆಂಬ ವಾದ ನಿರೂಪಕನ ಮಡದಿಯದ್ದಾದರೆ ಜಾತಿವ್ಯವಸ್ಥೆ ಕಾರಣವೆಂಬುದು ನಿರೂಪಕನ ವಾದವಾಗಿರುತ್ತದೆ.

ಅಶೋಕ ಎಂಬ ಬುದ್ಧಿವಂತ ಹುಡುಗ ಸಮಾಜವನ್ನು ದಿಢೀರ್ ಬದಲಾವಣೆ ಮಾಡಬೇಕೆಂಬ ಹುಚ್ಚಿನಿಂದ ನಕ್ಸ್‌ಲೈಟ್ ಆಗಿ ದುಡಿಯುತ್ತಿರುತ್ತಾನೆ. ಅಂತಹವರ ಸ್ಥಿತಿ ಅಶೋಕ "ಸಾರ್ ಎರಡು ದಿನಗಳಿಂದ ಏನು ತಿಂದಿಲ್ಲ ಹಸಿವು" ಎನ್ನುವಾಗ ಬಿತ್ತರಗೊಂಡಿದೆ. ನಂತರ ಊಟವಾದ ಮೇಲೆ ಆತ ನಿರೂಪಕನೊಡನೆ ಮಾತನಾಡುವಾಗ "ಬೂರ್ಜ್ವಾ ವ್ಯವಸ್ಥೆ ವಿರುದ್ಧ ಉಗ್ರ ಹೋರಾಟ" ಎಂಬ ಮಾತು ಅಕ್ಷರಶಃ ನಕ್ಸಲಿಸಂನ ವಾಸ್ತವ ಕಾರ್ಯ ಚಟುವಟಿಕೆಯನ್ನು ಸೂಚಿಸುತ್ತದೆ. "ನಿಮ್ಗೆ ಸರಕಾರಿ ನೌಕರಿ ಇದೆ. ಕಡಿಮೆ ಶ್ರಮದಿಂದ ಹೆಚ್ಚಿಗೆ ಸಂಪಾದಿಸುತಿರೋ ಹಗಲು ಲೂಟಿಗಾರರು ಪೈಕಿ ನೀವೂ ಒಬ್ರೊ"[೨೭] ಎಂಬಲ್ಲಿ ತನ್ನದೆ ಅಕ್ಷರ ಕಲಿಸಿದ ಗುರುವಾದರೂ, ಆ ಕ್ಷಣಕ್ಕೆ ಹೊಟ್ಟೆ ತುಂಬ ಅನ್ನಹಾಕಿದವರಾದರೂ ಹೇಗೆ ವರ್ಗ ಸಂಘರ್ಷ ಎಂಬುದು ಆತನ ಮನಸ್ಸಿನಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಮನೋಜ್ಞ ಚಿತ್ರಣವಿದೆ. ಕೊನೆಗೆ ಆತನ ಎರಡು ಸಾವಿರದ ಆರುನೂರಾ ಮುವತ್ತಾರು ರೂಪಾಯಿ ಐವತ್ತೈದು ಪೈಸೆ ಹಾಗೂ ನಿರೂಪಕನ ಮಡದಿಯ ಕೈಯಲ್ಲಿರುವ ಚಿನ್ನದ ಬಳೆಗಳನ್ನು ಪಡೆದು ಹೊರಡುತ್ತಾನೆ. ಈ ಕಥೆಯಲ್ಲಿ ಅಷ್ಟೇನೂ ವರ್ಗ ಸಂಘರ್ಷದ ಚಿತ್ರಣ ದೊರೆಯುವುದಿಲ್ಲವಾದರೂ ಅಧ್ಯಯನದ ದೃಷ್ಟಿಯಿಂದ ನೋಡಲಾಗಿದೆಯೆಷ್ಟೆ.

ಕುಬುಸ ಕಥೆಯಲ್ಲಿ ವಡ್ಡಟ್ಟಿಯೆಂಬುದೊಂದು ಗ್ರಾಮ ಅಲ್ಲಿರುವವರ ಹೆಸರು ನೋಡಿದರೆ ಆ ಊರಿನ ಚಿತ್ರಣ ಅರ್ಥವಾಗುತ್ತದೆ. ಏರುಕಲ್ಲು ಗುಡುದವ್ವ, ಬಡೆವ್ವಳೆ, ವೆಟ್ಟಕಲ್ಲು, ಕರಗಲ್ಲಪ್ಪ ಮೊದಲಾದವು ಅಲ್ಲಿನ ಜನರ ಹೆಸರುಗಳು. ಇಲ್ಲಿ ಆಧುನಿಕತೆ ಹಾಗೂ ಸಂಪ್ರದಾಯಗಳ ನಡುವಿನ ಸಂಘರ್ಷ ಅಭಿವ್ಯಕ್ತಗೊಂಡಿದೆ. ಜಾತಿ ವರ್ಗಕ್ಕೆ ಸಂಬಂಧಿಸಿದ ಅಂಶ ಕ್ವಚಿತ್ತಾಗಿ ಕಾಣಬಹುದಷ್ಟೆ. ನೆಟ್ಟಕಲ್ಲು ಅಕ್ಷರ ಕಲಿತು ಸರ್ಕಾರಿ ಕೆಲಸಕ್ಕೆ ಸೇರಿದ ಅನಂತರ ನಾಗರೀಕತೆಗನುಗುಣವಾಗಿ ತನ್ನ ಹೆಸರನ್ನು ಎಸ್.ಕೆ.ವಡವಲ್ ಎಂದು ಬದಲಾಯಿಸಿಕೊಳ್ಳುತ್ತಾನೆ. ನಂತರ ಆತ ಕೆಳವರ್ಗದವರ ದೇವತೆಗಳಾದ ಸುಂಕಲಮ್ಮ,

ಕಂದಾತಿಮ್ಮರಂಥ ದೇವತೆಗಳಿಗೆ ನಡೆದುಕೊಳ್ಳುವುದು ಶೋಭೆ ತರುವಂಥದ್ದಲ್ಲವೆಂದು ಭಾವಿಸಿ ಮೇಲ್ವರ್ಗದವರು ನಡೆದುಕೊಳ್ಳುತ್ತಿದ್ದ ಬೆಣ್ಣೆ ಆಂಜನೇಯ, ಚಲುವನಾರಾಯಣ ಮುಂತಾದ ಪ್ರಥಮ ದರ್ಜೆ ದೇವತೆಗಳಿಗೆ ನಡೆದುಕೊಳ್ಳತೊಡಗುತ್ತಾನೆ ಎಂಬುದು ಹೇಗೆ ಕೆಳವರ್ಗದವರಲ್ಲೇ ಕೀಳರಿಮೆ ಭಾವ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಸೂಚಿಸುತ್ತದೆ. ವಡವಟ್ ತನ್ನದೇ ಕಛೇರಿಯಲ್ಲಿ ಕೆಲಸಗಾರ ಅಯ್ಯೊಳಪ್ಪನ ಮಗಳನ್ನು ಮದುವೆಯಾಗುವಾಗ ತನ್ನಜ್ಜಿಯನ್ನು ಕರೆದುಕೊಂಡಬರಲು ತೆರಳಿದಾಗ ಅಲ್ಲಿ ಆತನನ್ನು ಜನ ವಿರೋಧಿಸುತ್ತಾರೆ. "ಕುಬುಸತೊಡೋಳ್ನ ಅದೆಂಗೋ ಮದ್ವಿ ಆಗ್ರೀಯಾ .... ಈ ವಾರಂಭೋ ಊರಾಗ ಯಾವ ಯಣ ಮಗಳಾದ್ರಿ ಕುಬುಸತೊಟ್ಟಾಳೇನೋ ನೋಡು ಎಂದು ಕಿಡಿಕಿಡಿ ಕಾರಿತು"[೨೮] ಎನ್ನುತ್ತಾರೆ. ಹೀಗೆ ಈ ಕಥೆಯಲ್ಲಿ ತಮಗೆ ತಾವೆ ಹಾಕಿಕೊಂಡ ಸಂಪ್ರದಾಯದ ಸಂಕೋಲೆಗೆ ಒಳಗಾಗುತ್ತಾರೆ ಎಂಬುದನ್ನು ಕಾಣಬಹುದು.

ಒಟ್ಟಾರೆ ಕುಂವೀ ತಮ್ಮ ಕಥೆಗಳಲ್ಲಿ ವರ್ಗ, ಜಾತಿ ಸಂಘರ್ಷಗಳನ್ನು ದಟ್ಟವಾಗಿ ಚಿತ್ರಿಸಿದ್ದಾರೆ. ತನ್ಮೂಲಕ ಬೃಹತ್ತಾದ ಒಳನೋಟಗಳನ್ನು ನೀಡಿದ್ದಾರೆ ಎನ್ನಬಹುದು. ಕೆಲವೊಮ್ಮೆ ದಲಿತರ ಬದುಕನ್ನು ಚಿತ್ರಿಸುವಾಗ ಎಡವಿದ್ದಾರೆನಿಸುತ್ತದೆ. ರೆಹಮತ್ ತರೀಕೆರೆ ಅವರು ಹೇಳುವಂತೆ "ಇಲ್ಲಿನ ಕಥೆಗಳಲ್ಲಿ ದಲಿತರಿಗೆ ಸಾಮಾಜಿಕ ಅಡವನ, ಅಸ್ಪೃಶ್ಯತೆ ಮುಖ್ಯವಲ್ಲ. ಹಸಿವು, ಬಡತನ ಮುಖ್ಯ ಎಂತಲೇ ಇಲ್ಲಿನ ದಲಿತ ಜಗತ್ತು ತನ್ನ ಸಾಂಸ್ಕೃತಿಕ ಪರಿವೇಷದಲ್ಲಿ ಬರುವುದಿಲ್ಲ. ಅದು ಬದುಕುವುದಕ್ಕಾಗಿ ಸೆಣಸಾಡುವ ವರ್ಗದ ನೆಲೆಯಲ್ಲಿ ಬರುತ್ತದೆ. ಅವರು ಕೇವಲ ದುಡಿಮೆಯ ಜನರು, ಹಸಿವು, ಬಡತನವನ್ನು ಚಿತ್ರಿಸುವ ಉದ್ದೇಶದಲ್ಲಿ ಕಥೆಗಳು ಎಷ್ಟು ತನ್ಮಯವಾಗುತ್ತವೆ ಎಂದರೆ ಅವರಿಗೊಂದು ಸಾಂಸ್ಕೃತಿಕ ಲೋಕವಿದೆ ಅನಿಸುವುದೇ ಇಲ್ಲ"[೨೮] ಹೀಗಾಗಿ ಕುಂವೀ ಅವರು ಜಾತಿ ಅಸ್ಪೃಶ್ಯತೆಯ ನಡುವೆಯೂ ಅದನ್ನು ಮೀರಿದ ಜೀವನೋತ್ಸಾಹದ ಶೋಷಿತ ಪಾತ್ರಗಳನ್ನು ತರಲು ಸಾಧ್ಯವಾಗಿಲ್ಲ. ಹಾಗೆಯೇ ಸವರ್ಣೀಯರಲ್ಲೂ ಕಿಂಚಿತ್ತಾದರೂ ಮಾನವೀಯತೆ ಇದ್ದಿರಬಹುದಾದ ಚಿತ್ರಣವೂ ಕಾಣಬರುವುದಿಲ್ಲ. ಹೀಗಾಗಿ ಕಥೆಗಳೊಳಗೊಂಡ ವಸ್ತು, ವಿನ್ಯಾಸದಲ್ಲಿ ಏಕತಾನತೆ ಅಡಗಿದೆ ಎನಿಸುತ್ತದೆ.

ಅಡಿಟಿಪ್ಪಣಿ:

೧. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೨
೨. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೨
೩. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೪
೪. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೫
೫. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೬
೬. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೭
೭. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೭
೮. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೭
೯. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೬೮
೧೦. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೫
೧೧. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೮
೧೨. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೮
೧೩. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೮
೧೪. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೯
೧೫. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೯
೧೬. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೮೯

೧೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೭೯
೧೮. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೭೯
೧೯. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೩೮
೨೦. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೩೯
೨೧. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೪೨
೨೨. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೪೪
೨೩. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೪೪
೨೪. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೪೫
೨೫. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೫೪
೨೬. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, [೨೦೦೭] ಪುಟ ೧೫೯
೨೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೧೮
೨೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೩೭
೨೮. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೪೦
೨೯. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೪೩
೩೦. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು, [೧೯೯೬] ಪುಟ ೪೩

ಅಧ್ಯಾಯ ೬

ಅನ್ಯ ಕಥೆಗಳ ಮಹಿಳಾ ಪಾತ್ರ ಚಿತ್ರಣ

ಆಯ್ದ ಕಥೆಗಳ ಮಹಿಳಾ ಪಾತ್ರ ಚಿತ್ರಣ

"ಭಗವತಿ ಕಾಡು", ಮಹಿಳಾ ಕೇಂದ್ರಿತ ನೆಲೆಯನ್ನು ಹೊಂದಿರುವ ಕಥೆಯೆನ್ನುವುದರಲ್ಲಿ ಎರಡು ಮಾತಿಲ್ಲ. ಕಾರಣವಿಷ್ಟೇ ತಮ್ಮ ಸಾಂಸಾರಿಕ ಬದುಕಿನಲ್ಲಿ ಅತ್ತೆ ಸೊಸೆಯರು ಎಂದ ತಕ್ಷಣ ಕದನವೆನ್ನುವುದು ಸರ್ವೆ ಸಾಮಾನ್ಯ ಹಾಗೇಯೇ ಇಲ್ಲಿ ಅತ್ತೆ ಸೊಸೆಯರು ಜಗಳವಾಡಿದರೂ, ತಮ್ಮ ಕುಟುಂಬದ ಮೂಲ ಅಸ್ತಿತ್ವಕ್ಕೆ ಧಕ್ಕೆ ಉಂಟಾದಾಗ, ಹೊರಗಿನ ಆಕ್ರಮಣಗಳನ್ನು ತಡೆಯಲು ಶತ್ರುಗಳಂತಿದ್ದ ಅತ್ತೆ ಸೊಸೆಯರು ಒಟ್ಟಾಗಿ ಪ್ರತಿಭಟಿಸುವರು.

ಒಂದು ಸಂಸಾರವೆಂದ ಮೇಲೆ ಅತ್ತೆ–ಸೊಸೆ, ಗಂಡ–ಮಗ, ಮುಂತಾದ ಸಂಬಂಧಗಳ ಬೆಸುಗೆಯಿರುತ್ತದೆ. ಭಾರತೀಯ ಸಂಪ್ರದಾಯದಲ್ಲಿ ಒಂದರ ಸಂಬಂಧ ಮತ್ತೊಂದರಲ್ಲಿ ಅಡಕವಾಗಿರುತ್ತದೆ. ಹಾಗೇ ಅದನ್ನು ನಿಯಂತ್ರಿಸುತಲಿದ್ದು ಮಾರ್ಗದರ್ಶನ ಮಾಡುವ ಬೆಸುಗೆಗಳಾಗಿರುತ್ತವೆ. ಈ ನೆಲೆಯಲ್ಲಿ ನೋಡುವುದಾದರೆ, ಕಥೆಯಲ್ಲಿ ಬರುವ ಅತ್ತೆ 'ಸೆವುಡವ್ವ' ಮತ್ತು ಸೊಸೆ ನಾಗವ್ವ ಇವರಿಬ್ಬರಲ್ಲಿ ವಯೋಮಾನ ಮತ್ತು ಕಾಲಮಾನಕ್ಕನುಗುಣವಾಗಿ ಗುಣಗಳು ಭಿನ್ನವಾಗಿರುವುದು ಕಂಡುಬರುತ್ತದೆ. ಹಾಗೆ, ಭಿನ್ನ ಮನೋಧರ್ಮದ ಭಿನ್ನ ಪರಿಸರದಲ್ಲಿ ಬೆಳೆದು ಗಂಡನ ಮನೆಯಲ್ಲಿ ಬೆಳಕಾಗಿ ಬೆಳಗುವ ದೀವಿಗೆಗಳಿವು. ಈ ಎರಡು ಪಣತೆಗಳ ನಡುವೆ ಒಂದು ಕಡೆ ಮಗನಾಗಿ ಮೊಗದೊಂದು ಕಡೆ ಗಂಡನಾಗಿ 'ಭರಮ' ಕಂಬಚ್ಚಿನ ಇಕ್ಕಟ್ಟಿನಲ್ಲಿ ತಿಣುಕುವುದು ಕಂಡುಬರುತ್ತದೆ. ಇದರಲ್ಲಿ ಒಂದು ಸುಂದರ ಸಾಮಾಜಿಕ ಚೌಕಟ್ಟನ್ನು ಪ್ರತಿಬಿಂಬಿಸುವ, ಹಾಗೇ ಒಂದು ಹೆಣ್ಣು ತನ್ನ ಕುಟುಂಬದಲ್ಲಿ ತನ್ನ ಹಿಡಿತವನ್ನು ಸಾಧಿಸಲು ಹೇಗೆ ಪ್ರಯತ್ನಿಸುವಳು ಎನ್ನುವುದರ ಅರಿವಿದೆ. ಇದನ್ನು ಮನಗಂಡ ಅತ್ತೆ ಸೆವುಡವ್ವ ಸೊಸೆ ನಾಗವ್ವನನ್ನು ಹಿಡಿತದಲ್ಲಿಡಲು, ಹಾತೊರೆಯುವಳು. ಇದರ ಜೊತೆಯಲ್ಲಿ ಮಗನ ಗುಣಮಾಡಿ, ಮದುವೆಯಾಗಿ ಬಂದ ಸೊಸೆ ಮುಂದೆ ಆತನಲ್ಲಿರುವ ದೌರ್ಬಲ್ಯಗಳನ್ನು ಮುಚ್ಚಿಡಬೇಕು ಎಂಬ ಹಿನಲ್ಲೆಯಲ್ಲಿ ಆತನನ್ನು ಸಮರ್ಥಿಸಿಕೊಳ್ಳುವಳು. ಈ ನಿಟ್ಟಿನಲ್ಲಿ ಆಕೆ ಭರಮನಿಗೆ "ಲೋ ಜೋಗಮ್ನಂಥೋನೆ....

ಮಾಡಿಕ್ವಂಡೋಳ್ಗೆ ಇಟಾಕೊಂದು ಸೊಡ್ಲ ಕ್ಷಟ್ರೆ ಮುಂದೆ ಬಾಳೂವೆ ನಡೆದೀತೆ... ಸಣ್ಣಪುಟ್ಟ ತೆಪ್ಪು ಕಂಡುಹಿಡ್ದು ಯೆಂಡ್ತೀ ಮೊಗ್ಲು ಮರೀತಿರಬೇಕು ... ಅದು ಗಂಡಸ್ರ ಲಚ್ಚಣ ...."[೧] ಹೀಗೆ ಪ್ರೇರೇಪಿಸುವಳು. ಇಂಥ ವಿಲಕ್ಷಣ ಸಂಸಾರದಿಂದ ದೂರ ಇದ್ದ ಭರಮ್ಮ ಮುಂದೊಂದು ದಿನ ತನಗೆ ಗೊತ್ತಿಲ್ಲದಂತೆ ತನ್ನ ಸಂಸಾರವನ್ನು ಅತಂತ್ರ ಸ್ಥಿತಿಗೆ ತಳ್ಳುವನು. ಇದರಿಂದ ಆ ಊರಿನ ಗೌಡನ ಗುಲಾಮನಾಗಿ ಪಂಗಿನ ಆಳಾಗುವನು ಇದನ್ನು ಅರಿತ ಗೌಡ ದಲಿತಕೇರಿಯ ಭರಮನ ಮನೆ ಮುಂದಿನ ಬೇವಿನ ಮರ ಕಡಿಯಲು ಪ್ರೇರೇಪಿಸುವನು. ಲಾಭದ ದೃಷ್ಟಿಯಿಂದ ಇಲ್ಲಿ ಬೇವಿನ ಮರ ಕೇವಲ ಬೇವಿನ ಮರವಾಗಿರಲಿಲ್ಲ. ಅದು ಇಡೀ ದಲಿತಕೇರಿಯ ಆರಾಧ್ಯದೈವ. ಸಾಂಸ್ಕೃತಿಕ ಬದುಕಿನಲ್ಲಿ ಅದು ಒಡನಾಡಿಯಾಗಿ ಜನರಲ್ಲಿ ಶಾಶ್ವತವಾಗಿ ಬೆರೆತು ಹೋಗಿತ್ತು. ಹಲವಾರು ಸಂದರ್ಭಗಳಲ್ಲಿ ಸೆವುಡವ್ವ ಮತ್ತು ನಾಗವ್ವನಿಗೂ ಪ್ರೀತಿಯ ಪೂಜ್ಯ ನೆಲೆಯಾಗಿತ್ತು. ಇಲ್ಲಿ ಗಮನಿಸಬೇಕು ಗ್ರಾಮೀಣರ ಬದುಕನ್ನು ತೊಂಭತ್ತು ಭಾಗ ದೇವರು ಅಥವಾ ನಂಬಿಕೆಗಳು ನಿಯಂತ್ರಿಸುತಲಿರುತ್ತವೆ. ಇದಕ್ಕೆ ಸಾಕ್ಷಿ ಬೇವಿನಮರ. ಬೇವಿನ ಮರ ಕಡಿಯಲು ಬಂದವರನ್ನು ಊರಿನ ಜನತೆ ಜೊತೆಯಾಗಿ ಮರ ಕಡಿಯುವ ಕೈಯ ನಿಯಂತ್ರಿಸುವರು. ಅತ್ತೆ-ಸೊಸೆಯರು ಒಗ್ಗಟ್ಟಾಗಿ ತಮ್ಮ ಅಸ್ತಿತ್ವವನ್ನು ತಮ್ಮ ಸಂಪ್ರದಾಯವನ್ನು ಉಳಿಸಿಕೊಳ್ಳಲು ಹೋರಾಟ ಮಾಡುವರು. ಇದು ಗ್ರಾಮೀಣ ಬದುಕಿನಲ್ಲಿ ಕಾಣ ಬರುವ ಒಂದು ಅನನ್ಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಕುಬುಸ ಕಥೆಯ ಮೂಲಕ ಕುಂವೀ ಧಾರುಣತೆಯ ಅನನ್ಯವಾದ ಇನ್ನೊಂದು ಪ್ರಪಂಚದ ಅನಾವರಣ ಮಾಡುವರು. ಈ ಕಥೆಯಲ್ಲಿ ಶಿಲಾಯುಗ ಕಾಲದ ಲಕ್ಷಣ, ಸ್ವಭಾವಗಳನ್ನು ಉಳ್ಳ ವಡ್ಡಟ್ಟಿಯು ಆಧುನಿಕ ಪ್ರಪಂಚದ ಯಾವ ಸಂಪರ್ಕ ಸಾಧನಗಳು ಇಲ್ಲದೆ ಇರುವ, ನಾಗರಿಕ ಪ್ರಪಂಚದ ನಡುವಿದ್ದರು ಪ್ರತ್ಯೇಕಗೊಂಡಿರುವ ಒಂದು ಹಳ್ಳಿ. ಕುಂವೀ ಕಥೆಗಳಲ್ಲಿ ಇರುವ ವಿಷಾದದ ಛಾಯೆ ಇಂಥದ್ದು, ನಾಗರಿಕತೆಯ ತುತ್ತತುದಿಯನ್ನು ಪ್ರವೇಶಿದ್ದೇನೆ ಎಂದು ಬೀಗುವ ಒದುಗವರ್ಗದ ಕಲ್ಪನೆಯನ್ನು ಘಾಸಿಗೊಳಿಸುವ ಅನೇಕ ಪರಿ ಅವರ ಕಥೆಗಳಲ್ಲಿ ಕಾಣಸಿಗುತ್ತವೆ. ಕುಬುಸ ಕಥೆಯಲ್ಲಿ ಬಂಡೆವಜ್ಜ ಮತ್ತು ಕಮಲಳ ಮೂಲಕ ಆಧುನಿಕತೆ ಮತ್ತು ಸಂಪ್ರದಾಯ ಬದ್ದ ನಂಬಿಕೆಗಳ ಒಂದು ಘರ್ಷಣೆಯನ್ನು ಕಾಣಬಹುದು.

ಹೊರ ಪ್ರಪಂಚವನ್ನೇ ಕಾಣದ 'ಬಂಡವಜ್ಜಿ' ತನ್ನ ವಡ್ಡಟ್ಟಿಯನ್ನೆ' ಒಂದು ಜಗತ್ತು ಎಂದು ಭಾವಿಸಿಕೊಂಡು ಅದರೊಳಗಿರುವ ನೋವು–ನಲಿವು, ಸುಖ–ದುಃಖಗಳಿಗೆ ಸ್ಪಂದಿಸುವ ಸೂಕ್ಷ್ಮ ಸ್ವಭಾವದವಳು. ಮಗ–ಸೊಸೆ ಸತ್ತ ನಂತರ ಮೊಮ್ಮಗ ಮಿಸ್ಟರ್ ವಡವಟ್ (ನೆಟ್ಟಕಲ್ಲ)ನನ್ನು ಸಾಕಿ ಸಲಹುವಳು. ಅದು ಆಕೆಯ ಒಂದು ತಪಸ್ಸು. ನಮ್ಮ ಕಾಲದ ಅನೇಕ ಕಥೆಗಗಳಲ್ಲಿ ರೂಪಿತಗೊಂಡ ಸ್ತ್ರೀ ಪಾತ್ರಗಳು ಕೇವಲ ಲೈಂಗಿಕಾಸಕ್ತಿಯ ಕೇಂದ್ರ ಬಿಂದುಗಳು. ಕುಂವೀ ಆಧುನಿಕ ಜಗತ್ತಿಗೆ ಬಹುಮುಖ ಸಾಂಸ್ಕೃತಿಕ ಹಿನ್ನಲೆಯಲ್ಲಿರುವ ಶ್ರಮ ಜೀವಿಗಳ, ಸ್ತ್ರೀಯರ ದುಸ್ತರ ಬದುಕನ್ನು ಚಿತ್ರಿಸುವುದು ಬೆರಗುವುಟ್ಟಿಸುವುದು. ಬಂಡೆವಜ್ಜಿ ತನ್ನ ಮೊಮ್ಮಗ ಆಧುನಿಕ ಜಗತ್ತಿನ ಪ್ರವೇಶವನ್ನು ಪಡೆದ ನಂತರ ಆತನ ನೆನಪಿನಲ್ಲೇ ಏಕಾಂಗಿಯಾಗಿ ಜೀವನ ಸವೆಸುತ್ತಿರುವಳು. ಆಕೆಗೆ ವಡ್ಡಟ್ಟಿಯಲ್ಲಿ ಬೇರೆ ಯಾರು ಸಂಬಂಧಿಕರು ಇರುವುದಿಲ್ಲ. ಜೊತೆಗೆ ಕಾಲನ ಸನಿಹಗೊಂಡಿದಳು. ಆಧುನಿಕ ಜಗತ್ತಿನಲ್ಲಿ ಸ್ತ್ರೀಯರು ಆರ್ಥಿಕ ಸಬಲತೆಯ ಹಿನ್ನಲೆಯಲ್ಲಿಯೇ ಬದುಕನ್ನು ಸುಭದ್ರಗೊಳಿಸಿಕೊಳ್ಳಬಹುದು, ಹೆಣ್ಣು ಒಂಟಿಯಾಗಿ ಜೀವಿಸಬಲ್ಲಳು ಎಂಬಂಥ ಯಾವ 'ಇಸಂ' ಇಲ್ಲದೆ ಅದರ ಆಲೋಚನೇಯ ಪ್ರಕ್ರಿಯೆಯೂ ಇಲ್ಲದೆ ಹಾಗೇ ಬದುಕು ಸಾಗಿಸುವ ಗ್ರಾಮ ಭಾರತದ ಸ್ತ್ರೀ ಪ್ರಂಪಚವನ್ನು ಬಂಡೆವಜ್ಜಿಯ ಮೂಲಕ ಕುಂವೀ ಅನಾವರಣಗೊಳಿಸುವರು. ತುಂಬ ಮುಖ್ಯ ಸಂಗತಿಗಳೆಂದರೆ, ಆಕೆ ತನ್ನ ಗಂಡನ ದುಡಿಮೆ, ಬದುಕು ಇವುಗಳನ್ನು ಕುರಿತು ಮತಾನಾಡುವಳು. ಆಕೆಯ ಮನಸ್ಸಿನಲ್ಲಿ ಗಂಡ ಸತ್ತ ನಂತರವು ಇರುವ ಇಂತ ಜಾಗೃತ ಅವಸ್ಥೆಯೇ ಬಂಡೆವಜ್ಜಿ ಹಾಗೂ ಅಂಥ ಅನೇಕ ಗ್ರಾಮೀಣ ಸ್ತ್ರೀಯರ ನೈತಿಕ ಬಲವು ಆಗಿ ಬಿಡುವುದು. ಇನ್ನೊಂದು ಮುಖ್ಯ ಸಂಗತಿ ಎಂದರೆ, ಆಕೆಯ ಮೊಮ್ಮಗ ವಡವಟ್ ಉರುಫ್ ನೆಟ್ಟಕಲ್ಲು ಕೆಲಸಸಿಕ್ಕಿ ಮನೆಗ ಬಂದವದ್ದೆ ತನ್ನ ಬದುಕಿನ ಅನಂತ ಸುಖದ ಕ್ಷಣ ಎಂದು ಭಾವಿಸುವ ಅಜ್ಜಿ, ಕುಬುಸತೊಟ್ಟ ಹುಡುಗಿಯ ಪೋಟೋ ಹಿಡಿದು ಮದುವೆಯಾಗುತ್ತೇನೆ ಎಂದಾಗ ಆಕೆ ಅದನ್ನು ವಿರೋಧಿಸುವಳು. ಬಹುಶಃ ಆಕೆ ಕಲ್ಪಿಸಿಕೊಳ್ಳಲೂ ಅಸಾಧ್ಯವಾದ ಸಂಗತಿ ಥರ ಕಾಣುವುದು ಅದು. ಇನ್ನೊಂದು ಸೂಕ್ಷ್ಮ ಸಂಗತಿಯನ್ನು ಇದೇ ಸಂದರ್ಭದಲ್ಲಿ ಕಾಣಬೇಕು. ತನ್ನ ಮೊಮ್ಮಗ ಸರಕಾರಿ ನೌಕರಿ ಹಿಡಿದ ಮೇಲೆ ಆತನೊಳಗೆ ಆಗಿರುವ ಬದಲಾವಣೆಯನ್ನು ಆಕೆ ಒಪ್ಪಿಕೊಂಡಿರುವಳು. ಆತ ಈಗ ಹಳ್ಳಿಗೆ ಬಂದಾಗ ಇನ್‌ಸರ್ಟ್ ಮಾಡಿಕೊಂಡು ಬಂದ ನಾಗರಿಕ ಪ್ರಪಂಚದ ಎಲ್ಲಾ

ಲಕ್ಷಣ, ಸೌಂದರ್ಯಗಳನ್ನು ಉಳ್ಳವನಾಗಿರುವನು. ಆತನ ಬಗ್ಗೆ ಆಕೆ ಚಕಾರವೆತ್ತುವುದಿಲ್ಲ, ಬದಲಿಗೆ ಸಂತೋಷ ಪಡುವಳು ಆದರೆ ಆತ ಮದುವೆಯಾಗುವ ಹುಡುಗಿ ಕುಬುಸ ತೊಟ್ಟಿರುವ ವಿಚಾರ ಮಾತ್ರ ಆಕೆಗೆ ಸರಿ ಕಾಣದು. ಗಮನಿಸಬೇಕಾದ ವಿಚಾರವೆಂದರೆ ಒಟ್ಟು ಭಾರತೀಯ ಪರಿಕಲ್ಪನೆಯಲ್ಲಿಯೇ ಸ್ತ್ರೀ ಸಂಪ್ರದಾಯಕ್ಕೆ ಆಧುನಿಕತೆಯನ್ನು ವಿರೋಧಿಸುವುದನ್ನು ಕಾಣಬಹುದು. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ರೇವಯ್ಯ ಕ್ರೈಸ್ತ ಮತಕ್ಕೆ ಮತಾತರಗೊಂಡು ಆತನ ಹೆಂಡತಿ ನೀರಿಗೆ ಬಿದ್ದು ಸಾಯುವಳು. ಇದು ತೀರ ಆಳವಾಗಿ ಬೇರು ಬಿಟ್ಟಿರುವ ಸಂಪ್ರದಾಯವನ್ನು ತೋರಿಸುವುದು. ಭಾರತಕ್ಕೆ ಬ್ರಿಟಿಷರು ಬಂದ ನಂತರ ಹತ್ತು ವರುಷಗಳಲ್ಲಿ ಪುರುಷನೊಳಗೆ ಆಗಿರುವ ಬದಲಾವಣೆ ಸ್ತ್ರಿಯರಲ್ಲಿ ಒಂದು ಶತಮಾನವಾದರೂ ಅವಳ ಮೂಲ ಸ್ವರೂಪದಲ್ಲಿ ವ್ಯಾತ್ಯಾಸವಾಗದೆ ಇರುವುದನ್ನು ಈ ರೀತಿಯಲ್ಲೆ ಕಾಣಬಹುದು. ಕಥೆಯಲ್ಲಿ ಆಧುನಿಕ ಪ್ರಪಂಚಕ್ಕೆ ಪ್ರವೇಶವಾಗುವ ಮನೋಭಾವನೆ ಮನೋಜ್ಞವಾಗಿದೆ. ಬಸ್ಸನ್ನು ಕಾಣದೇ ಇರುವ ಆಕೆ, ಬಸ್ಸಿನಲ್ಲಿ ಕುಳಿತು ಕೊಳ್ಳುವ ರೀತಿ, ವಾಂತಿ ಮಾಡಿಕೊಳ್ಳುವ ಕ್ರಮ, ಮುಂದೆ ಆಕೆ ಇಡೀ ಗಾಯಿತ್ರಿ ನಗರದಲ್ಲಿ ಪ್ರದರ್ಶನದ ವಸ್ತುವಾಗುವುದು. ವಡವಟ್‌ನ ಆಫೀಸಿನಲ್ಲಿ ಚರ್ಚೆಗೆ ಗ್ರಾಸವಾಗುವುದು, ಇವೆಲ್ಲವು ಆಧುನಿಕ ಪ್ರಪಂಚಕ್ಕೆ ಗ್ರಾಮ ಭಾತರವೊಂದು ಕಾಣುವ ರೀತಿಯನ್ನು ತೋರಿಸುವುದು. ಮುಂದೆ ನೆಟ್‌ಕಲ್‌ನ ಹೆಂಡತಿ ಕಮಲಳಿಗೆ ಅಜ್ಜಿ ಕುಬುಸ ತೊಡದಿರುವುದೇ ಅನಾಗರಿಕತೆಯ ಲಕ್ಷಣವಾಗಿ ಕಂಡು ಅದನ್ನು ಬದಲಾಯಿಸುವ ಶತ ಪ್ರಯತ್ನ ವಿಫಲವಾಗಿ ಗಂಡನ ಮೂಲಕ ಹೇಳಿ ಸಫಲ ಕಾಣದೆ, ಬಂಡೆವಜ್ಜಿಯ ವಯಸ್ಸಿನಷ್ಟೇ ವಯಸ್ಸಾದ ಅಕ್ಕಪಕ್ಕದ ಮನೆಯ ಮೂರು ಜನ ಅಜ್ಜಿಯಂದಿರನ್ನು ಈ ಕೆಲಸಕ್ಕೆ ನಿಯುಕ್ತಗೊಳಿಸುವಳು. ಕಥೆಯ ತಾರ್ಕಿಕ ಸಂಘರ್ಷ ಕಾಣುವುದೇ ಇಲ್ಲಿ, ಆ ಮೂರು ಜನ ಅಜ್ಜಿಯಂದಿರು ಕುಬುಸದ ಮಹತ್ವ ತಿಳಿಸಲು ಸೆರಗನ್ನು ಜಾರಿಸಿ ಅದನ್ನು ಸೂಚ್ಯವಾಗಿ ಹೇಳುವ ಪ್ರಯತ್ನ ಮಾಡುವರು. ಈ ಸೂಚನೆಯ ರೀತಿ ಅವರಿಗೆ ಅಸಹ್ಯಕರವಾಗಿ ಕಾಣಿಸುವುದಿಲ್ಲ. ಆದರೆ ಈ ಹೆಂಗಸರಿಗೆ ಕುಬುಸ ತೊಡದೆ ಇರುವ ಬಂಡವಜ್ಜಿ ಅಶ್ಲೀಲವಾಗಿ ಕಾಣುವಳು. ಆದರೆ ಬಂಡೆವಜ್ಜಿಯ ಈ ಮಾತು ನೋಡಿ "ಅಯ್ .... ಸೆರಗು ಹೊದ್ಕಳ್ರಿ ನಮ್ಮವ್ವರೇ .... ಯಾರಾದ್ರೂ ಹುಡ್ರು ಹುಪ್ಡಿ ನೋಡ್ಯಾರು"[೨] ಎಂದು ಗದರಿಸಿದಳು.

ಇದು ನಮ್ಮ ಯೋಚನಾಕ್ರಮ ಮತ್ತು ಗ್ರಹಿಕೆಯ ದೋಷಗಳನ್ನು ಶಕ್ತವಾಗಿ ಅಭಿವ್ಯಕ್ತಿಸುವುದು. ಕುಬುಸ ತೂಡದೆ ಇರುವ ಬಂಡೆವಜ್ಜಿಗೆ ಅಶ್ಲೀಲತೆಯ ಅರಿವಿದೆ. ಆದರೆ ಕುಬುಸ ತೊಡುವ ನಾಗರಿಕ ಪ್ರಪಂಚದವರಿಗೆ ಶೀಲ ಅಶ್ಲೀಲಗಳ ಅಂತರವೇ ಗೋಜು ಗೋಜು ಆಗಿರುವುದು.

ಶುಲ್ಕ ಕಥೆಯಲ್ಲಿ ಅನಾವರಣಗೊಳ್ಳುವ ನಿರೂಪಕನ ಹೆಂಡತಿ ಅನ್ನಪೂರ್ಣಳ ಪಾತ್ರ ವಿದ್ಯಾಭ್ಯಾಸವನ್ನು ಪಡೆದ, ಮೂಲಭೂತವಾಗಿ ಭಾರತೀಯ ಪರಿಕಲ್ಪನೆಯನ್ನು ಯೋಚಿಸುವ ಸಮಗ್ರ ವ್ಯವಸ್ಥೆಗೆ ಸ್ಪಂದಿಸುವ ರೀತಿ ತುಂಬಾ ಸೊಗಸಾಗಿದೆ. ನಿರೂಪಕ ಹಾಗೂ ಆಕೆಯ ನಡುವೆ ನಡೆಯುವ ಕಥೆಯ ಆರಂಭದ ಸಂವಾದದ ಭಾಗವನ್ನು ಗಮನಿಸಿ ಆಕೆ ಇದ್ದಕ್ಕಿದ್ದಂತೆ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಿಡಿಮಿಡಿಗುಟ್ಟುವುಳು, "ಸಾಮಾಜಿಕ ಅಸಮಾನತೆಗೆ ಆರ್ಥಿಕ ವ್ಯವಸ್ಥೆಯೇ ಕಾರಣವೆಂದು ಆಕೆಯೂ, ಜಾತಿ ವ್ಯವಸ್ಥೆ ಕಾರಣವೆಂದು ನಾನೂ ವಾದಿಸುತ್ತಾ ಕ್ರಮೇಣ ಮೊಂಡು ಹಠಕ್ಕೆ ಬಿದ್ದ ನಾವು ರಾಷ್ಟ್ರೀಯ ಮಟ್ಟದಿಂದ ಕುಟುಂಬ ಮಟ್ಟಕ್ಕೆ ಇಳಿದೆವು".[೨] ಮೂರನೆಯ ಹೆರಿಗೆಯ ನಂತರ ಕುಟುಂಬದ ಆರ್ಥಿಕ ಸುಧಾರಣೆಗೆ ಕಠಿಣಕ್ರಮ ಕೈಗೊಂಡಿರುವ ಆಕೆ ಮಗುವಿನಂತೆ ನಿದ್ದೆ ಸವಿಯ ತೊಡಗಿದಳು. ಬಹುಶಃ ಆಕೆ ಗುರುತಿಸುವಷ್ಟು ಸುಲಭ ಮತ್ತು ಸರಿಯಾಗಿ ಜಾತಿ ವ್ಯವಸ್ಥೆಯ ಅಸಮಾನತೆಗೆ ಆರ್ಥಿಕ ಮೂಲವೇ ಕಾರಣ ಎಂಬ ಸಂಗತಿ ನಿರೂಪಕನಿಗೆ ಹೊಳೆಯದೆ ಹೋಗುವುದು. ಆಕೆ ಮುಂದುವರಿದು ಇಡಿ ಕುಟುಂಬದ ಆರ್ಥಿಕ ಸ್ಥಿತಿಯ ಬಗ್ಗೆ ಜಾಗೃತ ವಹಿಸುವುದನ್ನು ಗಮನಿಸಿದರೆ, ನಮಗೆ ಗೋಚರಿಸುವ ತುಂಬಾ ಮುಖ್ಯ ಸಂಗತಿ ಎಂದರೆ, ಸಮಾಜದ ಮೂಲ ಘಟಕ ಕುಟುಂಬದಲ್ಲಿಯೇ ನಿರ್ಮಿತಗೊಳ್ಳುವ ಅನೇಕ ಯೋಚನೆ ಮತ್ತು ಯೋಜನೆಗಳು ಸಮಾಜಕ್ಕೂ ವಿಸ್ತರಿಸುವವು. ಆ ಕಾರಣದಿಂದಲೇ ಆಕೆ ಕುಟುಂಬದ ಆರ್ಥಿಕ ಸದೃಢತೆಯ ಬಗ್ಗೆ ಸದಾ ಜಾಗೃತಳಾಗಿರುವಳು. ಇನ್ನೊಂದು ಸಂಗತಿ ಎಂದರೆ, ಭಾರತದಂತಹ ಸಂಪ್ರದಾಯದ ದೇಶದೊಳಗೆ ಇಂಥ ಆರ್ಥಿಕ ಅಸಮಾನತೆಗಳೆಲ್ಲ ಜಾತಿಯ ವೇಷವನ್ನು ತೊಟ್ಟು ವರ್ಗ ಸಂಘರ್ಷಕ್ಕೆ ಇರಬಹುದಾದ ಘರ್ಷಣೆಯನ್ನು ಇಲ್ಲವಾಗಿಸಿ ಬಿಡುವವು.

ನಿರೂಪಕ ಸಾಮಾಜಿಕ ಅಸಮಾನತೆಗೆ ಜಾತಿಯನ್ನು ಕಾರಣವಾಗಿರಿಸಿರುವುದನ್ನು ಗಮನಿಸಬಹುದು.

ಮುಂದೆ ನಿರೂಪಕನ ಪ್ರಿಯ ವಿದ್ಯಾರ್ಥಿ ಅಶೋಕ ನಕ್ಸಲೈಟ್ಆಗಿ ಆತ ನಿರೂಪಕನ ಮನೆಗೆ ಆಗಮಿಸಿ ನಡೆದುಕೊಳ್ಳುವ ರೀತಿ ಹಾಗೂ ಆ ಸನ್ನಿವೇಶದಲ್ಲಿ ಅನ್ನಪೂರ್ಣಳ ನಡೆವಳಿಕೆಯನ್ನು ಗಮನಿಸಬೇಕು ನಿರೂಪಕ ಸರಿ ತಪ್ಪುಗಳ ಜಿಜ್ಞಾಸೆಗೆ ಬಿದ್ದು, ಏನನ್ನು ಹೇಳಲು ಆಗದೆ ಒದ್ದಾಡುತ್ತಿದ್ದರೆ, ಅನ್ನಪೂರ್ಣ ಬಂದು ಅಡುಗೆಮಾಡಿ ಬಡಿಸುವಳು. ಆಕೆಗೆ ಹಿಂಸೆಯ ಪ್ರವೃತ್ತಿಗೆ ಬಲಿಯಾದ ಅಶೋಕನ ನಡೆವಳಿಕೆ ಇಷ್ಟವಾಗುವುದಿಲ್ಲ. ಅದನ್ನು ಗಂಡನ ಮುಂದೆ ಸ್ಪಷ್ಟವಾಗಿ ಹೇಳುವಳು. ಆದರೆ ನಿರೂಪಕ ಮಾತ್ರ ತನಗೆ ಅನಿಸಿದ್ದನ್ನು ಹೇಳದೆ ಆಕೆಯನ್ನು ಸಮಾಧಾನಿಸುವನು. ಅಶೋಕ ಕೊನೆಯಲ್ಲಿ ತನಗೆ ಬೇಕಾಗಿರುವ ಹಣಕ್ಕೆ ಅವರ (ನಿರೂಪಕ) ಹೆಂಡತಿಯ ಕೈ ಬಳೆಯನ್ನು ಕೇಳಿದಾಗ ಅನ್ನಪೂರ್ಣಳು ವರ್ತಿಸುವ ರೀತಿ ಇಡೀ ಭಾರತೀಯ ಸ್ತ್ರೀಯರ ಮನಸ್ಸಿನ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುವುದು.

ಮಹಿಳೆಗೆ ಒದಗುವ ಧಾರಣ ಸ್ಥಿತಿ ಹಾಗೂ ಸಂಕಟಗಳನ್ನು ಮನೋಜ್ಞವಾಗಿ ಚಿತ್ರಿಸುವ ಮತ್ತೊಂದು ಕಥೆ ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ. ಈ ಕಥೆಯಲ್ಲಿ ಕಂಡು ಬರುವ ಸ್ತ್ರೀ ಪಾತ್ರಗಳೆಂದರೆ, ಶೇಕಣ್ಣನ ಪತ್ನಿ ಶಾಲಮ್ಮ, ಹಾಗೂ ಮಗಳು ಬೇಗಮ್ಮ. ಗೌಡರ ಹೆಂಡತಿ ನಿಂಗವ್ವ, ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವ ಎಂಬ ಪಾತ್ರಗಳು. ಶಾಲಮ್ಮ ತನ್ನ ಗಂಡನ ಹೆಣವನ್ನು ವೀರಶೈವ ರುದ್ರಭೂಮಿಯಲ್ಲಿ ಹೂತಿರುವ ಅಪರಾಧಕ್ಕಾಗಿ, ಪಂಚಾಯ್ತಿ ಸೇರಿಸಿ ಐದುನೂರೊಂದು ರೂಪಾಯಿ ದಂಡ ಹಾಕಿದಾಗ "ಕೈ ಮುಗಿತೀನ್ರಿ ...... ಕಾಲ್ಗೂ ಬೀಳ್ತೀನಿ .... ಏನೋ ಆಗೋದು ಆಗಿ ಹೋಗೇತಿ .... ಮುಸಲ್ಮಾನರ ಮನೆ ನಮ್ಮದೊಂದೆ ಈಊರಾಗಿರೋದು : ನಮಗಾರಿಗೂ ಮುಸಲ್ಮಾನಿ ಮಾತಾಡೋಕೆ ಬರೋದಿಲ್ಲ........ ನಾವು ಪೀರ್ಲ ಹಬ್ಬ ಮಾಡ್ತಿಲ್ಲ .... ರಂಜಾನೂ ಮಾಡ್ತಿಲ್ಲ. ನಾವು ನಿಮ್ಮಂಗೆ ನಾಗ್ರಪಂಚಮಿ, ಮಾನಾಮಿ, ಉಗಾದಿ ಹಬ್ಬ ಮಾಡ್ತೀವಿ............ ಬಸಂದೇವ್ರೆ ನಮ್ ಮನೆದೇವ್ರು .... ಇಂಥದ್ರಾಗೆ ನನ್

ಗಂಡನ ಹೆಣಾನ ನಿಮ್ ಸುಡುಗಾಡ್ನಾಗೆ ಉಗುಪ್ರೆ ಅದ್ರಾಗೇನೈತಿ ತಪ್ಪು .... ಊರಿಗೆ ಇರೋದೆ ಒಂದು ಸುಡುಗಾಡು .... ನನ್ ಹೆಣಾನೂ, ನನ್ನ ಮಕ್ಳ ಹೆಣಾನೂ .... ಅದ್ರಾಗ ಇಟ್ರೆ ತಪ್ಪೇನೈತಿ .... ಅಂತ"[೪] ಎಂದು ಆವೇಶದಿಂದಲೇ ನುಡಿದಳು. ಅದರ ಹಿಂದೆ ದೈನ್ಯತೆಯ ಛಾಯೆಯನ್ನು ಕಾಣಬಹುದು ಮುಂದೆ ತನ್ನ ಗಂಡನ ಹೆಣ ಕಿತ್ತು ಊರಿನ ಮುಂಭಾಗ ಬೀಸಾಕಿದ್ದಾಗ ಅದನ್ನು ನೋಡಿ ಆಕೆ ಗೋಳಿಡುತ್ತ ಈ ಮೇಲ್ವರ್ಗದ ಮನುಷ್ಯರು, ಮನುಷ್ಯ ಸತ್ತ ಮೇಲೂ ಕಾಡುತ್ತಾರಲ್ಲ. ನಾವೇನು ಪಾಪ ಮಾಡಿದ್ವಿ ಎಂದು ಹೇಳುತ್ತಾ ತನ್ನನ್ನೂ ನಿನ್ನ ಜೊತೆ ಕರಕೊಂಡೋಗೋ ಎಂದು ಕೂಗುತ್ತಾಳೆ. ಇಲ್ಲಿ ಶಾಲಮ್ಮಳ ಅಸಹಾಯಕ ಸ್ಥಿತಿಯನ್ನು ಗಮನಿಸಬಹುದು. ಅಸಹಾಯಕಳಾದ ಶಾಲಮ್ಮ ಹೆಣದ ವಾಸನೆಯನ್ನು ಆಕೆಯ ಆಲಿಂಗನದಿಂದ ಕಾರಂಜಿಯಂತೆ ಚಿಮ್ಮಿದ ರಸವನ್ನು ಲೆಕ್ಕಿಸದೆ ಅಪ್ಪಿಕೊಳ್ಳುತ್ತಾಳೆ ಗಂಡನ ಮೇಲಿನ ಪ್ರೀತಿಯಿಂದ. ಬಾಷನನ್ನು ಗೌಡರು ಕಟ್ಟಿಹಾಕಿ ಪೋಲೀಸರಿಗೆ ಕೊಡುತ್ತೇವೆಂದಾಗ ಚೀರಿಕೊಳ್ಳುತ್ತಾಳೆ. ಕೊನೆಗೂ ಬಾಷ ಜೈಲಿಗೆ ಹೋಗುತ್ತಾನೆ. ಅಲ್ಲಿ ಪೋಲೀಸ್ ಠಾಣೆಯ ಆವರಣದಲ್ಲೇ ಗೌಡನ ಮುಖಕ್ಕೆ ಚಪ್ಪಲಿಯಿಂದ ಬಾರಿಸಿ ವೀರವನಿತೆಯಂತೆ ಪೇದೆಗಳ ದೃಷ್ಟಿಗೆ ಗೋಚರಿಸುತ್ತಾಳೆ.

ಶಾಲಮ್ಮನ ಮಗಳಾದ ಬೇಗಂ ಮುಗ್ದೆಯಂತೆ ಗೋಚರಿಸುತ್ತಾಳೆ. ಅಪ್ಪ ದೆವ್ವವಾಗಿ, ಹಿಂಸಿಸುವವರನ್ನು ಕಾಡಿದರೆ ಹೇಗೆ? ಎಂದು ಅಲೋಚಿಸುತ್ತಾಳೆ. ತಾನು ಕಂಡ ಕನಸನ್ನು ವಿವರಿಸುತ್ತಾ ಗೌಡನ ಕ್ರೂರ ಮುಖವನ್ನು 'ಥೇಟ್ ಹುಲಿಯಂತಿದ್ದ ಕಣಮ್ಮ' ಎಂದು ಹೇಳುತ್ತಾಳೆ. ಕೊನೆಗೆ ತನ್ನ ಅಪ್ಪನ ಹೆಣ ನೋಡಿದ ಕಾರಣದಿಂದ ಭಯಬೀತಳಾಗಿ ಜ್ವರ ಬಂದು ಮಲಗುತ್ತಾಳೆ. ಕಥೆಯ ಅಂತ್ಯದಲ್ಲಿ ತನ್ನಪ್ಪನ ದೆವ್ವ ಜೀವ ತನಗೆ ಬಂದು ಬಡಕಂಡಂತೆ ವರ್ತಿಸುತ್ತಾಳೆ. ವಸ್ತವಿಕ ಪ್ರಪಂಚದಲ್ಲಿ ಅತ್ತೆ ಸೊಸೆಯರ ನಡುವಿನ ಹೊಂದಾಣಿಕೆ ಇಲ್ಲದಿರುವಂತೆಯೇ ಈ ಕಥೆಯಲ್ಲಿ ಬರುವ ಅತ್ತೆ ನಿಂಗವ್ವ ಮತ್ತು ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವರ ಜೀವನವೂ ಇದೆ. ನಿಂಗವ್ವನಿಗೆ ಮನೆಯಲ್ಲಿ ಏನೇ ಆಗುತ್ತಿದ್ದರು ತಾನು ಮಾಡಿದ ಅಡುಗೆ ನಷ್ಟವಾಗುತದಲ್ಲ ಎಂಬ ಚಿಂತೆ ಕಾಡುತ್ತದೆ.

ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ ಕಥೆಯಲ್ಲಿ ಬರುವ ಪ್ರಮುಖ ಮಹಿಳಾ ಪಾತ್ರಗಳೆಂದರೆ, ತಿಪ್ಪವ್ವ, ಆಕೆಯ ಅತ್ತೆ ಹಾಗೂ ಮಗಳು ರತ್ನ, ಗಂಡನನ್ನು ಕಳೆದುಕೊಂಡ ತಿಪ್ಪವ್ವ ಅತ್ತೆಯ ಬೈಗುಳಗಳನ್ನು ತಡೆದುಕೊಳ್ಳುತ್ತಾ, ಮನೆಯ ಮರ್ಯಾದೆಯನ್ನು ಕಾಪಾಡುತ್ತಾ, ಕೂಲಿ ಮಾಡಿ ತಂದ ಹಣದಿಂದ ಹಬ್ಬದ ದಿನ ಅಡುಗೆ ಮಾಡಿ ಸಂಪ್ರದಾಯದಂತೆ ಅಯ್ನೋರ್ನ ಕರೆಯಿಸಿ ಊಟ ಹಾಕಿದಾಗ ಆತ ಎಲ್ಲವನ್ನು ತಿಂದುಹಾಕುತ್ತಾನೆ. ಉಳಿದ ಒಂದೇ ಒಂದು ಹೋಳಿಗೆಯಲ್ಲಿ ಮಕ್ಕಳಿಬ್ಬರನ್ನು ಸರಿಪಡಿಸುವಾಗ ಅಸಹಾಯಕಳಂತೆ ಕಾಣಿಸುತ್ತಾಳೆ. ಅತ್ತೆ ಮಗ ಸತ್ತ ಮೇಲೆ ಸೊಸೆಯ್ನು ಬೈಯುವುದರಲ್ಲೇ ಕಾಲ ಹಾಕುತ್ತಾ ಮೊಮ್ಮಕ್ಕಳ ಕಣ್ಣಿಗೆ ಕೆಟ್ಟ ಹೆಂಗಸಾಗಿ ಕಾಣಿಸುತ್ತಾಳೆ. ರತ್ನ ಸಣ್ಣ ಹುಡುಗಿಯಾದರು ಕೊನೆಯಲ್ಲಿ ಇಡೀ ವ್ಯವಸ್ಥೆಯ ವಿರುದ್ದ ಮಾಡುವ ಪ್ರತಿಭಟನೆಯ ಆಟದಲ್ಲಿ ನಾಯಕಿಯಂತೆ ಗೋಚರಿಸುತ್ತಾಳೆ. ಆ ರೀತಿ ಮಾಡುವುದರಿಂದ ಮಾತ್ರವೇ ಶೋಷಿತ ವರ್ಗ ಅಭಿವೃದ್ಧಿ ಹೊಂದಲು ಸಾಧ್ಯ ಎಂಬ ತತ್ಯವನ್ನು ತೆರೆದಿಡುತ್ತಾಳೆ.

ದೇವರ ಹೆಣ ಕಥೆಯಲ್ಲಿ ಶೊಣ್ಣಿಯ ಹೆಂಡತಿ ಪಾತ್ರ ಕ್ವಚಿತ್ತಾಗಿ ಕಾಣಸಿಗುತ್ತದೆ. ಆಕೆಯ ಮಾತು "ಗೋಡ್ರ ಎತ್ತು ಸತ್ತ್ರೈತಂತ ಓಗಿದ್ಯಾ"[೫೫] ಎಂಬಲ್ಲಿ ಹಸಿವಿನ ಧಾರುಣ ಚಿತ್ರವಿದೆ. ಕಥೆಯ ಕೊನೆಯಲ್ಲಿ ಶೊಣ್ಣಿಯನ್ನು ಪೋಲೀಸರು ಬಿಟ್ಟು ಹೋಗುವಾಗ ಆತನೊಡನೆ ನಮ್ಮನ್ನು ಜೇಲಿಗ್ರಾಕಿ ಎಂದು ಕೇಳಿಕೊಳ್ಳುತ್ತಾಳೆ. ಇದೆ ಕಥೆಯಲ್ಲಿ ಶೊಣ್ಣಿಯ ಮಕ್ಕಳ ಪಾತ್ರ ಚಿತ್ರಣ ಹೀಗಿದೆ. "ಆಪಾರೀ ತಿಮ್ಮಿ, ಶುಲ್ಡಿ ಊಟ ಮಾಡುವ ಆಟ ಆಡುತ್ತಿದ್ದರು".[೭] ಎಂಬಲ್ಲಿ ಧಾರುಣತೆ ಎದ್ದು ಕಾಣುತ್ತದೆ. ಮತ್ತೆ ಮುಂದೆ ಕಥೆಯಲೆಲ್ಲೂ ಈ ಪಾತ್ರಗಳ ಬಗೆಗಿನ ವಿವರಣೆ ಕಾಣಸಿಗುವುದಿಲ್ಲ.

ಓಗೆ ಕುಂವೀ ಅವರ ಕಥೆಗಳಲ್ಲಿ ಮಹಿಳಾ ಪಾತ್ರಗಳು ನೋವನ್ನು ಅನುಭವಿಸುತ್ತಲೇ ತಮ್ಮ ಜೀವನದ ಜೊತೆಗೆ ಕುಟುಂಬದ ಜೀವನ ನಿರ್ವಹಣೆಯ ಹೊಣೆಯನ್ನು ಹೊತ್ತವರಂತೆ ಗೋಚರಿಸುತ್ತಾರೆ.

ಅಡಿಟಿಪ್ಪಣಿ:

೧. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ [೧೯೯೬] ಪುಟ ೨೨

೨. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ಧಾರವಾಡ [೨೦೦೨] ಪುಟ ೧೭

೩. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ [೧೯೯೬] ಪುಟ ೯

೪. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು [೨೦೦೭] ಪುಟ ೧೪೫

೫. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು [೨೦೦೭] ಪುಟ ೬೨

೬. ....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು [೨೦೦೭] ಪುಟ ೫೮

ಅಧ್ಯಾಯ ೭

ಅಭಿವ್ಯಕ್ತಿ ವಿಧಾನ

ಅಭಿವ್ಯಕ್ತಿ ವಿಧಾನ

ಸಣ್ಣ ಕಥಾ ಸಾಹಿತ್ಯ ಪ್ರಕಾರದಲ್ಲಿ ಅಭಿವ್ಯಕ್ತಿ ವಿಧಾನ ಅತ್ಯಂತ ಮುಖ್ಯವಾದುದು. ಅಭಿವ್ಯಕ್ತಿ ವಿಧಾನವು ಕಥೆಗಳ ಭಾಷೆ ಮತ್ತು ತಂತ್ರಗಳನ್ನು ಒಳಗೊಂಡಿರುತ್ತದೆ. ಕಥಾ ವಸ್ತು ಬಹುತೇಕ ಸಂದರ್ಭಗಳಲ್ಲಿ ಕಥೆಯ ಭಾಗವನ್ನು ನಿರ್ಧರಿಸುತ್ತದೆ. ವಸ್ತು ಗಹನವು ಮಹತ್ವರವೂ, ಗಂಭೀರವೂ ಆಗಿದ್ದರೆ ಅದಕ್ಕೆ ಸೂಕ್ತವಾದ ಭಾಷೆಯಲ್ಲಿ ಅವು ಅಭಿವ್ಯಕ್ತಗೊಳ್ಳುತ್ತವೆ. ಕಥಾ ವಸ್ತು ಮತ್ತು ನಿರುಪಣಾ ಭಾಷೆಯ ನಡುವೆ ಹೊಂದಾಣಿಕೆಯ ಸಮಸ್ಯೆ ಏರ್ಪಟ್ಟು ಬಿರುಕು ಕಾಣಿಸಿಕೊಳ್ಳುತ್ತದೆ. ಹಾಗೆ ಕಥಾ ವಸ್ತು ಗಹನವಾದದು. ಗಂಭೀರವಾದದು ಆಗಿದ್ದು ಅದು ನಿರುಪಣೆಗೊಂಡಿರುವ ಭಾಷೆ ಸರಳವಾಗಿದ್ದರೆ ಅದು ಸಹ ಅಪಾಯ. ಇಂತಹ ಸೂಕ್ಷ್ಮತೆಯ ಹಿನ್ನಲೆಯಲ್ಲಿ ಕೃತಿಯ ಶ್ರೇಷ್ಟತೆ ನಿರ್ಧಾರವಾಗುತ್ತದೆ. ಕಥಾ ಸಾಹಿತ್ಯವು ಇನ್ನುಳಿದ ಸಾಹಿತ್ಯ ಪ್ರಕಾರಗಳಿಂದ ಭಿನ್ನವಾದ ಬರಹವಾದುದರಿಂದ ಅದು ಗದ್ಯದ ಭಾಷೆಯನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಜೊತೆಗೆ ಕಥಾ ಸಾಹಿತ್ಯದ ಭಾಷೆ ಮಾತಿಗೆ ಹತ್ತಿರವಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಅದು ಯಥಾವತ್ತಾದ ಆಡುಮಾತಲ್ಲ. ಅದು ಅವಶ್ಯಕನುಗುಣವಾಗಿ ರೂಪಾಂತರಗೊಂಡ ಭಾಷೆ ಕೆಲವು ಕಥೆಗಳಲ್ಲಿ ಲೇಖಕರು ತಾವೂ ಹುಟ್ಟಿಬೆಳೆದ, ವಾಸಮಾಡುತ್ತಿರುವ ಪ್ರದೇಶಗಳ, ಪ್ರಾದೇಶಿಕ ಭಾಷೆಯನ್ನು ಬಳಸಿರುವುದನ್ನು ಗುರುತಿಸಬಹುದು. ಅದಕ್ಕೆ ಉತ್ತಮ ಉದಾಹರಣೆಗಳೆಂದರೆ, ದೇವನೂರು ಮಹಾದೇವ ಹಾಗೂ ಕುಂ.ವೀರಭದ್ರಪ್ಪನವರು.

ಅಭಿವ್ಯಕ್ತಿಯ ವಿಧಾನದಿಂದ ಸಣ್ಣ ಘಟನೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಸಾಧ್ಯ ಅದು ಸಣ್ಣ ಕಥೆಗಳ ಲಕ್ಷಣವು ಆಗಿದೆ. ಕೆಲವೊಮ್ಮೆ ತಂತ್ರಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿದಾಗಲೇ ಕಥೆಯ ಸಂಪೂರ್ಣ ಆಶಯವನ್ನು ತಿಳಿದುಕೊಳ್ಳಲು ಸಾಧ್ಯ. ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಪ್ರಮುಖವಾದ ಮತ್ತೊಂದು ಸಂಗತಿಯೆಂದರೆ, ಕಥೆಗಳ ಸಂರಚನೆಗೂ ಸಮಕಾಲೀನ ಸಮಾಜದ ಸಂರಚನೆಗೂ ನಡುವೆ ವ್ಯತ್ಯಾಸವಿರಬಾರದೆನಿಸುತ್ತದೆ. ಕಥೆಗಾರರಿಗೆ ಇರುವ ಸಾಮಾಜಿಕ ಆಸ್ತೆ ಅವರ ಅಭಿವ್ಯಕ್ತಿ ವಿಧಾನದಿಂದ ಗೋಚರಿಸುತ್ತದೆ.

ಅಭಿವ್ಯಕ್ತಿ ತಂತ್ರಗಳಲ್ಲಿ ಪ್ರತಿಮೆ, ಸಂಕೇತಗಳಂಥ ವಿಧಾನಗಳನ್ನು ಪ್ರಮುಖವಾಗಿ ಕಾಣಬಹುದು. ಇಷ್ಟೇ ಅಲ್ಲದೆ ಕಥೆಗಾರ ತನ್ನ ಕಥನದೊಂದಿಗೆ ಎರಡು ವಿಧವಾದ ಸಂಬಂಧಗಳನ್ನು ಇಟ್ಟುಕೊಳ್ಳಬಹುದು ಅದರ ವಿವರಣೆಯನ್ನು ಜಿ.ಎಸ್. ಆಮೂರ ರವರು ಈ ರೀತಿ ಹೇಳುತ್ತಾರೆ. ಕಥನಕಾರ ತನ್ನ ಕಥನದ ಹೊರಗೆ ನಿಂತು ಕತೆಯನ್ನು ಹೇಳಿದಾಗ ಅದು ಅನ್ಯ ಕಥನವಾಗುತ್ತದೆ. ಈ ಪ್ರಕಾರದಲ್ಲಿ ಕಥನಕಾರನಿಗೆ ಸರ್ವ ಸಾಕ್ಷಿತ್ವದ ಅಧಿಕಾರವಿರುತ್ತದೆ. ಇಂಥ ಕಥನಗಳಲ್ಲಿ ಕಥಾ ಕ್ಷೇತ್ರವು ಸೀಮಿತವಾಗಿರುತ್ತದೆ ಎಂಬುದು ಅಕ್ಷರಶಃ ಸತ್ಯವೆನಿಸುತ್ತದೆ. ಉದಾಹರಣೆಗೆ ಬಂಡಾಯ ಕಾಲದ ಕಥೆಗಳನ್ನು ನೋಡಬಹುದು.

ಭಾಷೆ ಎಂಬುದು ಸಾಮಾಜಿಕ ಉತ್ಪನ್ನವಾಗಿದ್ದು ಅದು ಸಮಾಜದ ಅನೇಕ ಗ್ರಹಿಕೆಗಳನ್ನು ಒಳಗೊಂಡಿರುತ್ತದೆ. ಅಂತಹ ಭಾಷೆ ನೇರವಾಗಿ ಸಾಹಿತ್ಯದಲ್ಲಿ ಬಳಕೆಗೊಳ್ಳದೆಎ ರೂಪಾಂತರವಾಗಿ ಬಳಕೆಗೊಳ್ಳತ್ತದೆ. ಇಡೀ ಭಾಷೆಯು ಕಲಾತ್ಮಕ ಎನಿಸುತ್ತದೆ. ಒಂದು ಕಥೆಯಲ್ಲಿ ಬಳಕೆಯಾಗಿರುವ ಭಾಷೆ ಕಲಾತ್ಮಕವಾಗಿ ಬಳಸಲ್ಪಟ್ಟಿದ್ದರೆ ಅದು ಶ್ರೇಷ್ಟವಾಗಿದೆ ಎಂದು ತೋರುತ್ತಿದ್ದರೂ ಸಹ ಶ್ರೇಷ್ಟವೆಂದು ಪರಿಗಣಿಸಲೇ ಬೇಕಾಗಿಲ್ಲ ಆ ಕಲಾತ್ಮಕತೆ ಭಾಷೆಯ ಒಳಗೆ ಇರಬೇಕಾಗುತ್ತದೆ. ಕೆಲವೊಮ್ಮೆ ಕವಿತೆಗಳು ಕಲಾತ್ಮಕ ಸೋಗಿನಲ್ಲಿ ಬಹುಜನ ವಿರೋಧಿ ನಿಲುವನ್ನು ತಾಳುತ್ತವೆ. ಇಂತಹ ಕಾರಣದಿಂದಲೆ ಕುವೆಂಪುವಿನಂತಹ ಮಹತ್ವದ ಕವಿಗಳು ಅನೇಕ ಕವನಗಳಲ್ಲಿ ಪ್ರತಿಭಟನೆಯ ರೂಪವನ್ನು ತೀರಾ ಸರಳವಾಗಿ ಬರೆದರು.

ನಾನು ಮೊದಲೆ ಹೇಳಿದಂತೆ ಯಾವುದೇ ಕಥೆಯ ಭಾಷೆಯನ್ನು ಅದರಲ್ಲಿನ ಕಥಾವಸ್ತು ನಿರ್ಧರಿಸುತ್ತದೆ. ಅದರೊಡನೆ ಕಥೆಗಳ ಹೊರ ಸಂಗತಿಗಳು ಸಾಗಿ ಕಥೆಗಳ ಭಾಷೆಯನ್ನು ಅದರೊಳಗಿನ ಆಲೋಚನೆಯನ್ನು ನಿಯಂತ್ರಿಸುತ್ತವೆ. ಕೆಲವೊಮ್ಮೆ ಲೇಖಕನ ಮನಸ್ಥಿತಿಯು ಭಾಷೆಯ ಮೇಲೆ ಪ್ರಭಾವ ಬೀರುವುದುಂಟು, ಕಥೆಯ ವಸ್ತು ತನ್ನ ಅಗತ್ಯಕ್ಕೆ ತಕ್ಕಂತೆ ಸರಳ ಹಾಗೂ ಕಲಾತ್ಮಕವಾಗಿ ಭಾಷೆಯನ್ನು ಬಳಸಿಕೊಳ್ಳುತ್ತದೆ.ಆದರೆ ಸರಳತೆ ಎಂಬುದು ಕಥೆಗಳ ಅಭಿವ್ಯಕ್ತಿಯ ಅವಗುಣವೆಂದೇನು ಅಲ್ಲ. ಸರಳ ವಿಚಾರಗಳನ್ನು ಅಥವಾ ಸರಳ ವಸ್ತುವನ್ನು ನಿರುಪಿಸುವಾಗ ಭಾಷೆ ಸರಳವಾಗಿಯೆ ಇರಬೇಕೆಂಬುದು ನಿರ್ವಿವಾದ

ಸಂಗತಿ ಎನ್ನಬಹುದು. ಕಥೆಗಳಲ್ಲಿ ಬಳಕೆಗೊಳ್ಳುವ ಭಾಷೆಯನ್ನು ಎರಡು ತರಪವಾಗಿ ಕಾಣಬಹುದು. ಮೊದಲನೆಯದು ಕಥಾನಿರೂಪಕನ ಭಾಷೆ ಹಾಗೂ ಕಥೆಯ ಒಳಗಿನ ಪಾತ್ರದ ಭಾಷೆ ಎರಡೂ ಒಂದೇ ಆಗಿರುತ್ತದೆ. ಅಂದರೆ, ಪ್ರಾದೇಶಿಕವಾಗಿರಬೇಕು. ಅಥವಾ ಗ್ರಾಂಥಿಕವಾಗಿರಬಹುದು. ಎರಡನೆಯದು ನಿರೂಪಕನ ಭಾಷೆ ಕಥೆಯೊಳಗಿನ ಪಾತ್ರದ ಭಾಷೆ ನಡುವೆ ಭಿನ್ನತೆಯಿರುವುದು. ಅಂದರೆ, ನಿರೂಪಕನ ಭಾಷೆ ಗ್ರಾಂಥಿಕವಾಗಿದ್ದು ಕಥೆಯೊಳಗಿನ ಪಾತ್ರದ ಭಾಷೆ ಪ್ರಾದೇಶಿಕವಾಗಿರಬೇಕು. ಅಥವಾ ನಿರೂಪಕನ ಭಾಷೆಯೇ ಪ್ರಾದೇಶಿಕವಾಗಿದ್ದು ಕಥೆಯೊಳಗಿನ ಪಾತ್ರದ ಭಾಷೆ ಗ್ರಾಂಥಿಕವಾಗಿಯೂ ಇರಬಹುದು. ಹೀಗೆ ಭಾಷೆ ಅಭಿವ್ಯಕ್ತಿ ಸಾಧನವಾಗಿ ಬಳಕೆಗೊಳ್ಳುತ್ತಿರುತ್ತದೆ. ಈ ಮೇಲಿನ ಸಂಗತಿಗಳು ಚಾರಿತ್ರಿಕ ಒತ್ತಡದಿಂದ ನಿರ್ಮಾಣವಾಗುತ್ತವೆ. ಎಂಬುದು ಗಮನಿಸವಬೇಕಾದ ಸಂಗತಿ.

ನವೋತ್ತರ ಕನ್ನಡ ಕಥೆಗಾರರಲ್ಲಿ ಪ್ರಮುಖರಾದ ಕುಂವೀ ಅವರ ಕಥೆಗಳ ಅಭಿವ್ಯಕ್ತಿ ವಿಧಾನವನ್ನು ಕುರಿತು ಹೇಳುವಾಗ ದಲಿತ ಬಂಡಾಯ ಸಾಹಿತ್ಯದ ಸಮಗ್ರತೆಯತ್ತ ಚಿತ್ತ ಹರಿಸಬೇಕಾಗುತ್ತದೆ. ಒಂದೇ ಕೋಮಿಗೆ ಸೇರಿದ ಒಳಪಂಗಡಗಳ ಬೇರೆ ಬೇರೆ ಕೋಮುಗಳ ನಡುವಿನ ಸಂಘರ್ಷ ಹಾಗೂ ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷಗಳ ಮುಖಾಮುಖಿಯನನು ಮನೋಜ್ಞವಾಗಿ ಚಿತ್ರಿಸಿರುತ್ತಾರೆ.

ಕುಬುಸ ಕಥೆಯಲ್ಲಿ ಆಧುನಿಕತೆಯನ್ನೆ ಕಾಣದಿರುವ ಹಳ್ಳಿಯೊಂದರ ಚಿತ್ರಣವನ್ನು ಚಿತ್ರಿಸುವ ರೀತಿಯಲ್ಲೇ, ಗ್ರಾಮಭಾರತದ ಬದಲಾಗದೆ ಇರುವ ಸಂಗತಿ, ಬದಲಾಗಬೇಕಾಗಿರುವ ಅಗತ್ಯ ಏನೆಂಬುದನ್ನು ಸೂಚಿಸುತ್ತಾರೆ. ಈ ಕಥೆಯ ಆರಂಭದ ನಿರೂಪಣಾ ವಿಧಾನವೇ ಅತ್ಯಂತ ಮನೋಜ್ಞವಾಗಿದೆ. “ಪೂರ್ವದ ಸಿಂಧವಾಡಿ ಪ್ರಾಂತದಿಂದ ಪಶ್ಚಿಮದ ಕುಂತಳ ನಾಡನ್ನು ಬೇರ್ಪಡಿಸುವ ನದಿಯೊಂದರ ಅವಶೇಷವನ್ನು ಈಗಲೂ ನಮ್ಮ ಜಿಲ್ಲೆಯ ನೈರುತ್ಯ ದಿಕ್ಕಿನಲ್ಲಿ ಕಾಣಬಹುದು. ಯಾವ ಕಲ್ಲು ಎತ್ತಿದರೂ ಒಂದಾದರು ಚೇಳು ಗೋಚರಿಸುವ ಚೇಳುಗುಡ್ಡವೂ, ಯಾವುದಾದರೂ ಪೊದೆ ಕಲಕಿದರೆ ಒಂದಾದರು ಬಳವಡಕನಂಥ ಹಾವು ಗೋಚರಿಸುವ ಹಾವು ಗುಡ್ಡವೂ ನತದೃಷ್ಟ ನದಿಯ ಎಡಬಲ

ಮಗ್ಗುಲಲ್ಲಿವೆ. ಈ ಎರಡು ಗುಡ್ಡಗಳ ತಪ್ಪಲಲ್ಲಿರುವ ಏಕೈಕ ಗ್ರಾಮವಾದ ವಡ್ಡಟ್ಟಿಯು ಸ್ವಾತಂತ್ರ್ಯೋತ್ತರ ಭಾರತದಲ್ಲೂ ಶಿಲಾಯುಗ ಕಾಲದ ಎಲ್ಲ ಲಕ್ಷಣ ಸ್ವಭಾವಗಳನ್ನು ಉಳಿಸಿಕೊಂಡು ಬಂದಿದೆ. ಚೇಳುಗಳು, ಹಾವುಗಳು ನಾಗರಿಕತೆಯ ನೆರಳು ಆ ಗ್ರಾಮದ ಮೇಲೆ ಬೀಳದ ಹಾಗೆ ನೋಡಿಕೊಳ್ಳುತ್ತಿರುವವು. ಕೇಂದ್ರ ಸರ್ಕಾರದವರು ಹಾವಿನಗುಡ್ಡ ಅಷ್ಟುದೂರ ಇದೆ ಅನ್ನುತ್ತಿರಲಿಕ್ಕೆ ವಾಪಸ್ಸಾದರೆ, ರಾಜ್ಯ ಸರಕಾರದವರು ಚೇಳುಗುಡ್ಡ ಅಷ್ಟುದೂರ ಇದೆ ಅನ್ನುತ್ತಿರಲಿಕ್ಕೆ ವಾಪಸ್ಸಾಗುತ್ತಿರುವರಾದ್ದರಿಂದ ವಡ್ಡಟ್ಟಿ ಎಂಬ ಗ್ರಾಮವು ರಾಜಕೀಯ ನಕ್ಷೆಯಲ್ಲಿ ಜಾಗಪಡೆದಿಲ್ಲ"[೧] ಆ ಹಳ್ಳಿ ಮಾಧ್ಯಮ ಪರಮಾವಧಿ, ವೈಚಾರಿಕತೆಯ ಯಾವ ಹಿನ್ನೆಲೆಯೂ ಇಲ್ಲದೆ ಬಳಲುವ ಈ ಪರಿಯನ್ನು ಗುರುತಿಸುವ ಕುಂವೀ ಅವರ ಭಾಷೆ ಮತ್ತು ತಂತ್ರ ಅತ್ಯಂತ ಮನೋಜ್ಞವಾಗಿದೆ. ಜೊತೆಗೆ ತಮಗೆ ಬರಬೇಕಾದ ಸೌಲಭ್ಯಗಳನ್ನು ಕೇಳುವ ಗೋಜಿಗೆ ಹೋಗದ, ಜಾಗೃತ ಪ್ರಭಾವವೇ ಇಲ್ಲದೆ ನರಳುವ ಚಿತ್ರಣ ಆಶ್ಚರ್ಯ ಹುಟ್ಟಿಸುತ್ತದೆ. "ಆ ಗ್ರಾಮವಾಗಲೀ, ಆ ಗ್ರಾಮದ ಮಂದಿಯಾಗಲೀ ಭೂತಕಾಲದ ಉಕ್ಕಿನ ತೆರೆ ಸೀಳಿಕೊಂಡು ವರ್ತಮಾನದ ಜಗಜಗಿಸುವ ರಂಗಭೂಮಿಯತ್ತ ಇಣುಕಿದವರಲ್ಲ."[೨] ಈ ಕಥೆಯ ನಾಯಕಿಯ ಹೆಸರೆ ತುಂಬಾ ಅರ್ಥಪೂರ್ಣವಾದದ್ದು. ಆಕೆಯ ಹೆಸರು ಬಂಡೆವಜ್ಜಿ ಬಂಡೆಯನ್ನು ಸೂಚಿಸುವ ಆಕೆಯ ಸ್ವಭಾವದಲ್ಲಿ ಕುಂವೀ ಕಥೆಯಲ್ಲಿ ಎಲ್ಲಿಯೂ ಬದಲಾವಣೆಯನ್ನು ಸ್ವೀಕರಿಸದೆ ಇರುವ ಕ್ರಮವನ್ನು ಗಮನಿಸಬಹುದು.

ಕುಂವೀ ಅವರ ಅತ್ಯಂತ ಪ್ರಸಿದ್ಧವಾದ ಕಥೆ 'ದೇವರ ಹೆಣ' ಕನ್ನಡದ ಬಹುತೇಕ ವಿಮರ್ಶಕರ ಗಮನ ಸೆಳೆದಿದೆ. ಈ ಕಥೆಯ ಭಾಷೆ ಮತ್ತು ತಂತ್ರ ತುಂಬಾ ಶಕ್ತಿತಯುತವಾದುದು. ಏಕಕಾಲಕ್ಕೆ ಶೋಷಿತರ ಹಸಿವು, ದೇವರ ಬಗೆಗಿನ ವ್ಯಂಗ್ಯ ಹಾಗೂ ವ್ಯವಸ್ಥೆಯ ಬಗ್ಗೆ ಆಕ್ರೋಶ ಎಲ್ಲವನ್ನು ವೈನೋದಿಕ ರೀತಿಯಲ್ಲಿ ಅಭಿವ್ಯಕ್ತಿಸುವ ಕ್ರಮ ಸೊಗಸಾದುದು. ಈ ಕಥೆಯಲ್ಲಿ ಹಸಿವಿನ ಚಿತ್ರಣವನ್ನು ಈ ರೀತಿ ಚಿತ್ರಿಸಿರುವುದನ್ನು ನೋಡಬಹುದು. "ತಿಂದಕೊಳ ಮೈಗೆ ಅತ್ತದಂತೆ ಒಂದೇ ಸಮ್ನೆ ಕಡೀತವೆ ಅಳಾದೋವು ಎಂದು ಅವನು ಪಂಚಮದೇವ ನುಡಿಯುತ್ತಿರುವುದು ಬೇರೆ ಕೇಳಿಸಿತು ಮತ್ತಲ್ಲಿಯೇ ಅಪಾರಿ ತಿಪ್ಪಿಕುಲ್ಡಿ ಊಟಮಾಡುವ ಆಟ ಆಡುತ್ತಿದ್ದುದು ಕಣ್ಣಿಗೆ ಬಿತ್ತು. ಆ ಆಟದಲ್ಲಿ ತಿಮ್ಮಿ

ನವಣಕ್ಕಿ ಬಾನದ ಪಾಲ್ಟು ಮಾಡಿದ್ದಳು. ಕುಲ್ಡಿ ಘಮಾಡಿಸುವ ಸಾರಿನ ಪಾಲ್ಟು ಮಾಡಿದ್ದಳು. ಅವೆರಡನ್ನು ಹಿತವಾಗಿ ಕಲೆಸಿ ಉಂಡತೆ, ಡೇಗಿದಂತೆ ಮತ್ತೆ ಮತ್ತೆ ನಟಿಸಿದ ಅಪಾರಿಯ ತಲೆಸವರಿ ಅಡುಗೆ ಮನೆ ಪ್ರವೇಶಿಸಿದ"[೩] ಈ ಕಥೆಯಲ್ಲಿ ದೇವರ ಹೆಣವನ್ನು ಕೇಳಲು ಹೋಗುವ ತೊಣ್ಣ್ಣಿ, ಮುಂದೆ ಕಥೆಯ ಬಗ್ಗೆ ಏಳಬಹುದಾದ ಅವೈಚಾರಿಕ ಸಂಗತಿಗಳಿಗೆ ಹಾಗೂ ಒಟ್ಟು ವ್ಯವಸ್ಥೆಯನ್ನೆ ವಿಡಂಬಿಸುವ ಕುಂವೀ ಅವರ ಜಾಗೃತ ಪ್ರಜ್ಞೆ ಅತ್ಯಂತ ಕ್ರಿಯಾ ಶೀಲವಾದುದು.

ಕರಗಲ್ಲ ನೆತ್ತಿಮೇಲಿತ್ತು ಪುಚ್ಚಳ್ಳ ಎಣ್ಣೆ, ಅದನ್ನು ನಾಯಿಯೊಂದು ನೆಕ್ಕುತ್ತಿದ್ದಿತು. ಕರಗಲ್ಲು ಬೇರೆ ಅಲ್ಲ, ಪರಮೇಶ್ವರನ ನೆತ್ತಿ ಬೇರೆ ಅಲ್ಲ ಎಂದು ತಿಳಿದವನಾದ ತೊಣ್ಣಿಗೆ ಸಿಟ್ಟು ಬಂತು... ಮುದುಕನ ಕಟ್ಟೆಯಲ್ಲಿ ಎತ್ತು ಕೊಯ್ಯುವಾಗ ಜೊಲ್ಲು ಸುರಿಸುತ್ತ ಅದು ಬಂದಾಗ ತಾನು ತಪ್ಪದೆ ಕಲ್ಲಿನಿಂದ ಅದರ ಕಾಲು ಮುರಿದು ಕುಂಟುತ್ತ ಹೋಗುವುದನ್ನು ನೋಡಿ ನಗಬೇಕೆಂದು ನಿಶ್ಚಯಿಸಿದನು"[೪] ವ್ಯವಸ್ಥೆಯ ಬಗ್ಗೆ ಲೇಖಕರು ಪ್ರಕಟಿಸುವ ಆಕ್ರೋಶ ಓದುಗನನ್ನು ತೀರಭಾವುಕತೆಗೆ ಒಳಗಾಗದಿರುವ ಹಾಗೆ ಎಚ್ಚರವಹಿಸುತ್ತದೆ. ಹಸಿವಿನ ತೀವ್ರತೆಯನ್ನು ಇನ್ನೊಂದು ಬಗೆಯಿಂದಲೂ ನೋಡುವ ಸಾಧ್ಯತೆಯನ್ನು ತೆರೆದು ತೋರಿಸುತ್ತದೆ. ಸತ್ತ ಎತ್ತಿನ ಸಮಾಧಿಯನ್ನು ಕಿತ್ತ ತಪ್ಪಿಗೆ ತೊಣ್ಣಿಯನ್ನು ಬೆದರಿಸಲು ಗೌಡ ಕರೆತಂದ ಪೋಲಿಸರನ್ನು ನೋಡಿ ಕಾರಗೃಹದಲ್ಲಾದರೂ ಒಂದು ಹೊತ್ತು ಊಟಸಿಗಬಹುದೆಂದು ಭಾವಿಸುವ ಆತನ ಸಾಮಾನ್ಯ ತಿಳುವಳಿಕೆಯ ಹಿಂದೆ ಅಸಾಮಾನ್ಯ ಹಸಿವಿನ ಆಕ್ರಂದನವಿದೆ. ಈ ಸನ್ನಿವೇಶವನ್ನು ಮನಕಲಕುವಂತೆ ಹೇಳಬಹುದು. ಆಗ ಓದುಗ ಯಾವುದೇ ಒಂದು ಪಕ್ಷವಹಿಸಿಬಿಡುವ ಸಾಧ್ಯತೆ ಇರುತ್ತದೆ. ಹಾಗಾಗದಂತೆ ಕಥೆಗಾರ ನಿರ್ವಹಿರುವುದು ಅವರ ತಂತ್ರಗಾರಿಯೇ ಆಗಿದೆ.

ಶುಲ್ಕ ಕಥೆಯಲ್ಲಿ ವರ್ಗಸಂಘರ್ಷದ ಒಂದು ರೂಪವಾದ 'ನಕ್ಸಲಿಸಂ' ಅನ್ನು ತುಂಬಾ ಎಚ್ಚರಿಕೆಯಿಂದ ಚಿತ್ರಿಸುತ್ತಾರೆ. ಈ ಕಥೆಯ ಆರಂಭವನ್ನು ಗಮನಿಸಿದರೆ ಕೆಲವು ಸೂಕ್ಷ್ಮ ಸಂಗತಿಗಳು ಹೊಳೆಯುತ್ತವೆ. ಕಥೆಯ ಆರಂಭದಲ್ಲಿ ನಿರೂಪಕ ರಜೆಯಕಾರಣ

[illegible]

[illegible]

[illegible]

[illegible]

ಮನೆಯಲ್ಲಿದ್ದಾನೆ. ಅದು ಆತನ ಹೆಂಡತಿಗೆ ತುಂಬಾ ಸಂತೋಷದ ಸಂಗತಿ. ಹೊರಗೆ ಧಿರಕಾರವಾಗಿ ಮಳೆ ಬರುತ್ತಿದ್ದರೂ, ಒಳಗೆ ವಿದ್ಯುದ್ದೀಪ ನಂದಿದರೂ, ಆ ಇಡೀ ಮನೆಯಲ್ಲಿನ ಮನಸ್ಸುಗಳ ಲವಲವಿಕೆ ಬದುಕಿನಲ್ಲಿರುವ ಸಂತೋಷದ ಅನಂತಕ್ಷಣಗಳನ್ನು ಧ್ವನಿಸುತ್ತದೆ. ಈ ಕಥೆಯಲ್ಲಿನ ನಕ್ಸಲೈಟ್ ಹುಡುಗ ಅಶೋಕನ ಮನೆಯಲ್ಲೂ ಇಂಥದ್ದೆ ವ್ಯವಸ್ಥೆ ಇತ್ತು. ಅಶೋಕನನ್ನು ಕಾಲೇಜಿಗೆ ಸೇರಿಸಲು ಅವನ ಮನೆಯವರು ನಿರಾಕರಿಸಿದಾಗ ನಿರೂಪಕ ಅಪ್ಪಾದಾಯಿ ಶಿವರಾಮರಾಯರ ಮನೆಯ ಚಿತ್ರಣವನ್ನು ನೀಡುವಾಗ ಅಲ್ಲಿನ ವ್ಯವಸ್ಥೆ, ಆಚಾರ, ಸಂಪ್ರಾದಾಯ ಎಲ್ಲವನ್ನು ತೆರೆದು ತೋರಿಸುತ್ತಾನೆ. ಆದರೆ ಮುಂದೆ ಆತನು ನಕ್ಸಲೈಟ್ ಆದಾಗ ಯಾಕೆ ಆಗಿರಬಹುದು ? ಎಂಬುದನ್ನು ಸೂಚ್ಯವಾಗಿ ಹೀಗೆ ಹೇಳುತ್ತಾರೆ. "ತಮ್ಮ ಪೂರ್ವಜರು ಓರಂಗಲ್ಲು ಪ್ರತಾಪರುದ್ರ ಗಜಪತಿಯ ಆಸ್ಥಾನದಲ್ಲಿ ರಾಜಪುರೋಹಿತರಾಗಿದ್ದರು... ಸ್ವಾತಂತ್ರ್ಯೋತ್ತರ ಪ್ರಜಾಪ್ರಭುತ್ವ ಸರ್ಕಾರದ ಭೂ ಸುಧಾರಣೆ ಕಾಯದೆ ಭೂಮಿಯ ಬಹುಭಾಗವನ್ನು ನುಂಗುವವರೆಗೆ ಸುದೀರ್ಘವಾಗಿ ವಿವರಿಸಿದರು... ವೈಧಿಕ ಕಲಿತು ಕುಟುಂಬಕ್ಕೆ ಮಗ ಆಸರೆಯಾಗಲಿ ಎಂಬುದೆ ಮನೋಭಿಲಾಷೆ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು"[೫] ಆದರೆಕುಂವೀ ಎಷ್ಟು ಎಚ್ಚರಿಕೆಯಿಂದ ಕಥೆಯನ್ನು ನಿರ್ವಹಿಸುತ್ತಾರೆ ಎಂದರೆ ಎಲ್ಲರನ್ನು ಒಂದು ಕಡೆಯಿಂದ ಬೂರ್ಜ್ವಾ ಎಂದು ಕೊಳ್ಳುತ್ತಾ ಬರುತ್ತಿರುವ ಈ ಮಹಾಶಯ ತನ್ನ ಹಣೆಗೆ ಈ ಪಟ್ಟಿ ಕಟ್ಟಲಾರ ಬಹುಶಃ!"[೬] ತಾವು ಸ್ವತಃ ಓದಲು ಪ್ರೇರೇಪಿಸಿ ಸಹಾಯ ಮಾಡಿದ್ದ ಅಶೋಕ ಸಂಘಟನೆಗೋಸ್ಕರ ಹಣಬೇಕಾಗಿದೆ ಆದುದರಿಂದ ನೀವು ಹಣ ಕೊಡಿ ಎಂದು ಬಲವಂತಪಡಿಸುವ ಮೂಲಕ ಎಲ್ಲೋ ಒಂದು ಕಡೆ ಎಚ್ಚರ ತಪ್ಪಿರುವ 'ನಕ್ಷಲಿಸಂ' ಅನ್ನು ಗುರುತಿಸುತ್ತಾರೆ.

'ಭಗವತಿ ಕಾಡು' ಕಥೆಯಲ್ಲಿ ಕಥೆಗಾರ ಒಂದು ಶಕ್ತ ಗ್ರಾಮ ಭಾರತದ ಸ್ತ್ರೀ ಸಮುದಾಯದ ಪ್ರತನಿಧಿತ್ವವನ್ನು ಅನಾವರಣಗೊಳಿಸುವ ಕೆಲಸಮಾಡುತ್ತಾರೆ. ಸಹಜವಾಗಿ ಮನುಷ್ಯನಲ್ಲಿರಬಹುದಾದ ಈರ್ಷೆ, ಕೋಪ, ಹೊಟ್ಟೆ ಕಿಚ್ಚು ಎಲ್ಲವನ್ನು ಯಾವ ಎಗ್ಗು–ಸಿಗ್ಗು ಇಲ್ಲದೆ ಪಾರದರ್ಶಕವಾಗಿ ತೋರಿಸುತ್ತಾರೆ. ಬಹುಶಃ ಗ್ರಾಮವೊಂದು ಇನ್ನು ಸ್ವಸ್ಥವಾಗಿರಲು ಇಂಥ ಪಾರದರ್ಶಕ ಮನಸ್ಥಿತಿಯೇ ಕಾರಣವಿರಬಹುದು. ಕಥೆಯಲ್ಲಿ ಸವುಡಪ್ಪ ಮತ್ತು

ನಾಗವ್ವರ ನಡುವೆ ನಡೆಯುವ ಜಗಳ ಇಡೀ ಭಾರತೀಯ ಪಾರಂಪರಿಕ ಅತ್ತೆ ಸೊಸೆಯ ಜಗಳದಂತೆ ಕಂಡರೂ ಅದು ನಾಗರೀಕ ಪ್ರಪಂಚಕ್ಕಿಂತ ಭಿನ್ನ "ಪೆತ್ತಾಕಿ ಶಬ್ಬಾಷ್ ಎನ್ನುಬಹುದೇನೊ ಅಂತ ಮುದುಕಿ ಕಡೆ ಅಂಜುತ್ತ ಅಳುಕುತ್ತ ಭರಮ್ಯ ನೋಡುತ್ತಿರಲು ಅದು 'ವಡೀಅಂದ್ರ ಯಿಂಗ ವಡ್ಯೋದ್ಯೇನೋ_ ನೀನ್ನ ಕಾಲು ಸ್ಯೇದೋಗ ಕಾಲಾಗವುಳಾ ಬೀಳಾ... ಅಯ್ಯೋ ನನ್ನ ಸ್ವಸೀಗೆ ವಟ್ಟೆಗೆಲ್ಲಿ ವಡ್ತ ಬಿತ್ತೋ ಸಿವ್ನೆ"[೭] ಎಂಬುದನ್ನು ಈ ಮಾತುಗಳಲ್ಲಿ ಸೂಚಿಸಿದ್ದಾರೆ. ಗೌಡ ಮರಕಡಿಯಲು ಬಂದಾಗ ಕ್ರೂರ ಪ್ರಬಲ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ಹೋರಾಟ ಮಾಡುವ ತಂತ್ರಗಾರಿಕೆ ತುಂಬ ಸೊಗಸಾಗಿ ಚಿತ್ರಣಗೊಂಡಿದೆ.

ಅಡಿಟಿಪ್ಪಣಿ

೧. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ೨೦೦೨ ಪುಟ ೮

೨. ಭಳಾರೆ ವಿಚಿತ್ರಂ; ಕುಂ.ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ೨೦೦೨ ಪುಟ ೮

೩. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ, ಕ್ರೈಸ್ತಕಾಲೇಜು, ಕನ್ನಡ ಸಂಘ, ಬೆಂಗಳೂರು ಪುಟ ೫೮

೪. ...... ಮಣ್ಣೇ ಮೊದಲು; ಕುಂ.ವೀರಭದ್ರಪ್ಪ, ಕ್ರೈಸ್ತಕಾಲೇಜು, ಕನ್ನಡ ಸಂಘ, ಬೆಂಗಳೂರು ಪುಟ ೬೦

೫. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು ಪುಟ ೧೨

೬. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು ಪುಟ ೧೬

೭. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು ಪುಟ ೨೮

ಅಧ್ಯಾಯ ೮

ಲೇಖಕರ ಧೋರಣೆ

ಲೇಖಕರ ಧೋರಣೆ

ಸಾಹಿತ್ಯ ರಚನೆಯಾಗುವಾಗ ಅದು ಒಂದು ವಸ್ತುವನ್ನು ಒಳಗೊಂಡಿರುತ್ತದೆ. ಆ ವಸ್ತು ಎರಡು ರೀತಿ ಇರುತ್ತವೆ. ಒಂದು, ಅದು ಪುರಾಣಕ್ಕೆ ಅಥವಾ ಚರಿತ್ರೆಗೆ ಸಂಬಂಧಿಸಿದ್ದಿರಬಹುದು. ಅಥವಾ ಪ್ರಚಲಿತ ಬದುಕಿಗೆ ಸಂಬಂಧಿಸಿದ್ದಿರಬಹುದು. ಪುರಾಣ ಹಾಗೂ ಚರಿತ್ರೆಗಳ ಮಿತ್ರ ಮೂಲಕ ಸಮಕಾಲೀನ ಜಗತ್ತನ್ನು ನೋಡುವ ಪರಿ ಇನ್ನೊಂದು ಈ ಕಾಲದ ಸಂಗತಿಗಳ ಮೂಲಕವೇ ಕೃತಿಯನ್ನು ನೋಡುವ ಬಗೆ ಈ ಎರಡು ಕಾರಣದಿಂದ ಕೃತಿಯನ್ನು ನಿರ್ವಹಿಸುವಾಗ ಲೇಖಕ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾಕೆಂದರೆ ಪ್ರತಿಗಾಮಿತನ ಅವನ ಅರಿವಿಗೆ ಬರದೆ ಕೃತಿಯಲ್ಲಿ ಸ್ಥಾನಪಡೆದಿರಬಹುದು. ಆದುದರಿಂದಲೇ ಅನೇಕರು ಪುರಾಣ, ಚರಿತ್ರೆಗಳನ್ನು ಕೃತಿಗಳಲ್ಲಿ ಬಳಸಿಕೊಳ್ಳಲು ಹಿಂಜರಿಯುತ್ತಾರೆ. ಹಾಗೆ ಬಳಸಿಕೊಂಡ ಕೆಲವರು ತಮ್ಮ ಪ್ರತಿಗಾಮಿತನಕ್ಕೆ ಅನುಗುಣವಾಗಿಯೇ ಬಳಸಿಕೊಳ್ಳುತ್ತಾರೆ. ಆದರೆ ಕುವೆಂಪು ಕಾರ್ನಾಡರಂತಹವರು ಮಾತ್ರ ಅದನ್ನು ಮೀರುತ್ತಾರೆ.

ಪ್ರತಿಯೊಬ್ಬ ಸಾಹಿತಿಯೂ ಒಂದು ಕೃತಿಯ ರಚನೆಯ ಸಂದರ್ಭದಲ್ಲಿ ಎರಡು ಮುಖ್ಯ ಸಂಗತಿಗಳನ್ನು ನಿರ್ಧರಿಸಿಕೊಂಡಿರುತ್ತಾನೆ.

(೧) ಕೃತಿಯ ವಸ್ತು (೨) ಅದರ ಅಭಿವ್ಯಕ್ತಿ

ಅಭಿವ್ಯಕ್ತಿ ಕಲಾತ್ಮಕವಾಗಿರಬೇಕು ಎಂಬುದು ಎಲ್ಲಾ ಲೇಖಕರ ಅಭಿಮತವಾಗಿರುತ್ತದೆ. ಅದನ್ನು ಈ ಹಿಂದೆಯೇ ನೋಡಿದ್ದೇವೆ. ಆದರೆ ಕೃತಿಯ ವಸ್ತು ಕೃತಿಕಾರನ ನಿಲುವನ್ನು ಪ್ರಕಟಿಸುತ್ತದೆ. ಕೃತಿಕಾರ ತನ್ನ ನಿಲುವನ್ನು ಪ್ರಕಟಿಸಲು ತಾನೇ ಅದಕ್ಕೆ ಅನುಗುಣವಾದ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಪ್ರಚಲಿತ ವಿದ್ಯಾಮಾನದ ಯಾವುದೋ ಸಂಗತಿ ಅದನ್ನು ಬಾಧಿಸುತ್ತದೆ. ಅದನ್ನು ನೋಡಿ ಅದರ ಬಗ್ಗೆ ತನ್ನದೇ ಆದ ಅಭಿಪ್ರಾಯಕ್ಕೆ ಲೇಖಕ ಬರುತ್ತಾನೆ. ಅನಂತರ ಅದರ ಅಭಿವ್ಯಕ್ತಿಗೆ ಒಂದು ವಸ್ತುವನ್ನು ಆಯ್ದುಕೊಂಡು ಅದನ್ನು ಕಲಾತ್ಮಕಗೊಳಿಸುತ್ತಾನೆ. ಇಲ್ಲಿ ಗಮನಿಸಬೇಕಾದದ್ದು, ವಸ್ತು ಯಾವುದು ಎಂಬುದು. ವಸ್ತುವಿನಲ್ಲಿ ಎರಡು ಅಂಶಗಳಿರುತ್ತದೆ. ಒಂದು ವಾಸ್ತವ ವಾದಕ್ಕೆ ಸಂಬಂಧಿಸಿದ್ದು,

ಇನ್ನೊಂದು ಕಲ್ಪನೆಗೆ ಸಂಬಂಧಿಸಿದ್ದು, "ವಾಸ್ತವಿಕತೆ, ಧೋರಣೆಯಾಗಬಹುದೇ ಹೊರತು ಧೋರಣೆ ವಾಸ್ತವವಾಗಲಾರದು" ಎಂಬ ರಾಗೌರವರ ಮಾತು ಸರಿಯಾದದ್ದು.

ಆದರೆ ಯಾವುದು ವಾಸ್ತವ? ಸಮಾಜದಲ್ಲಿ ಮೇಲ್ನೋಟಕ್ಕೆ ಕಾಣುವ ಸಂಗತಿಗಳೇ? ಅಥವಾ ಇಂತಹ ಪ್ರಚಲಿತ ಸಂಗತಿಗಳ ವಾಸ್ತವದ ಹಿಂದೆ ಇದ್ದಿರುವ ಚಾರಿತ್ರಿಕ ಸಂಗತಿಗಳೇ? ಇವು ಇಂದು ವಿಮರ್ಶೆ ಮಾಡುವಾಗ ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆಗಳು ಕೃತಿಯಲ್ಲಿ ಯಾರ ಪರವಾಗಿ ಕೃತಿಕಾರ ಮಾತನಾಡುತ್ತಾರೆ ಎಂಬುದು ಮುಖ್ಯ ಇದೇ ಒಂದು ಕೃತಿಯ ಲೇಖಕನ ಧೋರಣೆ. ಪಲವೊಮ್ಮೆ ಭಾಷೆಯ ಕಲಾತ್ಮಕತೆಯಲ್ಲಿ ಬಹುಸಂಖ್ಯೆ ವಿರೋಧಿ ನಿಲುವು ಸುಂದರ ಮೈರೂಪ ತಾಳಿ ವಂಚಿಸಿ ಬಿಡಬಹುದು. ಆದುದರಿಂದ ಲೇಖಕನೊಬ್ಬ ಬದುಕಿನ ಬಗ್ಗೆ ಗಂಭೀರ ಕಾಳಜಿಯನ್ನು ಒಳಗೊಂಡ ಒಂದು ಧೋರಣೆಯನ್ನು ರೂಪಿಸಿಕೊಂಡಿರುತ್ತಾನೆ. ಅಥವಾ ಅನುಭವ, ಅಧ್ಯಯನಗಳಿಂದ ರೂಪಿಸಿಕೊಂಡ ಧೋರಣೆಯ ಮುಖಾಂತರ ಬದುಕನ್ನು ಅಳೆಯುತ್ತಾನೆ. ಹೀಗಾಗಿ ಸಾಹಿತ್ಯದ ರಚನೆಯಲ್ಲಿ ಧೋರಣೆ ಅದರ ಅವಿಭಾಜ್ಯ ಅಂಗವಾಗಿರುತ್ತದೆ. ಅದರ ಜೊತೆಗೆ ಲೇಖಕ ಒಂದು ವರ್ಗದ ಆಶಯವನ್ನು ಪ್ರತಿನಿಧಿಸುತ್ತಾನೆ. ಆ ವರ್ಗ ಯಾವುದು ಎನ್ನುವುದೇ ಮುಖ್ಯ.

ಕುಂವೀ ಕಥೆಗಳಲ್ಲಿನ ತೀರವೈನೋಧಿಕವಾದ ಹಾಗೂ ಅವರ ಬಹುತೇಕ ಕಥೆಗಳಲ್ಲಿರುವ ಏಕತಾನತೆಯೆ ಅವರ ಚರ್ವಿತಚರ್ವಣ ಧೋರಣೆಯನ್ನು ತೋರಿಸುತ್ತದೆ. ಕುಂವೀ ಕಥೆಗಳ ಆಂತರ್ಯದಲ್ಲಿ ಶೋಷಿತರ ಪರವಾಗಿ ಮಾತನಾಡುತ್ತಾರೆ ನಿಜ. ಆದರೆ ಎಷ್ಟೋ ಕಡೆ ಅವರು ಶೋಷಿತರ ಪರವಾಗಿ ಮಾತನಾಡುವ ರಭಸದಲ್ಲಿ ಸಾಮಾನ್ಯ ಔಚಿತ್ಯದ ಸಂಗತಿಯನ್ನು ಮರೆತು ಬಿಟ್ಟಿರುತ್ತಾರೆ. ಕಥೆಗಳನ್ನು ನಿರ್ಲಿಪ್ತವಾಗಿ ಓದಿದ ಮೇಲೆ ಅನೇಕ ಪ್ರಶ್ನೆಗಳು ಉದ್ಭವಿಸಿಬಿಡುತ್ತೇವೆ. ಉದಾಹರಣೆಗೆ ಶುಲ್ಕ ಕಥೆಯಲ್ಲಿ ಕಥೆಯ ಶೀರ್ಷಿಕೆ ಸೂಚಿಸುವ ಆಶಯ ಅಂತಹ ಸಮಾಜಮುಖಿಯಾದುದೇನೂ ಅಲ್ಲ. ಶುಲ್ಕ ಎಂದರೆ ತೆರಿಗೆ ಎಂದರ್ಥ. ಇಲ್ಲಿ ಅಶೋಕನಿಗೆ ನಿರೂಪಕ ಕೊಡುವ ಹಣ ತೆರಿಗೆಯೇ ? ನಾವು ತೆರಿಗೆಯನ್ನು ಪಾವತಿಸುವುದು ಸೌಲಭ್ಯವನ್ನು ಪಡೆದು ಕೊಂಡದ್ದಕ್ಕಾಗಿ ಮಾತ್ರ. ಉದಾಹರಣೆಗೆ : ಮನೆ

ತೆರಿಗೆ, ವಾಹನ ತೆರಿಗೆ ಇತ್ಯಾದಿ. ಆದರೆ ಕಥೆಯ ಒಟ್ಟು ಆಶಯ ತಾನೇ ಸ್ವತಃ ಓದಿಸಿ ಬೆಳೆಸಿದ ಹುಡುಗನಿಗೆ ತೆರಿಗೆ ಕಟ್ಟಬೇಕಾಯಿತೆ ? ಎನ್ನುವ ವ್ಯಂಗ್ಯ ಕಥೆಯಲ್ಲಿ ಎದ್ದು ಕಾಣುತ್ತದೆ. ಈ ಅಂಶ ಈ ಸಾಲುಗಳನ್ನು ಗಮನಿಸಿದರೆ ಸ್ಪಷ್ಟಗೊಳ್ಳುತ್ತದೆ. “ಮಾವ್ರೋ, ಲೆನಿನ್ ಅಂಥಹವರು ನಮ್ಮ ದೇಶದಲ್ಲಿ ಅವತರಿಸಬೇಕಾಗಿದೆ. ಅದಕ್ಕಾಗಿ ಎದುರುನೋಡುತ್ತಿದ್ದೇವೆ... ಮುಂತಾದವರ ಸೂಕ್ತಿಗಳನ್ನು ಧಾರಳವಾಗಿ ಬಳಸಿದ ಚೀನಾ, ರಷ್ಯಾ, ಕ್ಯೂಬಾ ಗೀಬಾ ಅಂತ ಅನೇಕ ದೃಷ್ಟಾಂತಗಳನ್ನು ಪೋಣಿಸಿದ. ಅವನು ತೆಲುಗು ಭಾಷೆ ಮಾತ್ರದಲ್ಲದೆ ಇಂಗ್ಲೀಷಿನಲ್ಲೂ ಪ್ರೌಢಿಮೆ ಸಾಧಿಸಿರುವುದು ಕಂಡು ಎಷ್ಟು ಹೆಮ್ಮೆಯಾಯಿತೋ ಅಷ್ಟೇ ಬೇಸರವಾಯಿತು ದಿಢೀರ್ ಸಮಾಜ ಬದಲಾವಣೆಯ ಹುಚ್ಚು ಹಿಡಿದಿರುವುದು ಕಂಡು”[೭] ಅಂದರೆ ಸಮಾಜದ ಬದಲಾವಣೆ ಬಯಸುವ ತೀವ್ರಗಾಮಿಗಳೆಲ್ಲ ಸರ್ಕಾರಿ ಸಂಬಳ ಪಡೆಯುವ ಕಥೆಗಾರಂಥವರಿಗೆ ಹುಚ್ಚು ಹಿಡಿದವರಂತೆ ಕಂಡರೆ ಆಶ್ಚರ್ಯವೇನಿಲ್ಲ. ಏಕೆಂದರೆ “ನೊಂದವರನೋವ ನೋಯದವರೆತ್ತಬಲ್ಲರು.”

‘ದೇವರ ಹೆಣ’ ಕಥೆಯಲ್ಲೂ ಕೂಡ ದೇವರನ್ನು ವ್ಯಂಗ್ಯಮಾಡುವುದು ಕಥೆಗಾರನ ಮೂಲ ಆಶಯವಾದರೂ ಅದು ಕಥೆಯೊಳಗೆ ಶಕ್ತವಾಗಿ ವ್ಯಕ್ತವಾಗುವುದಿಲ್ಲ. ಆದರೆ ಕೊಣ್ಣೆ ತನ್ನ ದೇವರಲ್ಲಿ, ಎತ್ತು ಸಾಯಲಿ ಎಂದು ಕೇಳುತ್ತಾನೆ. ಸತ್ತ ಎತ್ತನ್ನೆ ದೇವರು ಎಂದು ಭಾವಿಸುತ್ತಾನೆ. ಇದು ದೇವರನ್ನು ಕುರಿತ ವ್ಯಂಗ್ಯ ನಿಜ. ಆದರೆ ಒಟ್ಟು ಕಥೆಯ ಒಳಗೆ ಕೊಣಿ ಅಥವಾ ಆತನ ಸಮುದಾಯದ ಪಾತ್ರಗಳು ಯಾವ ತಿರಸ್ಕಾರವನ್ನು ತೋರುವುದಿಲ್ಲ. ಕಥೆಯನ್ನು ನಿರ್ವಹಿಸುವಾಗ ಕಥೆಗಾರನಿಗೆ ತುಂಬಾ ಎಚ್ಚರಿಕೆ ಇರಬೇಕಾಗುತ್ತದೆ. ಇದೆ ಕಥೆಯಲ್ಲಿ ಬೀಡಿ ಹಚ್ಚಲು ಕೊಣ್ಣೆ ಒಬ್ಬನ ಹತ್ತಿರ ದೀಪದ ಕಡ್ಡಿಯನ್ನು ಕೇಳುತ್ತಾನೆ ಆದರೆ ಕೊಣ್ಣೆಯ ಪುಣ್ಯಕ್ಕೆ ಆ ಪೊಟ್ಟಣದಲ್ಲಿ ಎರಡು ದೀಪದ ಕಡ್ಡಿಗಳಿದ್ದವು. ಆದರೆ ಅವುಗಳ ಪೈಕಿ ಒಂದಕ್ಕೆ ಮತ್ರ ಮದ್ದಿತ್ತು”[೨] ಇದು ಕಥೆ ಒದುತ್ತಿರುವಾಗಲೇ ಲೇಖಕ ಪ್ರಜ್ಞಾಪೂರ್ವಕವಾಗಿಯೇ ಬಳಸಿದ್ದಾನೆ ಎಂದು ನಮಗೆ ಅನಿಸಿಬಿಡುತ್ತದೆ. ಆದರೆ ಅವರ ಕುಬುಸ ಕಥೆ ನಾಗರಿಕ ಹಾಗೂ ಗ್ರಾಮ ಭಾರತದ ನಡುವಿನ ಸಂಘರ್ಷವನ್ನು ತುಂಬಾ

ಮನೋಜ್ಞವಾಗಿ ಹಿಡಿದಿಡುವ ಪ್ರಯತ್ನ ಮಾಡುತ್ತದೆ. ಈ ಕಥೆಯಲ್ಲಿ ಕುಂವೀ ಧೋರಣೆ ಪರಿಣಾಮಕಾರಿಯಾಗಿ ಚಿತ್ರಿತಗೊಂಡಿದೆ.

ಅಡಿಟಿಪ್ಪಣಿ:

೧. ಕುಂವೀ ಅವರ ಆಯ್ದ ಕಥೆಗಳು; ಕುಂ.ವೀರಭದ್ರಪ್ಪ; ಸಂವಹನ ಪ್ರಕಾಶನ, ಮೈಸೂರು [೧೯೯೬] ಪುಟ ೧೩

೨. .....ಮಣ್ಣೇ ಮೊದಲು; ಕುಂ.ವೀರಭದ್ರಪ್ಪ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, ಪುಟ ೫೯

ಅಧ್ಯಾಯ ೯

ಉಪ ಸಂಹಾರ

ಉಪಸಂಹಾರ

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಹಲವು ಕಾರಣಗಳಿಂದಾಗಿ 'ಸಣ್ಣ ಕಥೆ' ವಿಶಿಷ್ಟವಾದ, ವಿಭಿನ್ನವಾದ ವೈಶಿಷ್ಟಪೂರ್ಣವಾದ ನೆಲೆಗಳಿಂದ ಕೂಡಿದ ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದುನಿಂತಿದೆ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಅಥವಾ ದಲಿತ-ಬಂಡಾಯ ಎಂಬ ಎಲ್ಲಾ ಮಜಲುಗಳಲ್ಲಿಯು ತಮ್ಮದೇ ಆದ ಛಾಪನ್ನು ಮೂಡಿಸುತ್ತಾ ಬಂದಿದೆ ಈ ಎಲ್ಲಾ ಮಜಲುಗಳಲ್ಲಿಯೂ ಸಣ್ಣಕಥೆ ಸಾಹಿತ್ಯ ಪ್ರಕಾರ ವಸ್ತು, ಭಾಷೆ, ತಂತ್ರ, ಧೋರಣೆ ಎಲ್ಲದರಲ್ಲೂ ಭಿನ್ನತೆಯನ್ನು ರೂಡಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಳುವಳಿಯಂದೇ ಬಿಂಬಿತವಾಗಿರುವ ದಲಿತ-ಬಂಡಾಯ ಸಾಹಿತ್ಯ ಸ್ಥರದಲ್ಲಿ ದೇವನೂರು ಮಹಾದೇವ, ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಮೊಗಳ್ಳಿ ಗಣೇಶ ಹಲವಾರು ಲೇಖಕರು ಸಣ್ಣಕಥೆಗಳನ್ನು ರಚಿಸಿದ್ದಾರೆ. ಇವರುಗಳಲ್ಲಿ ಕುಂ.ವೀರಭದ್ರಪ್ಪ ಅವರು ಒಬ್ಬರು.

ಇಪ್ಪತ್ತನೇ ಶತಮಾನದ ಎಪ್ಪತ್ತರ ದಶಕದಿಂದೀಚೆಗೆ ಚಾರಿತ್ರಿಕ ಅನಿವಾರ್ಯವೆಂಬಂತೆ ಕನ್ನಡ ನೆಲದಲ್ಲಿ ಮೂಡಿಬಂದ ದಲಿತ-ಬಂಡಾಯ ಸಾಹಿತ್ಯಕ ಚಳುವಳಿಯು ಸಮುದಾಯವನ್ನು ಎಚ್ಚರಿಸುವಂತೆ, ಜಾಗೃತಗೊಳಿಸುವಂಥ ಗುಣವನ್ನು ಹೊಂದಿದೆ. ಈ ಅಂಶವನ್ನು ದೃಷ್ಟಿಯಲ್ಲಿರಿಸಿಕೊಂಡು ಕುಂವೀ ಅವರು ತಮ್ಮ ಕಥೆಗಳ ವಸ್ತುವನ್ನು ಆರಿಸಿಕೊಂಡರು.

ಕುಂವೀ ಅವರ ಕಥೆಗಳ ಬಗೆಗೆ ಅಧ್ಯಯನ ನಡೆದಿರುವುದು ಬಹಳ ವಿರಳ. ಹಾಗಾಗಿ ಕುಂವೀ ಅವರ ಕಥೆಗಳನ್ನು ಅಧ್ಯಯನ ಮಾಡಲು ನಾನು ಆಯ್ಕೆ ಮಾಡಿಕೊಂಡೆ. ಅಧ್ಯಯನಕ್ಕೆ ಹಲವಾರು ಸೀಮಿತ ಚೌಕಟ್ಟುಗಳು ಇರುವುದರಿಂದ ಎಲ್ಲಾ ಕಥೆಗಳನ್ನು ಅಧ್ಯಯನ ಮಾಡಲು ಸಾಧ್ಯವಾಗದೆ ಕೇವಲ ಆರು ಕಥೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದೇನೆ.

ಆ ಆರು ಕಥೆಗಳಲ್ಲಿ ಕಂಡುಬರುವ ವಸ್ತು ಹೆಚ್ಚು–ಕಡಿಮೆ ಒಂದೇ ಆಗಿದೆ ಎಂಬುದು ನನ್ನ ಆಶಯ. ಅದೆಂದರೆ ಸಂಘರ್ಷದ ಹಿನ್ನೆಲೆಯಲ್ಲಿ ರಚನೆಗೊಂಡ ಕಥೆಗಳಾಗಿವೆ. ಈ ನಿಬಂಧದ ಮೊದಲ ಅಧ್ಯಾಯ 'ಉದ್ದೇಶ ಮತ್ತು ವ್ಯಾಪ್ತಿ'ಯಲ್ಲಿ ಇದರ ಬಗ್ಗೆ ವಿವರಣೆ ನೀಡಲಾಗಿದೆ.

ಬರಹಗಾರನೊಬ್ಬನಿಗೆ ಬರವಣಿಗೆಗೆ ಬೇಕಾದ ಸಾಮಾಗ್ರಿ ಸಿಗುವುದು ಆತನ ಜೀವನಾನುಭವಗಳ ಮೂಲಕವೇ ಆಗಿದೆ. ಹಾಗ್ಗಿ ಲೇಖಕರ ಜೀವನ ಮತ್ತು ಸಾಧನೆಯ ವಿವರವನ್ನು ಕುರಿತು ತಿಳಿದುಕೊಳ್ಳಬೇಕು. ಕುಂವೀ ಅವರು ಬೆಳೆದ ಪರಿಸರ, ಪ್ರಭಾವವನ್ನು ತಿಳಿಸುವುದಕ್ಕಾಗಿ ಎರಡನೇ ಅಧ್ಯಾಯದಲ್ಲಿ 'ಕುಂವೀ ಅವರ ಬದುಕು ಮತ್ತು ಬರಹ' ಎಂಬ ಶೀರ್ಷಿಕೆಯಡಿಯಲ್ಲಿ ಸವಿವರವಾಗಿ ನೀಡಲಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಬೇರೆ ಬೇರೆ ಸಾಹಿತ್ಯ ಪ್ರಕಾರಗಳು ಹುಟ್ಟಿ ಬೆಳೆದು ಬಂದಿವೆ. ಹಾಗಾಗಿ ಕನ್ನಡ ಸಣ್ಣಕಥಾ ಸಾಹಿತ್ಯ ಬೆಳೆದುಬಂದ ಹಾದಿಯನ್ನು ತಿಳಿಸುವುದಕ್ಕಾಗಿ 'ಕನ್ನಡ ಸಣ್ಣಕಥಾ ಸಾಹಿತ್ಯ ಬೆಳೆದುಬಂದ ಮಾರ್ಗ' ಎಂಬ ಶೀರ್ಷಿಕೆಯಡಿಯಲ್ಲಿ ಮೂರನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಆಯ್ಕೆ ಮಾಡಿಕೊಂಡಿರುವ 'ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ', 'ದೇವರ ಹೆಣ', 'ಭಗವತಿ ಕಾಡು', 'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ', 'ಶುಲ್ಕ' ಹಾಗೂ 'ಕುಬುಸ' ಎಂಬ ಕಥೆಗಳ ವಸ್ತುವನ್ನು ಸಂಕ್ಷಿಪ್ತವಾಗಿ ಅವಲೋಕಿಸಿ ನಾಲ್ಕನೇ ಅಧ್ಯಾಯದಲ್ಲಿ 'ಆಯ್ದ ಕಥೆಗಳು – ಒಂದು ಪಕ್ಷಿನೋಟ ಎಂಬುದರಲ್ಲಿ ನಿರೂಪಿಸಲಾಗಿದೆ.

ಕುಂವೀ ಅವರ ಹೆಚ್ಚು ಕಥೆಗಳು ಜಾತಿ, ವರ್ಗ, ಆರ್ಥಿಕ ಸಂಘರ್ಷ ಹಾಗೂ ಸಂಪ್ರದಾಯ ಹಾಗೂ ಆಧುನಿಕತೆಗಳ ನಡುವಿನ ಸಂಘರ್ಷಗಳಿಂದ ಕೂಡಿದ್ದು, ಶೋಷಿತರ

ಮೇಲೆ ದೌರ್ಜನ್ಯವಾಗುತ್ತಿರುವ ವಸ್ತುವನ್ನೇ ಹೊಂದಿವೆ. ಹಾಗಾಗಿ ಅಧ್ಯಾಯ ಐದರಲ್ಲಿ 'ಜಾತಿ ಮತ್ತು ವರ್ಗ ಸಂಘರ್ಷ' ಎಂಬ ಶೀರ್ಷಿಕೆಯಡಿ ಆಯ್ದ ಕಥೆಗಳಲ್ಲಿ ಸಂಘರ್ಷದ ಚಿತ್ರಣವನ್ನು ಅಧ್ಯಯನಮಾಡಲಾಗಿದೆ.

ಆಯ್ಕೆ ಮಾಡಿಕೊಂಡಿರುವ ಕಥೆಗಳಲ್ಲಿ ಮಹಿಳೆಯರ ಸ್ಥಾನಮಾನ, ನೋವು-ನಲಿವುಗಳ ಬಗ್ಗೆ ಅಧ್ಯಾಯ ಆರರಲ್ಲಿ 'ಮಹಿಳಾ ಪಾತ್ರ ಚಿತ್ರಣ' ಎಂಬ ಶೀರ್ಷಿಕೆಯಡಿ ವಿವರಿಸಲಾಗಿದೆ.

ಕುಂವೀ ಅವರ ಕಥೆಗಳಲ್ಲಿನ ಭಾಷೆಗೆ ಶೃಂಗಾರದ ಸೋಗಿಲ್ಲವೆಂಬುದು ನಿಜ. ಆದರೆ ಅವುಗಳಿಗೆ ಗ್ರಾಮ್ಯ ಸೊಗಡಿನೊಂದಿಗೆ ನೇರ ಎದೆಗೆ ತಾಗುವ ನಿಷ್ಠುರ ಗುಣವಿದೆ ಎಂಬುದು ವಾಸ್ತವ. ನೂರಾರು ವರ್ಷಗಳಿಂದ ತುಳಿತಕ್ಕೆ ಒಳಗಾಗಿ ಶೋಷಣೆ ಅನುಭವಿಸುತ್ತಿರುವ ಜನರ ನೋವಿನ, ಸಿಟ್ಟಿನ, ತಳಮಳದ, ಅಸಹಾಯಕತೆಯ ನಿಟ್ಟುಸಿರಿದೆ. ಬದುಕಬೇಕು ಎಂಬ ತುಡಿತ ಹಾಗೂ ಕಾಳಜಿಗಳಿವೆ. ನಮ್ಮ ಬಹುಮುಖ ಸಮಾಜಕ್ಕೆ ಆತ್ಮ ಎಂಬುದೊಂದಿದ್ದರೆ. ಆ ಆತ್ಮಕ್ಕೆ ಆಘಾತವುಂಟುಮಾಡಬಲ್ಲಂಥ ಶಕ್ತಿ ಕುಂವೀ ಅವರ ಕಥೆಗಳಲ್ಲಿ ಬಳಕೆಯಾಗಿರುವ ಭಾಷೆ ಮತ್ತು ತಂತ್ರಕ್ಕಿದೆ. ಈ ಅಂಶವನ್ನು ಅಧ್ಯಾಯ ಏಳು 'ಅಭಿವ್ಯಕ್ತಿ ವಿಧಾನ'ದಲ್ಲಿ ಅಧ್ಯಯನ ಮಾಡಲಾಗಿದೆ.

ಯಾವುದೇ ಲೇಖಕ ಒಂದು ಕೃತಿ ರಚಿಸಬೇಕಾದರೆ ಅದರ ಹಿಂದೆ ಆತ ತನ್ನದೇ ಆದ ಧೋರಣೆ ಹೊಂದಿರುತ್ತಾನೆ. ಹಾಗೆಯೇ ಕುಂವೀ ಅವರಿಗೆ ಶೋಷಿತರ ಬದುಕಿನ ಶೋಚನೀಯ ಚಿತ್ರಣವನ್ನು ನೀಡುವುದರೊಡನೆ ಅವರಲ್ಲಿ ಜಾಗೃತ ಭಾವ ಮೂಡುವಂತೆ ಮಾಡುವ ಧೋರಣೆ ಇದ್ದಂತೆ ತೋರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಧ್ಯಾಯ ಎಂಟು 'ಲೇಖಕರ ಧೋರಣೆ' ಎಂಬ ಭಾಗದಲ್ಲಿ ಅಧ್ಯಾಯನ ಮಾಡಲಾಗಿದೆ.

ಈ ನಿಬಂಧ ರಚನೆಯ ಒಟ್ಟು ಫಲಿತಗಳನ್ನು ಅಧ್ಯಾಯ ಒಂಭತ್ತು 'ಉಪ ಸಂಹಾರ' ಎಂಬಲ್ಲಿ ನೀಡಲಾಗಿದೆ. ನಿಬಂಧದ ಕೊನೆಗೆ ಅನುಬಂಧವಲ್ಲಿ ಕಥೆಗಾರ ಕುಂವೀರಭದ್ರಪ್ಪ ಅವರ ಭಾವ ಚಿತ್ರ ಹಾಗೂ ಅವರ ಒಂದು ಕಥಾ ಸಂಕಲನ 'ಭಳಾರೆ ವಿಚಿತ್ರಂ' ಮುಖಪುಟದ ವಿಶಿಷ್ಟ ಚಿತ್ರವನ್ನು ಹಾಕಲಾಗಿದ್ದು ಈ ನಿಬಂಧ ರಚನೆಯಲ್ಲಿ ಬಳಸಿಕೊಂಡ ಗ್ರಂಥಗಳ ಮಾಹಿತಿಯನ್ನು ನೀಡಿದ್ದೇನೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ನಾನು ಕಂಡುಕೊಂಡ ತತ್ಯವೇನೆಂದರೆ ಕುಂವೀ ಶೋಷಿತರ ಪರವಾಗಿರುವ, ಜಾತಿಯತೆ ಹಾಗೂ ಅಸಮಾನತೆಯ ವಿರುದ್ಧದ ಧ್ವನಿಯಾಗಿದ್ದಾರೆಂಬುದು ಸ್ಪಷ್ಟ ಅಂಶ.

ಅನುಬಂಧ



ಕುಂ. ವೀರಭದ್ರಪ್ಪ



"ಇದು ಭಳಾರೆ ವಿಚಿತ್ರಂ"



[ಭಳಾರೆ ವಿಚಿತ್ರಂ ಕಥಾ ಸಂಕಲನದ ಮುಖಪುಟ]

ಗ್ರಂಥ ಋಣ

ಕೃತಿ	ಕೃತಿಕಾರ	ಪ್ರಕಾಶನ	ವರ್ಷ
ಕುಂವೀ ಅವರ ಕಥಾ ಸಾಹಿತ್ಯ	(ಸಂ) ಗಿರಡ್ಡಿ ಗೋವಿಂದರಾಜ	ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೧
ಕನ್ನಡ ಕಥನ ಸಾಹಿತ್ಯ – ಸಣ್ಣ ಕಥೆ	ಜಿ.ಎಸ್.ಆಮೂರ	ಪ್ರಿಯದರ್ಶಿನಿ, ಬೆಂಗಳೂರು	೨೦೦೩
ಕಥಾ ಕಥನ	ಡಾ|| ಎಲ್.ಹನುಮಂತಯ್ಯ	ಸಿ.ವಿ.ಜಿ, ಬೆಂಗಳೂರು	೧೯೯೯
ಯುಗಧರ್ಮ ಹಾಗೂ ಸಾಹಿತ್ಯ ದರ್ಶನ	ಕೀರ್ತಿನಾಥ ಕುರ್ತುಕೋಟಿ	ಮನೋಹರ ಗ್ರಂಥಮಾಲ, ಧಾರವಾಡ	೧೯೯೦
ಕನ್ನಡ ಸಣ್ಣಕಥೆ ಹೆಜ್ಜೆ–ಹಾದಿ	ಸತ್ಯನಾರಾಯಣ ಮಲ್ಲಿ ಪಟ್ಟಣ	ಸಂಕಲನ, ಮೈಸೂರು	೧೯೮೫
ರಾಯಲ್ ಸೀಮೆ	ಕುಂ.ವೀರಭದ್ರಪ್ಪ	ಅಂಕಿತ ಪುಸ್ತಕ, ಬೆಂಗಳೂರು	೨೦೦೮
ಕುಂವೀ ಅವರ ಆಯ್ದ ಕಥೆಗಳು	ಕುಂ.ವೀರಭದ್ರಪ್ಪ	ಸಂವಹನ, ಮೈಸೂರು	೧೯೯೬
ಭಳಾರೆ ವಿಚಿತ್ರಂ	ಕುಂ.ವೀರಭದ್ರಪ್ಪ	ಮನೋಹರ ಗ್ರಂಥಮಾಲೆ, ಧಾರವಾಡ	೨೦೦೨
...ಮಣ್ಣೇ ಮೊದಲು	ಕುಂ.ವೀರಭದ್ರಪ್ಪ	ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು	೨೦೦೭
ಕೂಳೆ	ಕುಂ.ವೀರಭದ್ರಪ್ಪ	ಸುಮುಖ, ಬೆಂಗಳೂರು	೨೦೦೭
ಹೊಸಗನ್ನಡ ಸಾಹಿತ್ಯ ಚರಿತ್ರೆ	ಎಲ್.ಎಸ್.ಶೇಷಗಿರಿರಾವ್	ಅಂಕಿತ ಪುಸ್ತಕ, ಬೆಂಗಳೂರು	೨೦೦೭
ಬರಿ ಕಥೆಯಲ್ಲೋ ಅಣ್ಣಾ	ಕುಂ.ವೀರಭದ್ರಪ್ಪ		೨೦೦೪
ಷಷ್ಠಿ ಸಂಪದ	ರಾಗೌ		
ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ		ಅಂಕಿತ ಪುಸ್ತಕ, ಬೆಂಗಳೂರು	೨೦೦೪